Mr. SPEAKER.—No, it is in Hirekerur in Dharwar District.

Sri A. BHEEMAPPA NAIK (Challakere).—Even if the deaths have occurred somewhere else, members will be anxious to know the state of health in that place. It is not necessary that deaths should happen in Bangalore alone. There is even a proposal that this House should be adjourned forthwith. When that is the position, it is better that the request of Sri Deenadayalu Naidu is acceeded to.

Mr. SPEAKER.—The question is not of adjourning the House, but the question is about raising an half hour discussion on the Short Notice question which was discussed here yesterday.

Sri A. BHEEMAPPA NAIK.—Sir, top priority should be given to this question and it should be taken up and discussed. Such a discussion would be helpful even to the Health Minister to make immediate arrangements. He will know the views of the House.

Sri G. DUGGAPPA (Chitaldrug—S. C.).—The question may be taken up today evening.

Mr. SPEAKER.—I have been saying that it may be taken up tomorrow provided I allow it. I have not allowed it as yet.

Sri G. DUGGAPPA.—In view of the public importance and urgency of the matter, we request the Chair to take up this question after tea today.

Mr. SPEAKER.—That cannot be done. It can only be taken up at the end of the day provided I allow it.

BUDGET FOR 1957-58 GENERAL DISCUSSION.

(Debate continued).

ಶ್ರೀ ಎ. ಆರ್. ಪಂಚಗಾವಿ (ಗೋಕಾಕ್-II).—ಅಧ್ಯಕ್ಷರೆ, ಈ ವರ್ಷದ ಆಯವ್ಯಯದ ಮುಂಗಡ ಪತ್ರದ ಬಗ್ಗೆ ಚರ್ಚೆ ಮಾಡುವಾಗ ನಾವು ಈಗಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸದ್ಯದ ಪರಿಸ್ಥಿತಿಯಲ್ಲಿ ರಾಜ್ಯ ಪುನರ್ನಿರ್ಮಾಣವಾದಮೇಲೆ ಯಾವ ಯಾವ ಸಮಸ್ಯೆಗಳ ಮೇಲೆ ಏನೇನು ಅಭಿಪ್ರಾಯಗಳು ಹೊಸದಾಗಿ ಬಂದಿರುವುವೋ ಅವುಗಳೆಲ್ಲವೂ ಇನ್ನೂ ಪೂರ್ಣ ಪರಿಸ್ಥಿತಿಯನ್ನು ಹೊಂದದೆ ಇರುವಾಗ, ನಮ್ಮ ಆರ್ಥಿಕಪರಿಸ್ಥಿತಿಯಿಂದ ಪೂರ್ಣಲಾಭ ಪಡೆದುಕೊಳ್ಳುವ ಪರಿಸ್ಥಿತಿ ಇನ್ನೂ ನಮಗೆ ಉಂಟಾಗದಿರುವಾಗ, ಇದ್ದುದರಲ್ಲಿ ಉತ್ತಮವಾದ ಹಣಕಾಸಿನ ಮುಂಗಡ ಪತ್ರವನ್ನು ಅರ್ಥಸಚಿವರು ಸಿದ್ಧಪಡಿಸಿರುವುದರಿಂದ ನನಗೆ ಬಹಳ ಸಂತೋಷವಾಗಿದೆ. ಇಷ್ಟೊಂದು ಅಡ್ಡಿ ಆತಂಕಗಳು ಇದ್ದರೂ ಕೂಡ ಅನೇಕ ಹೊಸ ಯೋಜನೆಗಳನ್ನು ಸಿದ್ಧಪಡಿಸಿ ಅವುಗಳನ್ನು ಆದಷ್ಟು ಜಾಗ್ರತೆ ಜಾರಿಗೆ ತರುವ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿರುವುದು ಅಭಿನಂದನೀಯವಾಗಿದೆ. ಈ ಪರಿಸ್ಥಿತಿಯಲ್ಲಿ ಕೆಲವೊಂದು ದೃಷ್ಟಿಯಿಂದ ಅನೇಕರು ಮುಂಗಡ ಪತ್ರದ ಮೇಲೆ ಟೀಕೆ ಮಾಡಿದ್ದಾರೆ. ಆದರೆ ನಾನು ಈ ಮುಂಗಡ ಪತ್ರದಿಂದ ನಮ್ಮ ಹಳ್ಳಿಗಳ ಮೇಲೆ, ಹಳ್ಳಿಯ ಒಕ್ಕಲಿಗರ ಮೇಲೆ ಯಾವ ತರಹ ಪರಿಣಾಮವಾಗಿದೆಯೆಂಬುದನ್ನು ನೋಡಲಿಚ್ಛಿಸುತ್ತೇನೆ. ಮುಂಬೈ ಕರ್ಣಾಟಕದಿಂದ ಬಂದವರು ಹೆಚ್ಚಿಗೆ ಹಿಂದಿನಿಂದಲೂ ಒಕ್ಕಲುತನದ ಉತ್ಪನ್ನವನ್ನು ಅವಲಂಬಿಸಿದ್ದಾರೆ. ಒಕ್ಕಲುತನದ ಉತ್ಪನ್ನದ ಪರಿಸ್ಥಿತಿ ಯಾವ ರೀತಿ ಇದೆಯೆಂದು ಎಲ್ಲಾ ಭಾಗಗಳಲ್ಲಿಯೂ ವಿಚಾರಿಸುವುದು ಯೋಗ್ಯ. ಮುಂಬೈ ಕರ್ಣಾಟಕದಲ್ಲಿ ಭೂಕಂದಾಯ ಉಳಿದ ಭಾಗಗಳಿಗಿಂತ ಬಹಳ ಹೆಚ್ಚಾಗಿದೆ. ಈ ಪರಿಸ್ಥಿತಿಯಲ್ಲಿ ಮುಂಬೈ ಕರ್ಣಾಟಕದ ಬಗ್ಗೆ ಸ್ವಲ್ಪಮಟ್ಟಿಗೆ ವಿಚಾರಿಸಿ ಕರಹಾಕಿದರೆ ನೆಟ್ಟಗಾಗುತ್ತದೆಂದು ನನ್ನ ಅಭಿಪ್ರಾಯವಿದೆ. ಆದರೆ ಇಷ್ಟೊಂದು ಅವಸರ ಪರಿಸ್ಥಿತಿಯಲ್ಲ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದೇ ಭಾಗದ ಮೇಲೆ ಹೆಚ್ಚಿಗೆ ಕರಭಾರ ಬೀಳದಂತೆ ನೋಡಿಕೊಳ್ಳುವುದು, ಮತ್ತು ಎಲ್ಲಾ ಭಾಗಗಳಲ್ಲೂ ಒಂದು ಸಮನ್ವಯವಾದ ಕರಭಾರ ಹಾಕುವುದು ಆವಶ್ಯಕ. ಆ ಪ್ರಕಾರ ಮುಂದೆಯೂ ಯೋಚನೆ ಮಾಡುವ ಅಭಿಪ್ರಾಯವಿದೆ. ಅದನ್ನು ನಮ್ಮ ಸರ್ಕಾರದವರು ಜಾರಿ ಮಾಡಿಕೊಂಡು ಹೋಗಬೇಕೆಂದು ನನ್ನ ಇಚ್ಛೆ. ಹಣಕಾಸಿನ ಮಂತ್ರಿಗಳು ಒಂದು ಸಂಗತಿ ಬಗ್ಗೆ ಒಂದು ಆಶಾದಾಯಕವಾದ ಭರವಸೆಯನ್ನು ಕೊಟ್ಟಿದ್ದಾರೆ ; ರಾಜ್ಯದ ಎಲ್ಲಾ ಭಾಗಗಳಲ್ಲೂ ನೀರಾವರಿ ವಿಷಯದಲ್ಲಿ ಒಂದು ಸಮನ್ವಯವಾದ ಕಾಯಿದೆಯನ್ನು ಮಾಡುವುದು ಅತ್ಯಂತ ಆವಶ್ಯಕವೆಂದು ಹೇಳಿ, ಆ ಬಗ್ಗೆ ಹಣಕಾಸಿನ ಮಂತ್ರಿಗಳು ಶೀಘ್ರವಾಗಿ ಒಂದು ನಿಯಮವನ್ನು ಮಾಡುತ್ತಾರೆಂದು ಭರವಸೆಯನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಘಟಪ್ರಭಾ ನೀರಾವರಿ ಯೋಜನೆಯ ಪರಿಸ್ಥಿತಿಯನ್ನು ನೋಡಿದರೆ, ನಮ್ಮಲ್ಲಿ ನೀರಾವರಿ ಸಾಕಷ್ಟು ಪ್ರಚಾರವಾಗಿದೆ. ಆದರಿಂದ ಲಾಭ ಬರುವುದಕ್ಕೆ ಬಹಳ ಅಡಚಣೆಗಳುಂಟು. ನೀರಾವರಿ ಕರವೂ ಬಹಳ ಹೆಚ್ಚಾಗಿರುವುದರಿಂದ, ನಿಯಮಗಳು ಬಹಳ ಬಿಗಿಯಾಗಿರುವಂತೆ ಮಾಡಿದ್ದರಿಂದ ದಂಡ ಬಹಳ ಹೆಚ್ಚಾಗುತ್ತದೆ. ರೈತರಿಗೆ ನೀರಾವರಿ ದಂಡ ಬಹಳ ಭಾರವಾಗಿದೆ. ಘಟಪ್ರಭಾ ನೀರಾವರಿಯಿಂದ ಕರ ಬಹಳ ಹೆಚ್ಚಾಗಿರುವ ಕಾರಣ ಅಲ್ಲಿಯ ಜನರು ಇದರ ಬಗ್ಗೆ ಒಂದುತರಹ ವಾದವನ್ನು ಮೊದಲನಿಂದಲೂ ಮಾಡುತ್ತಾ ಬಂದಿದ್ದಾರೆ. ಈ ಆಡಳಿತದ ಕರ್ತವ್ಯನಿರ್ವಹಣೆ ಸ್ವಲ್ಪ ಸಡಿಲವಾಗಬೇಕು, ಮತ್ತು ಆ ಬಗ್ಗೆ ರೈತರಿಗೆ ದಂಡ ಬೀಳದಂತೆ ಮತ್ತು ಸರ್ಕಾರದವರು ಹೆಚ್ಚಿಗೆ ಅವರ ಮೇಲೆ ದಂಡ ಹಾಕದಂತೆ ವ್ಯವಸ್ಥೆ ಮಾಡಿದರೆ ಬಹಳ ಉತ್ತಮವಾಗುತ್ತದೆ. ಅದೂ ಅಲ್ಲದೆ ಈಗ ಹೊಸ ಹೊಸದಾಗಿ ಇರ್ರಿಗೇಷನ್ನಿಗೆ ಬಂದಿರುವ ಪ್ರದೇಶಗಳಲ್ಲಿ ದಂಡ ದ್ವಿಗುಣವಾಗಿ ಪರಿಣಮಿಸುವದರಿಂದ ಈಗ ರೈತರು ನೀರಾವರಿಯಿಂದ ಸಾಕಷ್ಟು ಲಾಭವನ್ನು ಪಡೆಯುತ್ತಿಲ್ಲ. ಆದ್ದರಿಂದ ಸರ್ಕಾರದವರು ಈ ಕಷ್ಟ ಸಮಸ್ಯೆಗಳನ್ನು ಬಗೆಹರಿಸುವುದಲ್ಲದೆ ಈ ನೀರಾವರಿಯಿಂದ

(ಶ್ರೀ ಎ. ಆರ್. ಪಂಚಗಾವಿ).

ಹೆಚ್ಚು ಲಾಭವನ್ನು ಎಲ್ಲರೂ ಪಡೆಯುವಂತೆ ಹೆಚ್ಚಿಗೆ ಪ್ರಚಾರವಾಡಬೇಕು. ಎಲ್ಲಾ ರೈತರೂ ಲಾಭ ಪಡೆಯುಬೇಕೆಂಬುದನ್ನು ಅವರ ಮನಸ್ಸಿನಲ್ಲಿ ಪ್ರತಿಬಿಂಬಿಸಬೇಕು. ಜಮೀನಿನ ಮೇಲೆ ಸಾಲ ಕೊಡುವ ಬಗ್ಗೆ ಒಂದು ನಿಯಮಾವಳಿಯನ್ನು ನಿರ್ಧಾರ ಮಾಡುವುದು ಒಳ್ಳೆಯದೆಂದು ನನಗೆ ಕಾಣಿಸುತ್ತದೆ. ಇದಕ್ಕಾಗಿ ಘಟಪ್ರಭಾ ಯೋಜನೆಯಲ್ಲಿ ಆದಷ್ಟು ಕೂಡಲೇ ಕಾರ್ಯಕ್ರಮ ಕೈಗೊಳ್ಳುವರೆಂದು ನಾನು ನಂಬಿದ್ದೇನೆ.

ವಿದ್ಯುಚ್ಛಕ್ತಿಯ ಪೂರೈಕೆಯ ಬಗ್ಗೆ ನಮ್ಮ ಮೈಸೂರು ಸಂಸ್ಥಾನ ವೈಶಿಷ್ಟ್ಯತೆಯಿಂದ ಕೂಡಿದೆ ಎನ್ನಬಹುದು. ಇಲ್ಲಿರುವ ಸೌಕರ್ಯಗಳು ಉಳಿದ ಯಾವ ಪ್ರಾಂತಗಳಲ್ಲೂ ಇಲ್ಲ. ಇದರಿಂದ ಪೂರ್ಣ ಲಾಭವನ್ನು ಪಡೆಯಬಹುದು. ನೀರಾವರಿ ಮತ್ತು ಇತರ ಕೈಗಾರಿಕೆಗಳಿಗೆ ಇದರ ಲಾಭ ಸಿಕ್ಕಬೇಕು. ನಮ್ಮ ಹಳ್ಳಿಗಳು ಬೆಳೆದರೆ, ನಮ್ಮ ರಾಜ್ಯಕ್ಕೆ ಕಲ್ಯಾಣ. ಆದರಿಂದ ಹಳ್ಳಿಗಳು ಸಾಕಷ್ಟು ಬೆಳೆವಣಿಗೆಯಾಗಲಿ. ಇದರಿಂದ ಯಾವ ಒಂದು ವಿಶಿಷ್ಟ ತರಹ ಸಮಾಜವನ್ನು ನಿರ್ಮಾಣ ಮಾಡಬೇಕೆಂದು ಹೇಳುತ್ತಿದ್ದೇವೋ ಅದು ಸಾಧ್ಯವಾಗಲಿ ಎಂದು ಆಶಿಸುತ್ತೇನೆ. ಸಮತಾವಾದ ಸಮಾಜವನ್ನು ನಿರ್ಮಾಣ ಮಾಡಬೇಕಾದರೆ, ಹಳ್ಳಿಗಳನ್ನು ಅಲಕ್ಷ್ಯಮಾಡಿ ಷಹರುಗಳನ್ನು ಹೆಚ್ಚಿಸಿ ಬೆಳಸಿದರೆ ಸಾಲದು. ಶೇಕಡ ತೊಂಬತ್ತುಮಂದಿ ಹಳ್ಳಿಗಳಲ್ಲಿದ್ದಾರೆ. ಹಳ್ಳಿಗಳ ಕಡೆ ಹೆಚ್ಚು ಲಕ್ಷ್ಯವಿಡಬೇಕಾದುದು ಆವಶ್ಯಕ. ಹಳ್ಳಿಗಳನ್ನು ಅಲಕ್ಷ್ಯ ಮಾಡಿದರೆ ದೇಶದ ಬೆಳವಣಿಗೆಗೆ ಒಂದು ದೊಡ್ಡ ಅಂಗವೇ ಇಲ್ಲದಂತಾಗುತ್ತದೆ. ಆದಷ್ಟು ಆ ಕಡೆ ಲಕ್ಷ್ಯ ಕೊಟ್ಟು ಸರ್ಕಾರ ಆಡಳಿತ ನಡೆಸಿಕೊಂಡು ಹೋಗಬೇಕು. ಆ ಬಗ್ಗೆ ಸಾಕಷ್ಟು ಈ ಬಡ್ಜೆಟ್‌ನಲ್ಲಿ ಲಕ್ಷ್ಯವಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಹೆಚ್ಚು ಗಮನ ಕೊಡಬೇಕಾಗಿದೆ. ಮುಖ್ಯವಾಗಿ ಮೊದಲು ಉದ್ಯೋಗಗಳನ್ನು ಕಲ್ಪಿಸಬೇಕು. ದೇಶದ ಆರ್ಥಿಕ ಉನ್ನತಿಯನ್ನು ಆದಷ್ಟು ಸಾಧಿಸಬೇಕು ಎಂದು ದೊಡ್ಡ ದೊಡ್ಡ ಕಬ್ಬಿಣದ ಕಾರ್ಖಾನೆ, ಉಕ್ಕಿನ ಕಾರ್ಖಾನೆ ಸ್ಥಾಪಿಸುತ್ತಿರುವಂತೆ ಹಳ್ಳಿಗಳ ಉನ್ನತಿಯ ವಿಚಾರದಲ್ಲಿ ಸಾಕಷ್ಟು ಗಮನ ಕೊಟ್ಟು ಹಣ ಒದಗಿಸುವುದನ್ನು ಲಕ್ಷ್ಯದಲ್ಲಿಡಬೇಕು.

ಈಗ ನಮ್ಮ ದೇಶದಲ್ಲಿ ದೊಡ್ಡ ಕ್ರಾಂತಿ ನಡೆಯುತ್ತಿದೆ. ಹಳ್ಳಿಗಳ ರಾಜ್ಯ, ಗ್ರಾಮರಾಜ್ಯ ಎಂದು ಮಹಾತ್ಮ ಗಾಂಧೀಜೀಯವರು ಹೇಳುತ್ತಿದ್ದರು. ಆ ಗ್ರಾಮರಾಜ್ಯದ ಬಗ್ಗೆ ಒಂದು ದೊಡ್ಡ ಕೆಲಸ ನಡೆದಿದೆ. ಶ್ರೀ ವಿನೋಬಾಭಾವೆಯವರು ಭೂದಾನ ಚಳವಳಿಯನ್ನು ಪ್ರಾರಂಭಿಸಿ ಅನೇಕರಿಂದ ಭೂಮಿಯನ್ನು ಪಡೆದಿದ್ದಾರೆ. ಕರ್ಣಾಟಕವೂ ಸಹ ತನ್ನ ಕರ್ತವ್ಯವನ್ನು ಆ ವಿಚಾರದಲ್ಲಿ ನಿರ್ವಹಿಸುತ್ತಿದೆ. ಇದರ ಬಗ್ಗೆ ಸರ್ಕಾರ ಒಂದು ಯೋಜನೆಯನ್ನು ಹಾಕಿಕೊಳ್ಳುವುದು ಆವಶ್ಯಕ. ಒಳ್ಳೆಯ ಆದರ್ಶವನ್ನಿಟ್ಟುಕೊಂಡು ಆಡಳಿತ ನಡೆಸಿಕೊಂಡು ಬರಬೇಕು. ಅತ್ಯಂತ ಸುಲಭವಾದ ರೀತಿಯಲ್ಲಿ ಯಾವ ತರಹ ಜನರಿಗೂ ಮನಸ್ತಾಪ ಬಾರದಂತೆ ಅತ್ಯಂತ ಪ್ರೇಮದಿಂದ ಸಮಸ್ಯೆಯನ್ನು ಬಿಡಿಸಿ ಯೋಗ್ಯ ವಾತಾವರಣ, ಯೋಗ್ಯ ಸೌಕರ್ಯ ಕಲ್ಪಿಸುವುದು ಆಡಳಿತ ನಡೆಸುವವರ ಕರ್ತವ್ಯವೆಂಬುವನ್ನು ಲಕ್ಷ್ಯದಲ್ಲಿಡಬೇಕು. ಗ್ರಾಮದಾನಿ ಹಳ್ಳಿಗಳಲ್ಲಿನ ಜನರು ಗ್ರಾಮೋದ್ಯೋಗ ಅಥವಾ ಗ್ರಾಮಕೈಗಾರಿಕೆಯನ್ನು ಸ್ಥಾಪನೆಮಾಡುವುದಕ್ಕೆ ಅನುಕೂಲತೆ ಬೇಡಿದರೆ ಅಥವಾ ಜಮೀನು ಸಾಗುವಳಿಗೆ ಸಾಮೂಹಿಕ ವ್ಯವಸ್ಥೆಯಿಂದ ಅಥವಾ ಸಹಕಾರ ವ್ಯವಸ್ಥೆಯಿಂದ ಮುಂದೆ ಬಂದರೆ ಯೋಗ್ಯರೀತಿಯಿಂದ ಸಹಾಯ ಮತ್ತು ಸಲಹೆ ಕೊಡುವುದು ಸರ್ಕಾರದ ಕರ್ತವ್ಯ. ಆ ದೃಷ್ಟಿಯಿಂದ ಯಾವ ಯೋಜನೆಯೂ ಈ ಬಡ್ಜೆಟ್ಟಿನಲ್ಲಿ ಕಾಣಬರುವುದಿಲ್ಲ. ಆದರೂ ಸಹ ಆ ಬಗ್ಗೆ ಸಹಕಾರೀ ಸಂಘ ನಿರ್ಮಾಣ ಮಾಡುವುದಕ್ಕೆ ಮತ್ತು ಸಮಾಜ ಕಲ್ಯಾಣದ ಬಗ್ಗೆ ಹಣ ತೆಗೆದಿಟ್ಟಿದ್ದಾರೆ. ಹಳ್ಳಿಗಳಲ್ಲಿ ಹೆಚ್ಚು ಸಾಮಾಜಿಕ ಕಾರ್ಯಗಳಿಗೆ ಲಕ್ಷ್ಯಕೊಟ್ಟು ಸೌಕರ್ಯವನ್ನೊದಗಿಸಿ ಸಹಾಯಮಾಡುತ್ತಾರೆಂದು ನಂಬಿದ್ದೇನೆ.

ಇನ್ನು ಹಳ್ಳಿಗಳ ಬಗ್ಗೆ ಮತ್ತು ಒಕ್ಕಲುತನದ ಬಗ್ಗೆ ಮಾತನಾಡುವಾಗ ಅನೇಕ ಯೋಜನೆಗಳನ್ನು ಮಾಡುವುದಾದರೂ ಮುಖ್ಯವಾಗಿ ಹಳ್ಳಿಗಳಲ್ಲಿರುವ ಸಂಪತ್ತು ಉಪಯೋಗವಾಗುವಂತೆ ಮಾಡಲು ಮುಂಜಾಗ್ರತೆಯ ಆವಶ್ಯಕತೆಯಿದೆ. ಸಂಪತ್ತನ್ನು ಬೆಳೆಸುವುದೊಂದು ಕ್ರಮವಾದರೆ ಇರುವ ಸಂಪತ್ತನ್ನು ಹಾಳಾಗದಂತೆ ನೋಡಿಕೊಳ್ಳುವುದೊಂದು ಕ್ರಮ. ಹಳ್ಳಿಗಳಲ್ಲಿ ನೋಡಿದರೆ ಈ ವಿಚಾರದಲ್ಲಿ ಸಾಕಷ್ಟು ಆಲಸ್ಯವಿದೆ. ಅಲ್ಲಿನ ಸಂಪತ್ತು ಅನೇಕ ರೀತಿಯಲ್ಲಿ ಹಾಳಾಗುತ್ತಿದೆ. ದನಗಳ ಸಂಪತ್ತು ಅತ್ಯಂತ ನಿಕೃಷ್ಟ ರೀತಿಯಲ್ಲಿದೆ. ತಳಿ ಸುಧಾರಿಸಬೇಕು, ಯೋಗ್ಯ ರೀತಿಯ ಔಷಧೋಪಚಾರ ದೊರೆಯಬೇಕು. ದನಗಳ ಸಂಪತ್ತನ್ನು ವೃದ್ಧಿಮಾಡಿ ಜನತೆಗೆ ಯೋಗ್ಯ ಬೆಲೆಗೆ ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕು. ಹಳ್ಳಿಗಳಲ್ಲಿ ಸತ್ತ ದನಗಳಿಗೆ ಸರಿಯಾದ ಬೆಲೆಯಿಲ್ಲ. ಒಕ್ಕಲಿಗರಿಗೆ ಲಾಭ ಸಿಕ್ಕುತ್ತಿಲ್ಲ. ಇದನ್ನು ಪೂರ್ಣವಾಗಿ ವಿಚಾರಮಾಡಿ ಸತ್ತ ದನಗಳಿಗೆ ನೂರು ರೂಪಾಯಿಗಳಾದರೂ ಬೆಲೆ ಬರುವಂತೆ ಅನೇಕರು ಯೋಜನೆ ಮಾಡಿದ್ದಾರೆ. ಆದರಂತೆ ನಾವು ಕೆಲವು ಹಳ್ಳಿಗಳಲ್ಲಿ ಪ್ರಯೋಗ ನಡೆಸಿ ದನ ಸತ್ತ ಮೇಲೆ ಒಕ್ಕಲಿಗರಿಗೆ ಬೆಲೆ ಬರುವ ಹಾಗೆ ಏರ್ಪಾಡು ಮಾಡುವುದು ಎಲ್ಲ ಕಡೆಯೂ ಆವಶ್ಯಕ. ಅದಲ್ಲದೆ ಪ್ರತಿ ಊರಿನಲ್ಲಿಯೂ ಗೊಬ್ಬರದ ತಯಾರಿಕೆಯ ಕಡೆ ಲಕ್ಷ್ಯ ಹಾಕಿ ಕಸ ಕಡ್ಡಿ ಅಥವಾ ಇತರ ಸಂಪತ್ತು ಹಾಳಾಗುತ್ತಿರುವುದನ್ನು ತಪ್ಪಿಸಿ ಅದು ಉಪಯೋಗವಾಗುವಂತೆ ವ್ಯವಸ್ಥೆ ಮಾಡಬೇಕು. ಈ ಕಡೆ ಲಕ್ಷ್ಯಕೊಟ್ಟ ಪಕ್ಷದಲ್ಲಿ ನಮ್ಮ ಪರಿಸ್ಥಿತಿ ಸುಧಾರಿಸುವುದರಲ್ಲಿ ಅಡ್ಡಿಯಿಲ್ಲ.

ಇನ್ನು ಒಂದೇ ಒಂದು ಹೊಸ ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಚೆಗೆ ನಮ್ಮ ಭಾಗದಲ್ಲಿ ಮೇಳಿಸುರಬಳಿಪೂಲಿಗೆ 50 ಸಾವಿರ ರೂಪಾಯಿಗಳಂತೆ ಹಣ ಕೊಟ್ಟಿದ್ದಾರೆ. ಅದರ ಬಗ್ಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ಬಗ್ಗೆ ದೊಡ್ಡ ಅಡಚಣೆ ಇತ್ತು. ಅದು ನಿವಾರಣೆಯಾಗಿ ಸರ್ಕಾರದವರು ನಾನಾ ಸೌಲಭ್ಯಗಳನ್ನು ಕೊಟ್ಟಿರುವುದಕ್ಕೆ ಅಭಿನಂದಿಸಿ ಹಣಕಾಸಿನ ಮುಂಗಡದ ಪತ್ರದ ಬಗ್ಗೆ ಬೆಂಬಲವಿತ್ತು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಈ ಖೋತಾ ಬಡ್ಜೆಟ್ಟನ್ನು ವಿರೋಧಿಸುತ್ತಾ ನನ್ನ ಕೆಲವು ಅಭಿಪ್ರಾಯಗಳನ್ನು ತಿಳಿಸುತ್ತೇನೆ, ಈ ಖೋತಾ ಬಡ್ಜೆಟ್ಟನ್ನು ಮಂಡಿಸುವಾಗ ಯಾವುದಾದರೂ ಒಂದು ನಿಯಮವನ್ನು ಅನುಸರಿಸಿ ಮಂಡಿಸಿದ್ದರೆ ಚೆನ್ನಾಗಿತ್ತೆಂದು ನನಗನ್ನಿಸುತ್ತದೆ. ಈ ಬಡ್ಜೆಟ್ಟನ್ನು ತಯಾರುಮಾಡಿರುವ ವಿಧಾನವನ್ನು ನೋಡಿದರೆ ಸಾಲ ತೆಗೆದುಕೊಂಡು ಬಂದ ಹಣವನ್ನು

* Asterisks indicate that the remarks or speeches have not been revised by the Members concerned.

ಸಹಿತ ಇದರಲ್ಲೇ ಸೇರಿಸಿ ಬಿಟ್ಟು ನಮ್ಮ ಸರಾಸರಿ ಉತ್ಪತ್ತಿ ವಗೈರೆಗಳನ್ನೂ ಇದರಲ್ಲೇ ಮಿಳನ ಮಾಡಿ ಆಗುವ ಖರ್ಚನ್ನು ಕೊಟ್ಟು ಬಾಕಿ ಉಳಿಯುವುದನ್ನು ತೋರಿಸುತ್ತಾ ಖೋತಾ ಬಡ್ಜೆಟ್ ಎಂದು ತೋರಿಸಿದ್ದಾರೆ. ಇದು ಶಾಸ್ತ್ರಕ್ಕೆ ವಿರುದ್ಧವಾದುದು ಎಂಬುದು ನನ್ನ ಅಭಿಪ್ರಾಯ. ಏಕೆಂದರೆ, ಅರ್ಥ ಶಾಸ್ತ್ರದ ತತ್ವದ ಪ್ರಕಾರ ಬಡ್ಜೆಟ್ಟನ್ನು ತಯಾರಿಸುವುದಕ್ಕೆ, ಖೋತಾ ಬಡ್ಜೆಟ್ಟನ್ನು ತಯಾರಿಸುವುದಕ್ಕೆ, ಒಂದು ನಿಯಮವಿದೆ. ಆ ನಿಯಮದ ಪ್ರಕಾರ ಯಾವ ದೇಶವೇ ಆಗಲಿ ಬಹಳ ಹಿಂದೆ ಬಿದ್ದಿದ್ದರೆ, ಅಲ್ಲಿ ಆಯಾ ಕಾಲಕ್ಕೆ ತಕ್ಕಂತೆ ಪ್ರಗತಿ ದಾಯಕವಾದ ಕೆಲಸಗಳನ್ನು ಆಗಾಗ ತಪ್ಪದಂತೆ ನಡೆಸಿ ಮುಂದುವರಿದ ದೇಶಗಳಿಗೆ ಸಮವಾಗಿ ನಾವು ಹೋಗಬೇಕು. ಇಲ್ಲದಿದ್ದರೆ ಹಣ ನಾಶವಾಗುತ್ತದೆ, ನಾವು ಒಂದು ಜನಾಂಗವಾಗಿ ಉಳಿಯುವುದಿಲ್ಲ ಎಂಬ ಭಾವನೆಯಿಂದ ಖೋತಾ ಬಡ್ಜೆಟ್ಟನ್ನು ತಯಾರಿಸುವುದು ಅರ್ಥ ಶಾಸ್ತ್ರದ ನೀತಿ ಎಂದು ನಾನು ತಿಳಿದುಕೊಂಡಿದ್ದೇನೆ. ಖೋತಾ ಬಡ್ಜೆಟ್ಟನ್ನು ತಯಾರು ಮಾಡುವಾಗ ನಾವು ನಮ್ಮ ಅಂಕಿಗಳನ್ನು ಮೊದಲು ಆಲೋಚಿಸಬೇಕಾಗಿದೆ. ಅದೇ ಬಡ್ಜೆಟ್ ಪ್ಲಾನಿಂಗ್ ಎಂಬುದು. ಈ ಬಡ್ಜೆಟ್ಟನ್ನು ಪ್ಲಾನ್ ಮಾಡುವಾಗ ನಮ್ಮ ನಮ್ಮ ಅಂಕಿಗಳೇನು, ನಾವು ಯಾವ ಸ್ಥಿತಿಯಲ್ಲಿದ್ದೇವೆ ಎಂಬುದನ್ನು ನೋಡಿ ಈಅಂದಾಜನ್ನು ತಯಾರು ಮಾಡಿದ್ದಾರೆಂದು ನನಗನ್ನಿಸುವುದಿಲ್ಲ. ಏಕೆಂದರೆ ನಮ್ಮ ವಾಕ್ಯಗಳು ಸಹಿತ ನಮ್ಮ ಧರ್ಮದ ಮೇಲೆ ಅವಲಂಬಿಸಿರುತ್ತವೆ. ನಾನು ಇಲ್ಲಿಗೆ ಮೊದಲು ಬಂದಾಗ ರಾಜ್ಯಪಾಲರು ಭಾಷಣದಲ್ಲಿ ಭೂ ಸುಧಾರಣೆ ವಿಷಯವಾಗಿ ಪ್ರಗತಿದಾಯಕವಾದ ಬದಲಾವಣೆಗಳನ್ನು ಮಾಡುವವರಾಗಿದ್ದೇವೆಂದು ಹೇಳಿದರು. ಹಾಗೆಯೇ ಎರಡನೆಯ ಪಂಚವಾರ್ಷಿಕ ಯೋಜನೆಯ ವಿಷಯವಾಗಿಯೂ ಸಹಿತ ಈ ಯೋಜನೆ ಮಹತ್ವ ಪೂರಿತವಾದ ಅಂಶಗಳನ್ನೊಳಗೊಂಡಿದೆ, ಇದರಿಂದ ಬರತಕ್ಕ ಉತ್ಪತ್ತಿಯನ್ನಾಗಲಿ ಅಥವಾ ಅನುಕೂಲಗಳನ್ನಾಗಲಿ ಆಲೋಚಿಸುವುದರ ಮೂಲಕ ನಮ್ಮ ಧರ್ಮವನ್ನು ನಿಗದಿ ಮಾಡಬಾರದು, ಅದರ ಬದಲು ಇದರಿಂದ ನಮಗೇನಾಗುತ್ತದೆಂಬುದನ್ನು ಆಲೋಚಿಸಿ ಅದರ ಮಹತ್ವವನ್ನರಿತುಕೊಳ್ಳಬೇಕು ಎಂದು ಹೇಳಿರುವುದನ್ನು ನೋಡಿ ಸ್ವಲ್ಪ ಸಂತೋಷವಾಯಿತು.

2-30 P.M.

ಏಕೆಂದರೆ ಈ ಅಸೆಂಬ್ಲಿ ಮಾನ್ಯ ಸದಸ್ಯರು ರಾಜ್ಯಪಾಲರಿತ್ತ ಭಾಷಣದ ವಿಚಾರವಾಗಿ ಅವರಿಗೆ ವಂದಿಸುತ್ತಾ, ಅವರ ಅಭಿಪ್ರಾಯಗಳನ್ನು ಹೇಳುವಾಗ 'ಮೈಸೂರಿನಲ್ಲಿ ಒಂದೇ ಅಲ್ಲ, ಇಡೀ ಹಿಂದೂಸ್ಥಾನದಲ್ಲೇ ಸಮಾಜವಾದಿ ಮಾದರಿ ಸಮಾಜವನ್ನು ರಚನೆ ಮಾಡುವುದಕ್ಕೋಸ್ಕರ ದುಡಿಯುತ್ತಿದ್ದೇವೆ ಮತ್ತು ಭೂಸುಧಾರಣೆ ವಿಷಯವಾಗಿ, ಉಳುವವನೇ ನೆಲದೊಡೆಯನಾಗುತ್ತಾನೆ, ಇದೇ ನಮ್ಮ ಧರ್ಮ. ಅದಕ್ಕೋಸ್ಕರ ಈಗ ಒಂದು ಸಮಿತಿಯನ್ನು ನಿರ್ಮಾಣ ಮಾಡಿದ್ದೇವೆ. ಬಹಳ ಹಿಂದುಳಿದ ಜನಾಂಗವನ್ನು ಸುಧಾರಿಸಬೇಕಾದರೆ ನಾನಾ ಸಲಕರಣೆಗಳನ್ನು ಒದಗಿಸತಕ್ಕಂಥ ಕಾಲದಲ್ಲಿ ಕಷ್ಟಗಳು ಬರತಕ್ಕದು ಸ್ವಾಭಾವಿಕವಾಗಿಯೇ ಇದೆ'' ಎಂದು ಹೇಳದರು. ಆದರೆ ಕೆಲವಾರು ದಿವಸಗಳ ನಂತರ ಅನೇಕ ಭಾಷಣಗಳನ್ನು ಕೇಳುತ್ತಾ ಹೋದ ಹಾಗೆಲ್ಲಾ ಆ ಭ್ರಾಂತಿ ಅಥವಾ ಭಾವನೆಗಳು ಹಾಗೆಯೇ ಮಾಯವಾಗುತ್ತಾ ಹೋಗಿವೆ. ನಮ್ಮನಾಡಿನ ಬಡ್ಜೆಟ್ಟಿನಲ್ಲಿ ಈ ಭಾವನೆ ಎಷ್ಟು ಮಟ್ಟಿಗೆ ಅಡಕವಾಗಿದೆ ಎಂದು ನೋಡಿದರೆ ಇದು ಸ್ಟೀರಿಯೋ ಟೈಪ್ ಬಡ್ಜೆಟ್ಟಾಗಿದೆ. ಎಂದರೆ, ಹಿಂದೆ ಯಾವ ನಮೂನೆಯನ್ನು ಅನುಸರಿಸುತ್ತಿದ್ದಾರೋ ಅದೇ ನಮೂನೆಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ಎರಡನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಬಳಸಿರತಕ್ಕಂಥ ಭಾವನೆಗಳನ್ನೂ, ಪದಗಳನ್ನೂ, ಮತ್ತು ವಾಕ್ಯಗಳನ್ನೂ ಇದರಲ್ಲಿ ಬಳಸಿಕೊಂಡು ಅದರಂತೆ ಮಾಡಿಕೊಂಡು ಹೋಗಿದ್ದಾರೆ. ಇದನ್ನು ನೋಡಿದರೆ ನಾವು ಹೊಸದಾಗಿ ಇಲ್ಲಿಗೆ ಅಸೆಂಬ್ಲಿ ಸದಸ್ಯರಾಗಿ ಯಾತಕ್ಕೋಸ್ಕರ ಬಂದಿದ್ದೇವೆ ಎನ್ನಿಸಿತು. ಈ ಆಯವ್ಯಯ ಯೋಜನೆ ಎನ್ನುವುದು ದೇಶದ ಹಣೆ ಬರಹ ಬರೆದಂತೆ ಯಾವ ನಮೂನೆ ಹಣೆ ಬರಹ ಬರೆಯುತ್ತಾರೆಯೋ ಎಂದು ನನ್ನ ಮನಸ್ಸಿಗೆ ಎನ್ನಿಸಿತು. ಕೆಲವಾರು ದಿವಸಗಳ ಹಿಂದೆ ನಾವು ಮಹಾಚುನಾವಣೆಗಳನ್ನು ನಡೆಸಿದಾಗ ಯಾರು ಯಾರು ಯಾವ ಯಾವ ರೀತಿಯಾಗಿ ಮಹಾಜನಗಳಿಗೆ ಆಶ್ವಾಸನಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಜ್ಞಾಪಕಕ್ಕೆ ತರಬೇಕು. ಮಂತ್ರಿಗಳ ಸಮೇತವಾಗಿ ನಾವು ಪ್ರಜೆಗಳ ಪ್ರತಿನಿಧಿಗಳು. ಪ್ರಜೆಗಳಿಗೂ ಮತ್ತು ಅಸೆಂಬ್ಲಿಗೂ ಏಜೆಂಟರು—ಮಂತ್ರಿಗಳು. ಅಸೆಂಬ್ಲಿಯಲ್ಲಿ ಮಾಡಿದ ಕಾನೂನು ರೀತ್ಯಾ ತಾವು ರಾಜ್ಯಭಾರ ಮಾಡಬೇಕು. ಆದ್ದರಿಂದಲೇ ದೇಶದ ಹಣೆಬರೆಹ ಬರೆಯುತಕ್ಕ ಅಧಿಕಾರವನ್ನು ಈ ಅಸೆಂಬ್ಲಿಗೆ ಕೊಟ್ಟಿದೆ ಎನ್ನುವ ಅರಿವು ತಮಗೆ ಇರಬೇಕು. ಜಾತ್ಯಾತೀತ ಸರ್ಕಾರ ಬೇಕಾಗಿದ್ದರೆ, ವರ್ಗರಹಿತ ಸರ್ಕಾರ ಬೇಕಾಗಿದ್ದರೆ ಇಂಥಹವರಿಗೆ ವೋಟು ಕೊಡಿ ಎಂದು ತಾವುಗಳೆಲ್ಲರೂ ಹೇಳಿದ್ದೀರಿ. ನನ್ನ ಮಟ್ಟಿಗೆ ಹೇಳುವುದಾದರೆ ಮತ್ತು ಈ ಕಡೆಯ ಮಿತ್ರರ ಪರವಾಗಿ ಹೇಳುವುದಾದರೆ ಇಷ್ಟೊಂದು ಅಗು ಮಾಡುವುದಾದರೆ ಬಹಳ ಸಂತೋಷ. ನಾವು ಪ್ರತಿಯೊಂದು ಯೋಜನೆಗೂ ಉತ್ತೇಜನ ಕೊಡುವವರೇ ಸಹಾಯ ಮಾಡುವವರೇ ಆದರೆ ಈಗ ನಮ್ಮ ಮುಂದೆ ಇರತಕ್ಕ ಬಡ್ಜೆಟ್ ಅಂಥ ಒಂದು ಅಭಿಪ್ರಾಯವನ್ನು ಕೊಡುತ್ತಾ ಇಲ್ಲ. ಅದಕ್ಕೆ ವಿರೋಧವಾಗಿ ಅಭಿಪ್ರಾಯ ಕೊಡುತ್ತದೆ. ನಮ್ಮಲ್ಲಿ ಒಂದು ಎಸ್ಟಿಮೇಟ್ ಕಮಿಟಿ ಇದೆ. ಆ ಎಸ್ಟಿಮೇಟ್ ಕಮಿಟಿಯವರ ಕಾರ್ಯ ಏನು ಎಂಬುದು ಅರ್ಥವಾಗುವುದಿಲ್ಲ. ನಾನು ತಿಳಿದುಕೊಂಡ ಮಟ್ಟಿಗೆ ನಮ್ಮ ಯೋಜನೆಗಳನ್ನು ತಯಾರು ಮಾಡುವಾಗ ನಮ್ಮಲ್ಲಿ ಎಷ್ಟು ದುಡ್ಡಿದೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ದುಡ್ಡಿಗೆ ಸಮಾನವಾಗಿ ಕೆಲಸ ಮಾಡುವುದು ಸರ್ವೇ ಸಾಧಾರಣವಾದ ಕಾಲದಲ್ಲಿ ಮಾಡತಕ್ಕ ನಿಯಮ. ಬದಲಾವಣೆ ಆಗತಕ್ಕ ಕಾಲದಲ್ಲಿ ಉಗ್ರವಾಗಿ, ಕಾರ್ಯಕ್ರಮ ತೆಗೆದುಕೊಳ್ಳತಕ್ಕಂಥ ಕಾಲದಲ್ಲಿ, ನಮಗೆ ಅವಶ್ಯಕವಾದ ಯಾವ ಯಾವ ವಸ್ತುಗಳು ಬೇಕೋ ಸರ್ಕಾರದ ಉದ್ಧಾರಕಾಗಿ ಯಾವ ಯಾವ ಸಲಕರಣೆಗಳು ಬೇಕೋ ಅವುಗಳನ್ನು ಒದಗಿಸುವುದಕ್ಕೋಸ್ಕರ ಸಮಗ್ರವಾಗಿ ಚಾಚೂ ತಪ್ಪದೆ ಪ್ರತಿಯೊಂದು ವಿಷಯವನ್ನೂ ಸಂಗ್ರಹಣೆ ಮಾಡಿಕೊಂಡು ಇದನ್ನೂ ಆಗುಮಾಡುವುದಕ್ಕೋಸ್ಕರ ದುಡ್ಡು ಎಷ್ಟು ಬೇಕು, ಎನ್ನುವುದಕ್ಕೆ ಪ್ರಜಾಪ್ರಭುತ್ವದ ನೀತಿ ಮತ್ತು ಧರ್ಮವನ್ನು ಅನುಸರಿಸತಕ್ಕಂಥವನು ನಿಗಾ ಕೊಡಬೇಕು. ಈ ದೃಷ್ಟಿಯಿಂದ ಈ ಖೋತಾ ಬಡ್ಜೆಟ್ಟನ್ನು ಯೋಚನೆ ಮಾಡಬೇಕು. ಖೋತಾ ಬಡ್ಜೆಟ್ಟು ನಿರುತ್ಸಾಹ ಉಂಟುಮಾಡುವುದಿಲ್ಲ. ಖಂಡಿತಾ ಉತ್ಸಾಹ ಕೊಡುತ್ತದೆ. ಆದರೆ ಈ ರೀತಿ ಮಾಡಿದ ಖೋತಾ ಬಡ್ಜೆಟ್ಟು ಬಹಳ ಮಟ್ಟಿಗೆ ಉತ್ಸಾಹವನ್ನು ಕೊಡಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ನಮಗೆ ಬೇಕಾದ ಸಲಕರಣೆಗಳನ್ನು ಒದಗಿಸುವುದಕ್ಕೆ ನಮ್ಮಲ್ಲಿ ಇರತಕ್ಕಂಥ

(ಶ್ರೀ ಕೆ. ಕೆಂಚಪ್ಪ)

ದುಡ್ಡು ಸಾಲದೆ ಹೋದರೆ ಯಾವ ರೀತಿ ದುಡ್ಡು ಒದಗಿಸಬೇಕು ಎಂಬ ವಿಚಾರವು ಸಹ ಧರ್ಮ ದೃಷ್ಟಿಯಿಂದ ಕೂಡಿರಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಬಡ್ಜೆಟ್ಟನ್ನು ಒಂದು ಬರೀ ಅಭಿಮಾನಕ್ಕೆ ಮಾಡುವುದು ಅಲ್ಲ, ಒಂದು ಧರ್ಮದ ಮೇಲೆ ಮಾಡಬೇಕು. ಟ್ಯಾಕ್ಸ್ ಹಾಕುವುದು ಮತ್ತು ಇನ್ನೂ ಅನೇಕ ವಿಚಾರ ಮಾಡತಕ್ಕದ್ದು ಖೋತಾ ಬಡ್ಜೆಟ್ಟಿನ ಲಕ್ಷಣವಲ್ಲ. ಟ್ಯಾಕ್ಸ್ ಎಂಬುದು ಖಾಯಂ ಮಾತು ಎಲ್ಲರ ಮೇಲೂ ಯಾವಾಗಲೂ ಬೀಳತಕ್ಕದ್ದು 'Margin of subsistence ಎಂದು ಇಂಗ್ಲೀಷಿನಲ್ಲಿ ಹೇಳುತ್ತೇವೆ ಅಹನ್ಯಹ್ನ ಕಾಲಕ್ಷೇಪ ಮಾಡುವವರ ಮೇಲೆ ಮತ್ತು ಉತ್ಪತ್ತಿ ಇಲ್ಲದವರ ಮೇಲೆ ಖಾಯಂ ಆಗಿ ಟ್ಯಾಕ್ಸ್ ಹಾಕಿ ಅವರಿಂದ ಬರತಕ್ಕ ಹಣದಿಂದ ನಮ್ಮ ಆಶೋತ್ತರಗಳನ್ನೂ ನೆರವೇರಿಸುವುದು ಖೋತಾ ಬಡ್ಜೆಟ್ಟಿನ ಲಕ್ಷಣವಲ್ಲ. ಸಾಲ ಮಾಡುವ ಮೂಲಕ ಅನೇಕ ವಿಧವಾದ ಸುಧಾರಣೆಗಳನ್ನು ಪ್ರಜೆಗಳಲ್ಲಿ ಹರಡಿ ಪ್ರತಿಯೊಬ್ಬರಲ್ಲಿಯೂ ಉತ್ಪಾದನ ಶಕ್ತಿ ಹೆಚ್ಚಿದ ಮೇಲೆ ಅವರ ಮೇಲೆ ಸೂಕ್ತ ಟ್ಯಾಕ್ಸ್ ಹಾಕಬೇಕಾದುದು ಖೋತಾ ಬಡ್ಜೆಟ್ಟಿನ ಕರ್ತವ್ಯ. ಇಲ್ಲಿ we are attempting to kill the goose that lays the golden egg ಎಂದು ಕಾಣುತ್ತದೆ. ಯಾಕೆಂದರೆ ದೇಶದ ಸಂಪತ್ತು ಬಹು ಜನರಿಗೆ ಉಪಯೋಗವಾಗತಕ್ಕಂಥಾದನ್ನು ಮಾಡುವುದೇ ಆಗಿದೆ. ನಿರುದ್ಯೋಗ ಸಮಸ್ಯೆಯನ್ನು ತೊಡೆದು ಜನರನ್ನು ಉದ್ಯೋಗಸ್ಥರನ್ನಾಗಿ ಮಾಡಬೇಕಾದರೆ ಪ್ರತಿಯೊಬ್ಬರ ಕೈಯ್ಯಲ್ಲೂ ದುಡ್ಡು ಇರಬೇಕು. ನಿರುದ್ಯೋಗ ಎನ್ನುವುದು ದೇಶದಲ್ಲಿ ತುಂಬ ಹಾನಿಕರ, ಆರ್ಥಿಕವಾಗಿಯೂ ತುಂಬ ಹಾನಿಕರ. ಎಲ್ಲರೂ ಉದ್ಯೋಗಸ್ಥರಾಗಿ ಉತ್ಪಾದನಾ ಮಾರ್ಗದಲ್ಲಿ ತೊಡಗಿದರೆ ಉತ್ಪಾದನೆ ಹೆಚ್ಚಾಗುತ್ತದೆ. ಈ ದೃಷ್ಟಿಯಿಂದ ನಾವು ಖೋತಾ ಬಡ್ಜೆಟ್ಟನ್ನು ನೋಡಬೇಕು. ಈ ಒಂದು ಒರೆಗಲ್ಲಿನಲ್ಲಿ ಈ ಖೋತಾ ಬಡ್ಜೆಟ್ಟನ್ನು ನಾವು ಹಚ್ಚಿ ನೋಡಿದರೆ, ಏನೊಂದು ದುರದೃಷ್ಟದ ಸಂಗತಿಯನ್ನು ಕಾಣುತ್ತೇವೆಂದರೆ, ನೀವು ಬಡ್ಜೆಟ್ಟ್ ತಯಾರುಮಾಡುವಾಗ ಮೊದಲು ಸಿಬ್ಬಂದಿಗೆ ಎಷ್ಟು ಖರ್ಚುಬೀಳುತ್ತದೆ ಎಂದು ನೋಡಿ ಮಾಡಿದ ಹಾಗಿದೆ. ಸಿಬ್ಬಂದಿಗೆ ಎಷ್ಟು ಖರ್ಚು ಬೀಳುತ್ತದೆ ಎನ್ನುವುದನ್ನು ಮೊದಲು ಆಲೋಚನೆ ಮಾಡತಕ್ಕದ್ದು ಅಲ್ಲ. ಸರಿಯಾಗಿ ನಾವು ಯಾವರೀತಿ ಸಲಕರಣೆಗಳನ್ನು ಸಮಾಜದಲ್ಲಿ ಒದಗಿಸಬೇಕು ಎನ್ನುವುದು ನಾವು ಬಡ್ಜೆಟ್ ಕಾಲದಲ್ಲಿ ಆಲೋಚನೆ ಮಾಡತಕ್ಕ ಕೆಲಸ. ಆದರೆ ಇಲ್ಲಿ ನೋಡಿದರೆ ಈಗಿನ ಕಾಲದ ಬಡ್ಜೆಟ್ಟಿನಲ್ಲಿ ಸಿಬ್ಬಂದಿಗೋಸ್ಕರ ಎಷ್ಟು ಬೀಳುತ್ತದೆ ಎಂಬುದನ್ನು ಆಲೋಚನೆ ಮಾಡಿಲ್ಲವೆಂದು ಹೇಳುತ್ತೇನೆ. ಹಿಂದಿನ ಕಾಲದ ಬಡ್ಜೆಟ್ಟನ್ನು ನೋಡಿದರೆ ಕೊನೆಯ ವರ್ಷದವರೆಗೂ ಸುಮಾರು 14 ಕೋಟಿ ರೂಪಾಯಿಗಳಷ್ಟು ಸಿಬ್ಬಂದಿಗಾಗಿ ಖರ್ಚಾಗುತ್ತಿತ್ತು. ಆಗ ನಮ್ಮ ಒಟ್ಟು ಖರ್ಚು 22 ಕೋಟಿ ರೂಪಾಯಿ ಇತ್ತು. ಅಂದಮೇಲೆ ತಾವು ಆಲೋಚನೆಮಾಡಬೇಕು, 22 ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕಂಥ ವ್ಯವಸ್ಥೆಯಲ್ಲಿ ಸಿಬ್ಬಂದಿಗೋಸ್ಕರ 14 ಕೋಟಿ ರೂಪಾಯಿ ಖರ್ಚುಮಾಡತಕ್ಕದ್ದು ನಿಜವಾಗಿ ಅರ್ಥಶಾಸ್ತ್ರದಂತೆ ಧರ್ಮವೇ ಎಂಬುದನ್ನು ಆಲೋಚನೆ ಮಾಡಬೇಕು.

ಪ್ರಜೆಗಳಿಗೆ ಅನುಕೂಲವಾದ ಸಲಕರಣೆಗಳನ್ನು ಒದಗಿಸಲು ಮತ್ತು ಬೇಕಾದಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಿಬ್ಬಂದಿಗಳು ಇರಬೇಕಾಗಿದೆ. ಆದರೆ, ಎಷ್ಟು ಸಿಬ್ಬಂದಿ ಇರಬೇಕು ಎನ್ನತಕ್ಕ ವಿಚಾರವನ್ನು ನಾವು ಆಲೋಚನೆ ಮಾಡಬೇಕು. ನಾನು ವ್ಯಸನದಿಂದ ಹೇಳಬೇಕಾಗಿದೆ, ಈ ಬಾಬುಗಳಲ್ಲಿ ಒಂದು ನೀತಿ, ಒಂದು ಧರ್ಮ ಯಾವುದೂ ಕಾಣುವುದಿಲ್ಲ. 1907ನೇ ಇಸವಿಯಲ್ಲಿ ಯಾವುದೋ ನಮೂನೆಯ ರಾಜ್ಯಭಾರ ನಡೆಯುತ್ತಿತ್ತು. ಅದೇ ರೀತಿಯ ವಿಧಾನವನ್ನು ಈಗಲೂ ಅನುಸರಿಸುತ್ತಿದ್ದಾರೆ. ದೇಶದಲ್ಲಿ ಈಗ ಮುಖ್ಯವಾಗಿ ಇರತಕ್ಕದ್ದು ನಿರುದ್ಯೋಗದ ಸಮಸ್ಯೆ. ಮೊದಲನೆಯ ಪಾಂಚವಾರ್ಷಿಕಯೋಜನೆ ಮುಗಿದು ಎರಡನೆಯ ಪಾಂಚವಾರ್ಷಿಕ ಯೋಜನೆ ಪ್ರಾರಂಭವಾಗುವಕಾಲದಲ್ಲಿ ಒಳ್ಳೊಳ್ಳೆಯ ಯೋಜನೆಗಳನ್ನು ಬಹಳ ತೂಕ ಮಾಡಿ ತಯಾರುಮಾಡಿದ್ದಾರೆ. ಆದರೆ ಎಲ್ಲಿಯೂ ಈ ಸಮಸ್ಯೆಯ ಪರಿಹಾರಕ್ಕೆ ತಕ್ಕಂತೆ ಅದರಲ್ಲಿ ಸೂಕ್ತ ಯೋಜನೆಗಳನ್ನು ಅಳವಡಿಸಿದಂತೆ ತೋರುವುದಿಲ್ಲ. ಮೊದಲನೆಯದರಲ್ಲಿ ಆಗ ಇದ್ದರೂ ಎರಡನೆಯ ಯೋಜನೆಯಲ್ಲಾದರೂ ಇದಕ್ಕೆ ತಕ್ಕ ಪರಿಹಾರ ದೊರೆಯಬೇಕಾಗಿತ್ತು. ತಮಗೆ ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಎರಡನೇ ಪಾಂಚವಾರ್ಷಿಕ ಯೋಜನೆಗಾಗಿ ಎರಡು ಸಾವಿರ ಕೋಟಿ ರೂಪಾಯಿಗಳು ಖರ್ಚಾಗಬೇಕೆಂದು ಹೇಳಿದ್ದೀರಿ. 1950-51ನೇ ಇಸವಿಯಲ್ಲೇ ನಮ್ಮ ಆಹಾರದ ಉತ್ಪತ್ತಿ ಜನರಿಗೆ ಬೇಕಾದಷ್ಟು ಸಿಕ್ಕುತ್ತದೆ–ಎಂದರೆ ನೂರರಷ್ಟು ಆಗದಿದ್ದರೂ ಸುಮಾರು ತೊಂಬತ್ತೆಂಟರಷ್ಟಾದರೂ ಸಿಕ್ಕುತ್ತದೆ ಎಂದು ನಿರ್ಧರಿಸಲಾಗಿತ್ತು. ಆದರೆ ಈಗ ಶೇಕಡ ಎರಡರಷ್ಟು ಉತ್ಪತ್ತಿ ಕಡಮೆಯಾಗಿದೆ. ಆಹಾರವನ್ನು ಹೊರದೇಶಗಳಿಂದ ತರಿಸಿಕೊಳ್ಳಬೇಕಾಗಿದೆ. ಮೊದಲನೆಯ ಪಾಂಚವಾರ್ಷಿಕ ಯೋಜನೆಯ ಕೊನೆಯವೇಳೆಗೆ ನೀವು ಅನುಸರಿಸತಕ್ಕ ನೀತಿ ನೀವು ಮಾಡಿರತಕ್ಕ ಕಾರ್ಯಗಳಂತೆ ಶೇಕಡ 115 ರಷ್ಟು ಉತ್ಪನ್ನ ಎಂದರೆ 100ಕ್ಕೆ 115ರಷ್ಟು ಉತ್ಪನ್ನ ಹೆಚ್ಚಾಗಬೇಕಾಗಿತ್ತು. ಸುಮಾರು 15ರಷ್ಟು ಉತ್ಪನ್ನಗಳನ್ನು ಹೊರಕ್ಕೆ ಕಳುಹಿಸಬೇಕಾಗಿತ್ತು. ಆದರೆ ಈಗ ಆಹಾರ ಪದಾರ್ಥಗಳ ಕೊರತೆ ಯುಂಟಾಗಿದೆ. ಆಗ ಹಿಂದೂಸ್ಥಾನದಲ್ಲೆಲ್ಲಾ ಸರ್‌ಪ್ಲಸ್ ಆಗಿ ಆಹಾರ ಪದಾರ್ಥಗಳು ದೊರೆಯುತ್ತವೆ ಎಂದು ಕೇಳಿದ್ದೆ. ಈಗ ಒಂದು ಪ್ರಶ್ನೆಯನ್ನು ನಾನು ಕೇಳಬೇಕಾಗಿದೆ. ಆಹಾರ ಪದಾರ್ಥಗಳ ಧಾರಣೆ ಈ ದಿವಸ ಹೇಗಿದೆ ಎಂದರೆ, 1950ನೆ ಇಸವಿಯಲ್ಲಿ ಏನು ಧಾರಣೆ ಇತ್ತೋ, ಇವೊತ್ತಿನ ದಿವಸವೂ ಕೂಡ ಅದೇ ಪರಿಸ್ಥಿತಿಯಲ್ಲಿದೆ. ಇದಕ್ಕೆ ಕಾರಣವೇನು ಎಂಬುದನ್ನು ನಾವು ಆಲೋಚನೆ ಮಾಡಬೇಕು. ಮೊಟ್ಟಮೊದಲನೆಯದಾಗಿ, ಈ ವಿಷಯವನ್ನು ಆಲೋಚನೆ ಮಾಡಬೇಕು. ಈ ಪ್ಲಾನು ಎಸ್ಟಿಮೇಟುಗಳನ್ನು ತಯಾರು ಮಾಡುವಾಗ ಸರಿಯಾದ ಲೆಕ್ಕಚಾರ ಮಾಡಿಲ್ಲ. ಜನಸಂಖ್ಯೆ ಯಾವರೀತಿಯಾಗಿ ಹೆಚ್ಚುತ್ತಿದೆ, ನಾವು ಮಾಡತಕ್ಕ ಕೆಲಸಕಾರ್ಯಗಳಲ್ಲಿ ಎಷ್ಟರಮಟ್ಟಿಗೆ ಕೆಲಸ ನಡೆದಿದೆ, ಇದರಿಂದ ಆಶೋತ್ತರಗಳು ಎಷ್ಟರ ಮಟ್ಟಿಗೆ ಈಡೇರುತ್ತಿವೆ ಎಂಬುದನ್ನು ನಾವು ಸರಿಯಾಗಿ ಆಲೋಚನೆ ಮಾಡಬೇಕಾಗಿದೆ. ಆದುದರಿಂದ ಈ ಸಂದರ್ಭದಲ್ಲಿ ಹೇಳಬೇಕಾದರೆ ಈ ಕೆಲಸಗಳನ್ನು ಮಾಡುವುದರಲ್ಲಿ ಯಾ ನೀತಿಯನ್ನಾಗಲೀ ಧರ್ಮವನ್ನಾಗಲಿ ಅನುಸರಿಸಿಲ್ಲ. ಇದು ನಮ್ಮ ಮುಖ್ಯ ಜವಾಬ್ದಾರಿ. ನಮ್ಮ ಯೋಜನೆಗಳಿಂದ ಪ್ರಯೋಜನ ಪಡೆಯಬೇಕಾದರೆ ಸರಿಯಾದ ನೀತಿಯನ್ನು ಅನುಸರಿಸಬೇಕು. ನಾವು ಈಗ 1957ನೆಯ ಇಸವಿಯಲ್ಲಿದ್ದೇವೆ. ಹತ್ತು ವರ್ಷಕ್ಕೆ ಹಿಂದೆಯೇ ಕೈಗೆ ಸಿಕ್ಕದೆ ಇದ್ದ ಸ್ವರಾಜ್ಯ ಬಂದಿತು. ಆದರೆ ಅಂತಹ ಸ್ವರಾಜ್ಯವನ್ನು ನಾವು ಇನ್ನೂ

ಕಂಡಿಲ್ಲ. ಸ್ವರಾಜ್ಯ ಬಂದು ಹತ್ತು ವರ್ಷಗಳಾದರೂ ಕೂಡ ಯಾವ ರೀತಿಯಾದ ಸ್ವರಾಜ್ಯವನ್ನೂ ನಾವು ಕಾಣುತ್ತಿಲ್ಲ. ಬಂದಿರುವುದು ಸ್ವರಾಜ್ಯವಲ್ಲ, ಸ್ವಾತಂತ್ರ್ಯ ಮಾತ್ರ ಬಂದಿದೆ. ಎಂದರೆ ಜನಗಳು ಸ್ವತಂತ್ರರಾಗಿದ್ದಾರೆ. ಅಷ್ಟೇ. ಈ ಸ್ವತ್ಯಾಸವನ್ನೂ ಮಹಾಜನರು ತಿಳಿದುಕೊಳ್ಳಬೇಕಾಗಿದೆ. ನಮ್ಮ ಮುಂದೆ ಈಗ ನಿರುದ್ಯೋಗದ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ದೇಶದಲ್ಲಿ ಉತ್ಪತ್ತಿ ಕಡಮೆಯಾಗುತ್ತಿದೆ ಎಂದು ಕೇಳುತ್ತಿದ್ದೇವೆ ಇಂದು ಸ್ವರಾಜ್ಯವೇನೋ ಬಂದಹಾಗಿದೆ. ಆದರೆ ಕಾರ್ಯರೂಪದಲ್ಲಿ ಏನೂ ಬಂದಹಾಗಿಲ್ಲ.

ಇನ್ನೊಂದು ವಿಚಾರವನ್ನು ಕೈಗಾರಿಕೆ ಕಾರ್ಖಾನೆಗಳ ವಿಷಯದಲ್ಲಿ ಹೇಳಬೇಕಾಗಿದೆ. ಉತ್ತಮ ಸ್ಥಿತಿಯಲ್ಲಿರತಕ್ಕ ಅನೇಕ ದೊಡ್ಡ ದೊಡ್ಡ ಕಾರ್ಖಾನೆಯ ಮಾಲೀಕರು ತಮ್ಮ ಉತ್ಪತ್ತಿ ಕಡಮೆಯಾಗುತ್ತಿದೆ ಎಂದು ಹೇಳುತ್ತಾ ಇರುವುದರಿಂದ ನಿರುದ್ಯೋಗದ ಸಮಸ್ಯೆ ಹೆಚ್ಚಾಗುತ್ತಿದೆ. ಅಗಲೇ, ಮೊದಲನೆಯ ಪಾಂಚವಾರ್ಷಿಕ ಯೋಜನೆಯು ಮುಗಿಯುವುದರೊಳಗಾಗಿ ನೀವು ಒಂದು ಕೋಟಿ ಐವತ್ತು ಲಕ್ಷ ಜನರಿಗೆ ಹೆಚ್ಚಿಗೆ ಕೆಲಸಗಳು ಸಿಕ್ಕುತ್ತವೆ ಎಂದು ಹೇಳಿದ್ದಿರಿ. ಆದರೆ ಆ ರೀತಿಯಾಗಲಿಲ್ಲ. ಮೊದಲನೆಯ ಯೋಜನೆಯು ಮುಗಿದು ಎರಡನೆಯ ಯೋಜನೆ ಆರಂಭವಾಗಿದೆ. ಇದು ಮುಗಿಯುವುದರೊಳಗೂ ಈ ನಿರುದ್ಯೋಗದ ಸಮಸ್ಯೆ ಪರಿಹಾರವಾಗುವುದೆಂದು ನನಗೆ ತೋರುವುದಿಲ್ಲ. ಎರಡು ಸಾವಿರ ಕೋಟಿ ರೂಪಾಯಿಗಳು ಈ ಮೊದಲನೆ ಪಂಚ ವಾರ್ಷಿಕ ಯೋಜನೆಗಾಗಿ ಖರ್ಚಾಗಿದೆ. ಕೊನೆಯ ಪಕ್ಷ ಒಂದು 50 ಲಕ್ಷ ಜನರಿಗಾದರೂ ಕೆಲಸ ದೊರೆಯಬೇಕಾಗಿತ್ತು. ಅದೂ ಕೂಡ ಆಗಲಿಲ್ಲ. ಕೇವಲ ನಾಲ್ಕು ಸಾವಿರ ಮಂದಿಗೆ ಕೆಲಸವನ್ನು ದೊರಕಿಸಿ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಎರಡು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ಇದರಿಂದ ಎಷ್ಟು ಉತ್ಪತ್ತಿಯಾಗುತ್ತದೆ. ಎಷ್ಟು ಜನರಿಗೆ ಉದ್ಯೋಗ ದೊರಕುತ್ತದೆ. ಎಂಬುದನ್ನು ಸರಿಯಾಗಿ ಲೆಕ್ಕಾಚಾರ ಮಾಡಿ ಹೇಳಲಿಲ್ಲ, ನೀವುಮಾಡಿರತಕ್ಕ ವ್ಯವಸ್ಥೆ ಸರಿಯಾಗಿಲ್ಲ. ನಮ್ಮ ಮೈಸೂರು ಸರಕಾರವನ್ನು ನೋಡಿದರೆ ಸಾಲ ಏರುತ್ತಿದೆ. ಅಲ್ಲದೆ ನ್ಯಾಷನಲೈಸ್ ಎಂದರೆ ರಾಷ್ಟ್ರೀಕರಣ ಮಾಡುವುದೇ ಸಮತಾವಾದತತ್ವವೆಂದು ಸಾರಿ ಕೋಲಾರದ ಚಿನ್ನದಗಣಿಗಳ ರಾಷ್ಟ್ರೀಕರಣ ಮಾಡಿದ್ದೇವೆಂದು ದಪ್ಪ ದಪ್ಪ ಅಕ್ಷರಗಳಲ್ಲಿ ವೃತ್ತ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿದುದನ್ನು ಕಂಡೆವು. ಖಾಸಗೀ ಮಾಲೀಕತ್ವದಿಂದ ಸರ್ಕಾರದ ಮಾಲೀಕತ್ವಕ್ಕೆ ಬಂದರೆ ನಾವು ಸಮತಾವಾದ ಮಾಡಿದಂತಾಯಿತೇ? ಇದು Economic democracyಯೇ? ಹೀಗೆ ಸರಕಾರವು ಹೇಳಿದಂತೆ ನಡೆಯುತ್ತಿಲ್ಲ. ಮಾತಿನಲ್ಲಿ ಒಂದನ್ನು ಹೇಳಿ ಇನ್ನೊಂದನ್ನು ಮಾಡುವುದು ಸರಿಯಲ್ಲ. ಹೀಗೆ ಮಾಡಬಾರದೆಂದು ಹೇಳಿ ನಾನು ಮೈಸೂರು ಸಂಸ್ಥಾನ ಬಡ್ಜೆಟ್ಟನ್ನು ಸರಿಯಾಗಿ ಆಲೋಚನೆ ಮಾಡಬೇಕೆಂದು ನನ್ನ ಸೂಚನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಏನು ಮಾಡಬೇಕೆಂದು ಸರಕಾರಕ್ಕೆ ಸಲಹೆ ಕೊಟ್ಟರೆ ಉಪಕಾರವಾಗುತ್ತದೆಯಲ್ಲವೇ?

ಶ್ರೀ ಕೆ. ಕೆಂಚಪ್ಪ.—ಈ ಮೈಸೂರು ಸಂಸ್ಥಾನದಲ್ಲಿ ಎಷ್ಟು ಹಳ್ಳಿಗಳಿವೆ, ಎಷ್ಟು ಬಾಲಕ ಬಾಲಕಿಯರು ಇದ್ದಾರೆ? ಯಾವ ರೀತಿಯಾದ ವಿದ್ಯಾಭ್ಯಾಸದ ಕ್ರಮವನ್ನು ಒದಗಿಸಿದ್ದೀರಿ? ವಿದ್ಯಾಭ್ಯಾಸದ ಕ್ರಮವನ್ನು ಯಾವ ರೀತಿಯಾಗಿ ಮಾರ್ಪಡಿಸಬೇಕು ಎಂಬುದನ್ನು...

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಳೆಯ ಮೈಸೂರಿನ ವಿಷಯವಾಗಿ ಹೇಳಿದರೆ ಏನುಮಾಡುವುದಕ್ಕೆ ಆಗುತ್ತದೆ?

ಶ್ರೀ ಕೆ. ಕೆಂಚಪ್ಪ.—ಯಾವರೀತಿಯಾದ ಬಡ್ಜೆಟ್ಟನ್ನು ಮೈಸೂರು ದೇಶಕ್ಕೆ ತಯಾರು ಮಾಡಬೇಕು ಎಂದು ಮಾತನಾಡುತ್ತಾ ನಾನು ಕೆಲವು ಮುಖ್ಯ ಸೂಚನೆಗಳನ್ನು ತಿಳಿಸಿ ಈ ಭಾಷಣವನ್ನು ಮುಗಿಸುತ್ತೇನೆ.

ಈಗ ಎಷ್ಟೋ ವರ್ಷಗಳಿಂದ ನಮ್ಮ ಸರ್ಕಾರಕ್ಕೆ ಅನೇಕ ಸಲಹೆಗಳನ್ನು ಕೊಡುತ್ತಾ ಬಂದಿದ್ದೇವೆ. ನಿಜವಾಗಿಯೂ ನಿಮ್ಮ ಆಡಳಿತದಲ್ಲಿ, ನಿಮ್ಮ ಅಧಿಕಾರಾವಧಿಯಲ್ಲಿ ಮಾಡಿರತಕ್ಕ ಆಶ್ವಾಸನೆಗಳನ್ನು ಈಡೇರಿಸಲು ಸಾಧ್ಯವಾಗಿಲ್ಲ. ಜನತೆಯ ಸಹಕಾರವಿಲ್ಲದೆ ಯಾವ ಯೋಜನೆಗಳನ್ನು ತಯಾರಿಸಿದರೂ ಅದರಿಂದ ಪ್ರಯೋಜನವಾಗುವುದಿಲ್ಲ. ನಿಜವಾಗಿಯೂ ಯಾವ ಪಕ್ಷಪಾತಗಳನ್ನೂ ಮಾಡದೆ ಎಲ್ಲರ ಸಹಕಾರದೊಂದಿಗೆ ಈ ಕೆಲಸಗಳನ್ನು ಮಾಡಿದರೆ ಯೋಜನೆಗಳಿಂದ ಹೆಚ್ಚಿನ ಪ್ರಯೋಜನವಾಗುತ್ತದೆ. ನೀರಾವರಿ ಯೋಜನೆಯನ್ನು ತಯಾರಿಸಿ ಅದರಿಂದ ಬೇಕಾದಷ್ಟು ಜನರಿಗೆ ಕೆಲಸಸಿಕ್ಕುತ್ತದೆ ಎಂದು ಹೇಳುತ್ತಿದ್ದರು ಮತ್ತು ಇದರಿಂದ ನಿರುದ್ಯೋಗದ ಸಮಸ್ಯೆ ಬಗೆಹರಿಯುವುದೆಂದು ಹೇಳಿದ್ದನ್ನು ಕೇಳಿದ್ದೆ. ಆದರೆ ಅದರಂತೆ ಆಗಲಿಲ್ಲ. ಏತಕ್ಕೆಂದರೆ ಈಗ ನಾವು ನೋಡಿದ್ದೇವೆ. ಲಕ್ಕವಳ್ಳಿ ಯೋಜನೆ, ಹಾಗೆಯೇ ಚನ್ನಗಿರಿ ಮತ್ತು ದಾವಣಗೆರೆ ತಾಲ್ಲೂಕಿನಲ್ಲಿ ಕೆಲವೇ ಯೋಜನೆಗಳು, ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಸಿರಾ ಈ ಭಾಗಗಳಲ್ಲಿ ಕೆಲವು ಯೋಜನೆಗಳನ್ನು ತಯಾರಿಸಿದ್ದರು. ಆದರೆ ಇಲ್ಲಿ ನದಿಯೇ ಇಲ್ಲ. ಅದು ಹೇಗೆ ಇಲ್ಲಿ ಜನಗಳಿಗೆ ಕೆಲಸ ಸಿಕ್ಕುತ್ತದೆ ಇದರಿಂದಾಗಿ ನಿರುದ್ಯೋಗದ ಸಮಸ್ಯೆ ಬಗೆಹರಿಸಿದಂತಾಗಲಿಲ್ಲ. ಇದು ಒಂದು ಮೂಲಭೂತವಾದ ಸಮಸ್ಯೆ. ಎಲ್ಲಾ ಹಳ್ಳಿಗಳಿಗೂ ಈ ರೀತಿ ದುಡ್ಡು ಖರ್ಚುಮಾಡಿದರು. ಯಾವರೀತಿ ನೀರಾವರಿ ಯೋಜನೆಗೆ ದುಡ್ಡು ಖರ್ಚುಮಾಡಬೇಕೋ ಆರೀತಿ ಖರ್ಚುಮಾಡಿಲ್ಲ. ಮೂರು ಸಾವಿರ ರೂಪಾಯಿಗಳಿಗೆ ಒಂದು ಬಾವಿಯನ್ನು ತೆಗೆದರೆ ಒಂದು ಎಕರೆಗೆ ನೀರು ಹಾಯಿಸಬಹುದು. ನೀರಾವರಿಗೆ ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಕೊಡದೆ ಬಾಗಾಯಿತು ಜಮೀನುಗಳ ಮೇಲೆ ಕಂದಾಯಹಾಕುತ್ತಾರೆ. ಆದರೆ ಅವರ ಜೀವನ ಸರಿಯಾಗಿ ನಡೆಯುತ್ತದೆಯೇ ಎಂದು ನೋಡುವ ಹವ್ಯಾಸಕ್ಕೇ ಹೋಗುವುದಿಲ್ಲ. ಬೇಕಾದಷ್ಟು ಜಮೀನು ಸುಧಾರಣೆಗಳನ್ನೇನೋ ಮಾಡುತ್ತಾರೆ. ಆದರೆ ಮೂಲಭೂತವಾದ ಆಲೋಚನೆಗಳನ್ನು ಮಾಡಬೇಕಾಗಿದೆ.

ಇನ್ನು ನಿರುದ್ಯೋಗ ಸಮಸ್ಯೆಯನ್ನು ಬಿಡಿಸುವುದಕ್ಕೋಸ್ಕರ ಏನಾದರೂ ಆಲೋಚನೆ ಮಾಡಿದ್ದಾರೆಯೇ ಎಂದು ನೋಡಿದರೆ ಅದೂ ಇಲ್ಲ. ನಮ್ಮ ಸರ್ಕಾರದವರು ಏನು ಯೋಜನೆ ಮಾಡಿದರೂ "ಒಂದು ಕಣ್ಣಿಗೆ ಬೆಣ್ಣೆ ಒಂದುಕಣ್ಣಿಗೆ ಸುಣ್ಣ" ಎಂಬ ತತ್ವವನ್ನು ಅನುಸರಿಸುವುದರಿಂದ, ಅದರಿಂದ ಈ ಸಮಸ್ಯೆಯನ್ನು ಬಿಡಿಸುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ತಾವು ಈ ಬಡ್ಜೆಟ್ಟನ್ನು ತಯಾರುಮಾಡುವಾಗ. . . .

ಅಧ್ಯಕ್ಷರು.—"ತಾವು" ಎಂದು ಹೇಳಬೇಡಿ.

ಶ್ರೀ ಕೆ. ಕೆಂಚಪ್ಪ.—ತಾವು ಎಂದರೆ ಪ್ರಜಾಪ್ರಭುತ್ವಪಕ್ಷದವರು. ನಮ್ಮ ಸರ್ಕಾರದವರು ಕೆಲವಾರು ಉತ್ಪಾದನಾ ಕಾರ್ಯಗಳನ್ನೂ ಸಹ ಇಟ್ಟು ಕೊಂಡಿದ್ದಾರೆ. ಉತ್ಪಾದನಾಕಾರ್ಯಗಳನ್ನು ಅವರು ಇಟ್ಟುಕೊಳ್ಳುವುದರಲ್ಲಿ ಅವರು ಅನುಸರಿಸುವ ನೀತಿಯಿಂದ ಅವರು ತುಂಬಾ ಲುಕ್ಸಾನು ಹೊಂದುತ್ತಾ

(ಶ್ರೀ ಕೆ. ಕೆಂಚಪ್ಪ.)

ಇರುವುದು ಕಂಡುಬರುತ್ತಿದೆ. ಗಂಧದ ಕಾರ್ಖಾನೆಯಲ್ಲಿ ತುಂಬಾ ಲುಕ್ಸಾನು ಇದೆ. ನಾನು ಈಗ ಎಲ್ಲಾ ಕಾರ್ಖಾನೆಗಳ ವಿಷಯವನ್ನೂ ಹೇಳುತ್ತಾಹೋದರೆ ಕಾಲ ಹೆಚ್ಚಾಗುತ್ತದೆ. ಈ ಕಾರ್ಯವನ್ನು ವಿಚಕ್ಷಣೆಯಿಂದ ಮಾಡದೆ ಹೋದರೆ, ನಿಜವಾಗಿ ಸಮಾಜವಾದಿ ಸಮಾಜತತ್ವದಲ್ಲಿ ನಾವು ಮುಂದೆ ಹೆಜ್ಜೆ ಇಡುತ್ತೇವೆಯೇ ಎಂದು ಅನುಮಾನವಾಗುತ್ತದೆ. ನಾವು ಈಗ ಬಡ್ಜೆಟ್ಟಿನಲ್ಲಿ ಗ್ರಾಮಾಭಿವೃದ್ಧಿಗಾಗಿ ಏನೇನು ಮಾಡಿದ್ದಾರೆ ಎಂದು ನೋಡಿದರೆ ಇದರಲ್ಲಿ ಏನೂ ಕಂಡುಬರುವುದಿಲ್ಲ. ನಾನು ಬಡ್ಜೆಟ್ಟಿನಲ್ಲಿರತಕ್ಕ ಅಂಕಿ ಅಂಶಗಳನ್ನೂ ಸಂಪೂರ್ಣವಾಗಿ ನೋಡಿದ್ದೇನೆ. ಆದರೆ ನನ್ನ ಭಾಷಣವನ್ನು ಜಾಗ್ರತೆಯಾಗಿ ಮುಗಿಸಬೇಕಾಗಿರುವುದರಿಂದ ಬಡ್ಜೆಟ್ಟಿನ ವಿಚಾರದ ಮೇಲೆ ಅಲ್ಲೊಂದು ಇಲ್ಲೊಂದು ಹೇಳಿ ನನ್ನ ಮನೋಭಾವನೆಯನ್ನು ವ್ಯಕ್ತಗೊಳಿಸುತ್ತಿದ್ದೇನೆ. ಗ್ರಾಮಪಂಚಾಯಿತ್ತಿಗಳಿಗೆ ಜಿಲ್ಲಾ ಬೋರ್ಡ್ ಕಾನೂನು ಪ್ರಕಾರ ಸೆಕ್ಷನ್ 38ರಲ್ಲಿ ಇಷ್ಟು ದುಡ್ಡು ಕೊಡಬೇಕು ಎಂದು 1952ನೆಯ ಇಸ್ವಿಯಿಂದ ಆ ಕಾನೂನು ಜಾರಿಯಲ್ಲಿದೆ. ಆದರೆ ನಮ್ಮ ರಾಜ್ಯಭಾರಮಾಡುವವರು ಅದನ್ನು ಕೊಡಲಿಲ್ಲ. ಆದರೆ ಮೊನ್ನೆ ದಿವಸ ರಾಜಪಾಲರ ಭಾಷಣದಮೇಲೆ ನಡೆದ ಚರ್ಚೆಗೆ ಉತ್ತರಕೊಡುವಾಗ ನಾವು ಜಿಲ್ಲಾ ಬೋರ್ಡುಗಳಿಗೆ ಗ್ರಾಂಟನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ನಮ್ಮ ಹಣಕಾಸಿನ ಮಂತ್ರಿಗಳು, ಗ್ರಾಮರಾಜ್ಯಗಳನ್ನು ಕಟ್ಟುವುದಕ್ಕೆ ಹೊರಟಿದ್ದೇವೆ, ಗ್ರಾಮಾಂತರ ಪ್ರಜೆಗಳು ಬಹಳ ಹಿಂದಿದ್ದಾರೆ ಅವರಿಂದಲೇ ದೇಶ ಅಭಿವೃಧಿಯಾಗುವುದು, ಟೌನಿನಲ್ಲಿರುವ ಕೆಲವು ಸುಂದರವಸ್ತ್ರಗಳನ್ನು ನೋಡುವುದರ ಮೂಲಕ ನಾವು ಸಮಾಧಾನವಾಗಿರುವುದಾದರೆ ಅದರಿಂದ ಏನೂ ಪ್ರಯೋಜನಗಾಗುವುದಿಲ್ಲ ಎಂದು ಹೇಳಿದ್ದಾರೆ. ಹಣಕಾಸಿನ ಮಂತ್ರಿಗಳ ಬಡ್ಜೆಟ್ ಭಾಷಣದ ಪ್ರತಿಯ 47ನೇ ಪುಟದಲ್ಲಿ ಈ ರೀತಿ ಹೇಳಿದ್ದಾರೆ ''ಗ್ರಾಮಪಂಚಾಯಿತಿಗಳಿಗೆ ಜಮೀನು ಕಂದಾಯದಲ್ಲಿ ಒಂದು ಭಾಗವನ್ನು ಕೊಡುವ ಸಲುವಾಗಿ ಆಯವ್ಯಯದ ಪಟ್ಟಿಯಲ್ಲಿ ಹಣವನ್ನು ಒದಗಿಸಲಾಗಿದೆ. ಹಿಂದಿನ ಮೈಸೂರು ರಾಜ್ಯದಲ್ಲಿದ್ದ ಪ್ರತಿಯೊಂದು ಗ್ರಾಮ ಗ್ರಾಮಪಂಚಾಯಿತಿಗಾಗಲಿ, ಅಥವಾ ಸ್ಥಳೀಯ ಸಂಸ್ಥೆಗಾಗಲಿ ಸಲ್ಲಬೇಕಾಗಿರುವ ಭಾಗವನ್ನು ಗೊತ್ತು ಮಾಡುವುದರ ಸಂಬಂಧದಲ್ಲಿ ಕೆಲವು ತೊಂದರೆಗಳು ಕಂಡುಬಂದಿವೆ; ಮತ್ತು ಈ ಹುಟ್ಟುವಳಿಯನ್ನು ಬಹುಬೇಗ ಹಂಚುವುದರ ಸಂಬಂಧದಲ್ಲಿ ಸರ್ಕಾರದವರು ಸಾಧ್ಯತೆಗಳನ್ನು ಪರಿಶೀಲಿಸುತ್ತಾರೆ'' —ಈ ರೀತಿಯಾಗಿ ಅವರು ಬರೆದು ಕೊಟ್ಟಿರುವಾಗ, 1952ನೆ ಇಸವಿಯಿಂದ 1957ನೆ ಇಸವಿಯವರೆಗೂ ಈ ಗ್ರಾಮಪಂಚಾಯಿತಿಗಳಿಗೆ ಕೊಡಬೇಕಾದ ದುಡ್ಡನ್ನು ಕೊಡದೆ ಹೀಗೆ ಬಿಟ್ಟರೆ ಈ ಗ್ರಾಮಪಂಚಾಯಿತಿಗಳು ಅಭಿವೃದ್ಧಿಯಾಗುವುದು ಹೇಗೆ? ಅವರಿಗೆ ಇರುವ ಕುಂದುಕೊರತೆಗಳನ್ನು ಅವರು ಬಗೆಹರಿಸಿಕೊಂಡು, ಸರ್ಕಾರದ ಸಹಾಯದಿಂದ ಎಲ್ಲರಿಗೂ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾಗಿದೆ ಜಿಲ್ಲಾ ಬೋರ್ಡುಗಳ ರಸ್ತೆಯಾವ ಸ್ಥಿತಿಯಲ್ಲಿದೆ? ಜಿಲ್ಲಾ ಬೋರ್ಡುಗಳ ಹಿಂದಿನ ವಿಚಾರವನ್ನು ನಾನು ಎತ್ತುವುದಾದರೆ, ಅದಕ್ಕೆ ಒಂದೊಂದು ವರ್ಷ ಒಂದೊಂದು ಬಣ್ಣ ಕೊಟ್ಟರು. 1952ನೆಯ ಇಸವಿಯಲ್ಲಿ ಶ್ರೀಮಾನ್ ಚನ್ನಬಸಪ್ಪನವರೂ ಸಹ ಜಿಲ್ಲಾ ಬೋರ್ಡಿನಲ್ಲಿ ಸದಸ್ಯರಾಗಿದ್ದರು. ಶ್ರೀಮಾನ್ ವೆಂಕಟಪ್ಪನವರೂ ಸಹ ಸದಸ್ಯರಾಗಿದ್ದರು. 106ನೇ ಸೆಕ್ಷನ್ ಪ್ರಕಾರ ಆಯಾ ಸಂಸ್ಥಾನದ ಜಮೀನು ಕಂದಾಯದ ದುಡ್ಡಿನಲ್ಲಿ ಶೇಕಡ $6\frac{1}{4}$ ಭಾಗವನ್ನು ಆಯಾ ಸಂಸ್ಥಾನದ ಜಿಲ್ಲಾ ಬೋರ್ಡಿಗೆ ಒದಗಿಸಬೇಕೆಂದಿದೆ. ಆದರೆ ನಮ್ಮ ಸರ್ಕಾರದವರು ಇದನ್ನು ಇದುವರೆಗೂ ಅವರಿಗೆ ಕೊಟ್ಟಿಲ್ಲ. ಇದು ವ್ಯಸನಕರವಾದ ವಿಚಾರ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತೇವೆ ಎಂದು ಹೇಳಿ ಈಗ ರಸ್ತೆ ನಿರ್ಮಾಣಕ್ಕಾಗಿ ಎರಡು-ಮೂರು ಕೋಟಿ ರೂಪಾಯಿಗಳನ್ನು ಒದಗಿಸಿದರು. ಇಂಟರ್ ವಿಲೇಜ್ ಕಮ್ಯೂನಿಕೇಷನ್ ರೋಡುಗಳನ್ನು ಜಿಲ್ಲಾ ಬೋರ್ಡಿನವರೇ ಮಾಡಬೇಕೆಂದು ಸರ್ಕಾರದವರು ಹೇಳಿದಹಾಗೆ, ಜಿಲ್ಲಾ ಬೋರ್ಡಿನವರು ಮಾಡಬೇಕು ಎಂಬ ಸೆಕ್ಷನ್ ಎಲ್ಲಿದೆ? ಆದರೂ ಸಹ ಜಿಲ್ಲಾ ಬೋರ್ಡಿನವರು ಮಾಡಬೇಕು ಎಂದು ಆರ್ಡರ್ ಮಾಡಿದರು. ಅವರು ಅದನ್ನು ಪ್ರತಿಭಟಿಸಿದರು. ಸರ್ಕಾರಿ ನೌಕರರೇ ಅಲ್ಲಿಗೆ ಬಂದರೂ ರಸ್ತೆ ಕೆಲಸವೇನೋ ನಡೆಯಲಿಲ್ಲ. ರಸ್ತೆಗಳು ಹಾಗೆಯೇ ಇವೆ. ಬೇಕಾದಷ್ಟು ದುಡ್ಡು ಖರ್ಚು ಮಾಡಿದ ರಸ್ತೆಗಳ ಸ್ಥಿತಿಯನ್ನು ನೋಡಿದರೆ ಮನಸ್ಸಿಗೆ ಬಹಳ ಕಷ್ಟವಾಗುತ್ತದೆ. 1936ನೆ ಇಸವಿಯಿಂದ 1954ನೆ ಇಸವಿಯವರೆಗೆ ರಸ್ತೆಗಳ ನಿರ್ಮಾಣಕ್ಕೋಸ್ಕರ ಎಷ್ಟೋ ಹಣ ಖಚಾದರೂ ಆ ಕಾರ್ಯ ಕಾರ್ಯಗತವಾಗದೆ ಇರುವುದು ನನಗೆ ಬಹಳ ಸಂಕಟವಾಗುತ್ತದೆ. ನಾನು ಹೆಚ್ಚಿಗೆ ಹೇಳುವುದಿಲ್ಲ. ಈ ಖೋತಾ ಬಡ್ಜೆಟ್ಟಿನಲ್ಲಿ ನೀತಿ ನಿಯಮಗಳಿಲ್ಲ. ಒಂದು ಧರ್ಮವಿಲ್ಲ. ಆದ್ದರಿಂದ ಈ ಬಡ್ಜೆಟನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಈಗ ನಾನು ಹೇಳಿರುವ ಅಭಿಪ್ರಾಯವನ್ನು ಗಮನನಲ್ಲಿಟ್ಟುಕೊಂಡು ಕೊನೆಗೆ ನನ್ನ ಅಭಿಪ್ರಾಯಗಳ ಮೇಲೆ ಉತ್ತರಗಳನ್ನು ಮಂತ್ರಿಗಳು ಹೇಳುವಾಗ ಯಾವರೀತಿ ಸರ್ಕಾರದವರು ಆರ್ಡರ್ ಮಾಡಿದ್ದಾರೆಂಬುದನ್ನು ದಯವಿಟ್ಟು ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿ ಕೊಳ್ಳುತ್ತೇನೆ.

ಶ್ರೀ ಎಸ್. ಆರ್. ರಾಮಯ್ಯ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಈ ವರ್ಷದ ಆಯುವ್ಯಯದ ಪಟ್ಟಿಯನ್ನು ಮಾನ್ಯ ಹಣಕಾಸಿನ ಸಚಿವರು ನಮ್ಮ ಮುಂದೆ ಇಡುತ್ತಾ, ನಮ್ಮ ದೇಶದ ಸ್ಥಿತಿಗತಿಗಳನ್ನೂ, ಹಿಂದಿದ್ದ ಒಂದು ಸ್ಥಿತಿಯನ್ನೂ, ಮುಂದಿನ ಅಭಿವೃದ್ಧಿ ಕಾರ್ಯಗಳನ್ನೂ ಮತ್ತು ಇತರ ಸಮಸ್ಯೆಗಳನ್ನೂ ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ನಾನಾ ಭಾಗದ ಹಣಕಾಸಿನ ಬಾಬುಗಳು ಯಾವಯಾವುವು ಎಂಬುದು ನಮ್ಮ ಮುಂದೆ ಇವೆ. ಅಭಿವೃದ್ಧಿ ಕಾರ್ಯಗಳು ಬಹಳ ಮಟ್ಟಿಗೆ ಆಶಾದಾಯಕವಾಗಿವೆ. ಇದರಲ್ಲಿ ಇನ್ನೂ ಹೆಚ್ಚು ಹಣ ಬರುವ ಬಾಬುಗಳು ಇವೆ. ಅವುಗಳಲ್ಲಿ ಬಿಟ್ಟಿರುವುದನ್ನು ನಾನು ತೋರಿಸುತ್ತೇನೆ. ಎಕ್ಸೈಜು ಡ್ಯೂಟಿಯಿಂದ ಇನ್ನೂ ಸ್ವಲ್ಪ ಹಣ ಬರಬೇಕಾಗಿದೆ. ಈ ಇಲಾಖೆಯು ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿದರೆ, ನಮಗೆ ಈ ಬಾಬಿನಿಂದ ಹೆಚ್ಚು ಉತ್ಪತ್ತಿ ಸಿಕ್ಕುತ್ತದೆಂದು ಸೂಚನೆ ಕಂಡುಬರುತ್ತದೆ.

3 P.M.

ಇದೇ ರೀತಿಯಲ್ಲಿ ಈಗಾಗಲೇ ನೀರಾವರಿ ಯೋಜನೆಗಳನ್ನು ಕೈಕೊಂಡಿರುವುದರಿಂದ ಮತ್ತು ಇತರ ಅನೇಕ ಕಾಮಗಾರಿಗಳಿಂದ ಕಂದಾಯದ ಬಾಬಿನಲ್ಲಿ ಹಣ ಬರುವ ನಿರೀಕ್ಷೆಯಿದೆ. ಭೂಸುಧಾರಣೆಯಾದರೆ ಆದಷ್ಟು ಶೀಘ್ರವಾಗಿ ಹೆಚ್ಚು ಹಣ ಬರುವಂತೆ ಕಂಡುಬರುತ್ತದೆ.

ಅರಣ್ಯದ ವಿಚಾರದಲ್ಲಿ ಹೇಳುವುದಾದರೆ ಮೊದಲು ಹಳೆಯ ಮೈಸೂರಿನಲ್ಲಿ ನಮಗಿದ್ದ ಅರಣ್ಯದ ಎರಡರಷ್ಟು ಅರಣ್ಯ ಪ್ರದೇಶ ಈಗ ದೊರಕಿದೆ. ಅದಕ್ಕೆ ತಕ್ಕಂತೆ

ವರಮಾನವೂ ಒಂದಕ್ಕೆ ಎರಡರಷ್ಟು ಹೆಚ್ಚಾಗ ಬೇಕಾಗಿದೆ. ಅರಣ್ಯ ಸಂಪತ್ತು ವೃದ್ಧಿಯಾಗಲು ಬೇಕಾದ ಕಾರ್ಯಕ್ರಮ ಕೈಕೊಳ್ಳಬೇಕು. ನಮಗೆ ಗಂಧದ ಮರದಿಂದಲೇ ಹೆಚ್ಚಿನ ಆದಾಯ ಬರುತ್ತಿತ್ತು. ಈ ಬಾಬಿನಲ್ಲಿ ಸರಿಯಾದ ರಕ್ಷಣೆಯಿಲ್ಲದೆ ಸಾಕಷ್ಟು ಆದಾಯ ಬರುತ್ತಿಲ್ಲ ಎಂದು ಸ್ವಲ್ಪ ವಿಷಾದದಿಂದ ಹೇಳಬೇಕಾಗಿದೆ. ಅನೇಕ ಕಡೆ ಗಂಧದ ಮರ ಬೇಕಾದಷ್ಟು ಹಾಳಾಗುತ್ತಿದೆ. ಈ ಮರ ಬೆಳೆಯುವುದಕ್ಕೆ ಅವಕಾಶವಿಲ್ಲ, ಇದಕ್ಕೆ ಅರಣ್ಯಶಾಖೆ ಸಾಕಷ್ಟು ನಿಗ ಇಡಬೇಕು. ಕಳ್ಳ ಸಾಗಾಣಿಕೆಯಲ್ಲಿ ಮರಗಳು ಹೋಗಿವೆಯೆಂದು ಮೊನ್ನೆ ತಾನೆ ಪ್ರಶ್ನೆ ಸಹ ಬಂದಿತ್ತು. ಅದಕ್ಕೆ ಅವಕಾಶವಿಲ್ಲದಂತೆ ನೋಡಿಕೊಂಡು ಗಂಧದ ಮರಗಳು ಹೇರಳವಾಗಿ ಬೆಳೆಯಲು ಅವಕಾಶ ಮಾಡಬೇಕು. ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕು. ಈಗ ಪಟ್ಟಣಗಳಿಗೆ ಅರಣ್ಯದಿಂದ ಬೇಕಾದಷ್ಟು ಸೌದೆ ಸರಬರಾಯಿ ಆಗಬೇಕಾಗಿದೆ. ಈಗಾಗಲೆ ಹಳ್ಳಿಗಳಲ್ಲಿರುವ ಗುಂಡು ತೋಪು ಮತ್ತು ಇತರ ಮರಗಳಿಂದ ಪಟ್ಟಣಗಳಿಗೆ ಸೌದೆ ಬರುತ್ತಿದೆ. ಈ ಕಡೆ ಸರಿಯಾಗಿ ನಿಗಾ ಕೊಟ್ಟರೆ ಸರ್ಕಾರಕ್ಕೆ ದೊಡ್ಡ ವರಮಾನ ಬರಬಹುದು. ಅರಣ್ಯದಲ್ಲಿ ಸೌದೆ ಮತ್ತು ಇದ್ದಲಿಗೆ ಬೇಕಾದ ಮರ ಸಿಕ್ಕುತ್ತದೆ. ಕಬ್ಬಿಣದ ಕಾರ್ಖಾನೆಗೆ ಬೇಕಾದ ಅರಣ್ಯ ಸಂಪತ್ತು ಸಿಕ್ಕುತ್ತದೆ. ಇನ್ನೂ ಹೆಚ್ಚು ನಿಗಾ ಕೊಟ್ಟು ಅರಣ್ಯ ಸಂಪತ್ತನ್ನು ವೃದ್ಧಿ ಮಾಡಬೇಕು.

ಆಮೇಲೆ ಗೃಹಕೈಗಾರಿಕೆಗಳಲ್ಲಿ ರೇಷ್ಮೆ ಕೈಗಾರಿಕೆಯು ದೇಶದಲ್ಲಿ ಅದರಲ್ಲೂ ಮೈಸೂರು ರಾಜ್ಯದಲ್ಲಿ ಬಹಳ ಮುಖ್ಯವಾದುದು. ಅನೇಕ ಪ್ರಾಂತಗಳಲ್ಲಿ ರೇಷ್ಮೆ ಕೈಗಾರಿಕೆ ನಡೆಯುತ್ತಿದೆ, ಅದರಲ್ಲೂ ಮೈದಾನ ಪ್ರದೇಶದಲ್ಲಿ ಇದರಿಂದ ಬಹಳ ಮಟ್ಟಿಗೆ ಹಣ ಸಂಪಾದನೆ ಹೆಚ್ಚಾಗಿದೆ. ಈ ಸಂದರ್ಭದಲ್ಲಿ ಬೆಳೆಯುವವರಿಗೆ ಹೆಚ್ಚು ಹಣ ಬರುತ್ತಿಲ್ಲವೆಂದು ಗೊತ್ತಾಗಿದೆ. ಅದಕ್ಕೆ ಕಾರಣ ಇಷ್ಟೆ; ಎರಡು ವರ್ಷಗಳ ಹಿಂದೆ ಒಂದು ರಾ ಸಿಲ್ಕ್ ಮಾರ್ಕೆಟ್ ತೆರೆಯಲು ಕೇಂದ್ರ ಸರ್ಕಾರದವರು 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು, ಅದನ್ನು ಸರಿಯಾಗಿ ಉಪಯೋಗಿಸಿಲ್ಲ. ಈಗಲಾದರೂ ಈ ಕಡೆ ಗಮನ ಕೊಟ್ಟು ಆವಷ್ಟು ಜಾಗ್ರತೆ ಈ ಮಾರ್ಕೆಟ್ ತೆರೆದು ಹೆಚ್ಚು ಹಣ ಬರುವುದಕ್ಕೆ ವ್ಯವಸ್ಥೆ ಮಾಡಬಹುದು. ಆ ಹಣದಿಂದ ಈ ದಿವಸ ಖೋತಾ ಆಗಿರುವ ಬಡ್ಜೆಟ್ಟನ್ನು ತುಂಬಲು ಸಾಧ್ಯವಿದೆ, ಮತ್ತು ರೈತರಿಗೂ ಹೆಚ್ಚು ಹಣ ಉಳಿಯುವುದಕ್ಕೆ ಅವಕಾಶವಾಗುತ್ತದೆ.

ಸಹಕಾರ ಸಂಘಗಳ ಮೂಲಕ ಈ ದಿವಸ ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕು ಹೆಚ್ಚು ಹೆಚ್ಚಾಗಿ ಹಣ ಸಹಾಯ ನೀಡುತ್ತಿವೆ. ಈ ವಿಚಾರದಲ್ಲಿ ಸರ್ಕಾರವನ್ನು ಎಷ್ಟು ವಂದಿಸಿದರೂ ಸಾಲದು. ಸರ್ಕಾರದವರು ಹೆಚ್ಚು ಹೆಚ್ಚಾಗಿ ಗ್ರಾಮಾಂತರಗಳಿಗೆ ಹಣ ಒದಗಿಸುವ ವ್ಯವಸ್ಥೆ ಮಾಡಬೇಕಾಗಿದೆ. ಕೇವಲ ಸೊಸೈಟಿ ಇನ್ಸ್‌ಪೆಕ್ಟರ್ ಮತ್ತು ಅವರ ಸಿಬ್ಬಂದಿಯಿಂದ ಸಹಾಯ ಸಾಕಷ್ಟು ನೀಡಲು ಸಾಧ್ಯವಿಲ್ಲ. ಇದನ್ನು ದೃಷ್ಟಿಯಲ್ಲಿಟ್ಟು ಹೆಚ್ಚು ಹಣ ಒದಗಿಸಿ ಗ್ರಾಮಾಂತರಗಳ ರೈತರಿಗೆ ಹೆಚ್ಚು ಹಣ ಸಿಕ್ಕುವಂತೆ ಮಾಡಬೇಕು.

ಗ್ರಾಮಾಂತರಗಳಿಗೆ ನೀರು ಸರಬರಾಯಿ ಮಾಡುವುದನ್ನು ನೋಡಿದರೆ ಕುಡಿಯುವ ನೀರಿನ ಬಾವಿಗಳಿಗಾಗಿ ಕೊಡುವ ಹಣ ಸಾಲದಾಗಿದೆ. ಈಗಾಗಲೆ ಅರ್ಧಭಾಗದ ಹಳ್ಳಿಗಳ ಆವಶ್ಯಕತೆಯನ್ನು ಪೂರೈಸಲಾಗಿದೆಯೆಂದು ಹೇಳುತ್ತಿದ್ದಾರೆ. ಆದರೆ ನನಗೆ ಗೊತ್ತಿರುವ ಹಾಗೆ ಬಾವಿಗಳ ಸಂಖ್ಯೆ ಸಾಲದಾಗಿದೆ. ಅಲ್ಲದೆ ಮೈದಾನ ಪ್ರದೇಶದಲ್ಲಿ ಮೊದಲು ತೋಡಿಸಿದ ಬಾವಿಗಳಲ್ಲಿ ಈಗಾಗಲೆ ನೀರು ಒಣಗಿ ಹೋಗಿದೆ, ಕೆಲವು ಕಡೆ ನೀರು ಬತ್ತಿಹೋಗುವುದರಲ್ಲದೆ, ಪರಿಸ್ಥಿತಿ ಹೀಗಿದೆ, ಕಾಲ ಬಹಳ ಮಟ್ಟಿಗೆ ಬದಲಾಯಿಸಿದೆ. 20 ವರ್ಷಗಳ ಹಿಂದೆ ಕಟ್ಟಿದ ಅನೇಕ ಭಾವಿಗಳಲ್ಲಿ ಈ ದಿವಸ ನೀರಿಲ್ಲದೆ ಹೊಸ ಬಾವಿಗಳನ್ನು ತೆಗೆಯಬೇಕಾಗಿದೆ. ಇದರಲ್ಲಿ ಹರಿಜನರಿಗೇ ಬೇರೆ ಮತ್ತು ಉತ್ತಮರಿಗೇ ಬೇರೆ ಬಾವಿ ತೆಗೆಸಬೇಕೆಂಬ ತೀವ್ರತೆ ಬಹಳವಾಗಿದೆ. ಹೀಗಾಗಿ ಅನೇಕ ಕಡೆ ಎರಡು ಮೂರು ಬಾವಿ ತೆಗೆಸಬೇಕಾಗಿ ಬಂದಿದೆ. ಪಟ್ಟಣಗಳ ನೀರು ಸರಬರಾಯಿ ವಿಚಾರ ಹೇಳುವುದಾದರೆ ಮೊದಲು ಬೆಂಗಳೂರಿನ ಉದಾಹರಣೆ ನೋಡಬೇಕಾಗಿದೆ. ಒಂದು ಕೋಟಿ ರೂಪಾಯಿ ಕೊಟ್ಟರೂ ಬೆಂಗಳೂರಿನ ಆವಶ್ಯಕತೆಗೆ ಸಾಲದಾಗಿರುವಾಗ ಹಳ್ಳಿಗಳ ಪಾಡೇನು ಎಂಬುದನ್ನೂ ವಿಚಾರ ಮಾಡಬೇಕಾಗಿದೆ.

ಹೌಸಿಂಗ್ ಸ್ಕೀಂ ಉಪಯೋಗ ಹೆಚ್ಚಾಗಿ ಪಟ್ಟಣಿಗರಿಗೇ ಆಗಿದೆ. ಹಳ್ಳಿಗಳವರಿಗೆ ಮನೆ ಬೇಡವೆ? ಹಳ್ಳಿಗಳಲ್ಲಿ ರೈತರು ದನ, ಕುರಿ, ಕೋಳಿ ಎಲ್ಲವನ್ನೂ ಒಂದೇ ಕೊಠಡಿಯಲ್ಲಿ ಕಟ್ಟಿಕೊಂಡು ಅಲ್ಲೇ ಅಡಿಗೆ ಮಾಡಿಕೊಂಡು ಸಂಸಾರ ಮಾಡಬೇಕಾಗಿದೆ. ಹೆರಿಗೆ ಕೂಡ ಅಲ್ಲೇ ಆಗಬೇಕು. ಅವರ ಸಮಸ್ಯೆ ಇಷ್ಟು ಭೀಕರವಾಗಿರುವಾಗ ಆ ಕಡೆ ಸರಿಯಾಗಿ ನಿಗಾ ಕೊಟ್ಟಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಆದರೆ ವಿರೋಧ ಪಕ್ಷದವರು ಇದನ್ನು ದೊಡ್ಡದಾಗಿ ಭಾವಿಸಬಾರದು; ಸರ್ಕಾರದವರು ನಿಗಾ ಕೊಡುತ್ತಾರೆ. ಸಹಕಾರ ಸಂಘಗಳ ಮೂಲಕವಾಗಿ ಸರ್ಕಾರದವರು ಹಳ್ಳಿಗಳಿಗಾಗಿ ಪ್ರತ್ಯೇಕವಾಗಿ ಹಣ ಒದಗಿಸಿ ಗ್ರಾಮಾಂತರಗಳಲ್ಲಿ ಹೆಚ್ಚು ಹೆಚ್ಚಾಗಿ ಮನೆ ಕಟ್ಟುವುದಕ್ಕೆ ಅವಕಾಶ ಮಾಡಬೇಕು. ರೈತರಿಗೆ ಜಮೀನು ಎಷ್ಟು ಅವಶ್ಯಕವೋ ಮನೆಯೂ ಅಷ್ಟೇ ಅವಶ್ಯಕ. ಈಗ ಪಟ್ಟಣಗಳಿಗೆ ಹೆಚ್ಚಾಗಿ ಜನ ಬರುವುದಕ್ಕೆ ಕಾರಣ ಅನುಕೂಲ ಅಲ್ಲಿ ಜಾಸ್ತಿಯಾಗುತ್ತಿದೆ, ವರಮಾನ ಸಿಕ್ಕುತ್ತಿದೆ. ಹಳ್ಳಿಗಳಲ್ಲೂ ಸರಿಯಾದ ವ್ಯವಸ್ಥೆ ಮಾಡಿದರೆ ಅಲ್ಲೂ ಅನುಕೂಲತೆಯಿಲ್ಲದೆ ಇಲ್ಲ. ಈಗ ಸೌಲಭ್ಯ ಹಳ್ಳಿಗಳಲ್ಲಿ ಕಡಮೆಯಾಗಿದೆ. ಉದಾಹರಣೆಗೆ ಹಳ್ಳಿಗಳಲ್ಲಿ ವಾಸಕ್ಕೆ ಮನೆ ಸಿಕ್ಕುವುದಿಲ್ಲ, ಸೌಲಭ್ಯವಿಲ್ಲ ಎಂದು ಅನೇಕ ಉಪಾಧ್ಯಾಯರು ಅಲ್ಲಿ ಹೋಗಿ ವಾಸ ಮಾಡಲು ಇಷ್ಟಪಡುವುದಿಲ್ಲ. ಆದ್ದರಿಂದ ಹಳ್ಳಿಗಳಲ್ಲಿ ಮನೆ ಕಟ್ಟಿಸುವುದಕ್ಕೆ ಸರ್ಕಾರದವರು ತಕ್ಕ ಯೋಜನೆ ಮಾಡುವವರೆಗೂ ಸರ್ಕಾರದ ಯೋಜನೆಗಳು ಯಶಸ್ವಿಯಾಗಲು ಅವಕಾಶವಿಲ್ಲ.

ಮುಖ್ಯವಾದ ಇನ್ನೊಂದು ವಿಚಾರ ಪಾನನಿರೋಧಕ್ಕೆ ಸಂಬಂಧಪಟ್ಟದ್ದು. ಇದು ಬಹಳ ಶೋಚನೀಯವಾಗಿದೆ. ರಾಜ್ಯದಲ್ಲಿ ಅರ್ಧ-ಮುಕ್ಕಾಲು ಭಾಗದಲ್ಲಿ ನಿರೋಧವಿದ್ದು ಬಾಕಿ ಕಡೆ ನಿರೋಧವಿಲ್ಲದಿರುವುದರಿಂದ ಒಂದು ಕಡೆ ಕುಡಿಯುವುದಕ್ಕೆ ಅವಕಾಶವಿದ್ದು ಇನ್ನೊಂದು ಕಡೆ ನಿರ್ಬಂಧವಿರುವುದು ಶೋಚನೀಯ. ಈ ಬಾಬಿನಲ್ಲಿ ಬರುವ ಉತ್ಪತ್ತಿಯೆಲ್ಲಾ ಬಡವರಿಂದಲೇ ಎಂದು ಹೇಳಬಹುದು. ಈ ದಿವಸ ಕುಡಿತದಿಂದ ಹಣ ಸಂಪಾದಿಸಿ ಜನರ ಜೀವನ ಮಟ್ಟವನ್ನು ಹೆಚ್ಚಿಸದಿರುವುದು ಸರಿಯಲ್ಲ. ಸಂಸ್ಥಾನಾದ್ಯಂತ ಒಂದೇ ರೀತಿಯ ನೀತಿಯನ್ನನುಸರಿಸಿ ಸರಿಯಾದ ವ್ಯವಸ್ಥೆ ಈ ಬಗ್ಗೆ ಮಾಡಬೇಕಾದದ್ದು ಅಗತ್ಯ.

ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳಬೇಕಾದರೆ ಸ್ಕೂಲು ಕಟ್ಟಡಗಳ ಸಂಬಂಧದಲ್ಲಿ ಬಹಳ ಹಣ ಒದಗಿಸಬೇಕಾಗಿದೆ. ಈಗಾಗಲೆ ಸರ್ಕಾರದವರು ಒಂದೊಂದು ಸ್ಕೂಲಿಗೆ 750 ರೂಪಾಯಿಗಳನ್ನು ಒಂದು ಕೊಠಡಿಗಾಗಿ ಕೊಡುತ್ತಿದ್ದಾರೆ. ಆದರೂ ಕೆಲವು ತೊಂದರೆ

(ಶ್ರೀ ಎಸ್. ಆರ್. ರಾಮಯ್ಯ)

ಗಳಿವೆ. ಕಟ್ಟಡಕ್ಕೆ ಬೇಕಾದ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ತೊಂದರೆ, ಗ್ರಾಮ ಬಡಾವಣೆಗಳಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕಾದರೆ ಅದೊಂದು ದೊಡ್ಡ ಸಮಸ್ಯೆಯಾಗುತ್ತದೆ. ಅನೇಕ ಕಡೆ ಬಡಾವಣೆಗೆ ಅವಕಾಶವೇ ಇಲ್ಲ. ಆಯಾ ಸ್ಥಳಗಳಲ್ಲಿರುವ ಪಕ್ಷಗಳ ವೈಷಮ್ಯದಿಂದ ಅಥವಾ ಬೇರೆ ಯಾವುದಾದರೂ ಕಾರಣದಿಂದ ಬಡಾವಣೆಗೆ ಅವಕಾಶವಾಗುತ್ತಿಲ್ಲ. ಹೀಗೆ ನಾನಾ ರೀತಿಯ ತೊಂದರೆಗಳೇನಿವೆಯೋ ಅವನ್ನು ನಿವಾರಿಸಿ ಜನತೆಯ ಅವಶ್ಯಕತೆಗಳನ್ನು ಪೂರೈಸಬೇಕಾಗಿದೆ.

ಒಟ್ಟಿನಲ್ಲಿ ಹೇಳಬೇಕಾದರೆ ನಮ್ಮ ಮುಂದಿರುವ ಬಡ್ಜೆಟ್ ಬಹಳ ಆಶಾದಾಯಕವಾಗಿದೆ. ಆದರೆ ಅದನ್ನು ಕಾರ್ಯರೂಪಕ್ಕೆ ತರಲು ಪ್ರತಿಯೊಬ್ಬರೂ ಹೆಚ್ಚಾಗಿ ಶ್ರಮಿಸಬೇಕು, ಪ್ರತಿಯೊಬ್ಬರೂ ತ್ಯಾಗ ಮಾಡಬೇಕಾಗಿದೆ. ವಿರೋಧ ಪಕ್ಷದವರು ಈ ವಿಚಾರದಲ್ಲಿ ಟೀಕೆ ಮಾಡಿ, ಹಣದ ವ್ಯವಸ್ಥೆ ಸರಿಯಾಗಿಲ್ಲ, ಸರಿಯಾಗಿ ಹಂಚಿಲ್ಲವೆಂದು ಹೇಳಿದರೆ ಸಾಲದು. ಒಂದು ಕಡೆ ಬಾವಿ ತೆಗೆಸಿದರೆ ಸಾಲದು, ಕೆರೆಯಿಲ್ಲದಿರುವ ಕಡೆ ಕೆರೆ ಕಟ್ಟಬೇಕು, ಬಾವಿಗಳಿಗೆ ಪಂಪು ಹಾಕಿಸಿ ವಿದ್ಯುಚ್ಛಕ್ತಿಯನ್ನೊದಗಿಸಿ ನೀರು ಸರಬರಾಯಿ ಮಾಡಬೇಕು ಎಂದು ಹೇಳಿದರು.

ದೇಶದಲ್ಲಿ ಆಗಾಗ್ಗೆ ಗೃಹಕೈಗಾರಿಕೆಗಳು ಹೆಚ್ಚಬೇಕು. ಈಗ ಮಲೆನಾಡಿನಲ್ಲಿ ಮಳೆ ಹೆಚ್ಚಾಗಿ ಆಗುತ್ತದೆ ಎಂದು ಕೇಳಿಬಂದರೂ ಬಯಲು ಸೀಮೆಯಲ್ಲಿನಾವಿನ್ನೂ ಬರವನ್ನು ನೋಡಲೇ ಬೇಕಾಗಿದೆ. ಹೀಗೆಕೆಲವು ಕಡೆ ಅತಿವೃಷ್ಟಿ, ಕೆಲವು ಕಡೆ ಅನಾವೃಷ್ಟಿ ಈ ಎರಡು ಕಾರಣಗಳಿಂದ ನಮ್ಮ ದೇಶದ ಬಯಲು ಸೀಮೆಯಲ್ಲಿ ನಾವು ಬರವನ್ನು ಕಾಣುತ್ತಿದ್ದೇವೆ. ಆದ್ದರಿಂದ ಅಲ್ಲಲ್ಲೇ ಆಹಾರದ ಕೊರತೆ ಈಗಲೂ ಕಾಣುತ್ತದೆ. ಇದನ್ನು ಹೋಗಲಾಡಿಸಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲು ಆ ಕಡೆ ಹೆಚ್ಚು ಹೆಚ್ಚು ನಿಗಾ ಕೊಡಬೇಕು. ಬಯಲು ಸೀಮೆಯಲ್ಲಿ ಬಹಳಮಟ್ಟಿಗೆ ನೀರಾವರಿ ಯೋಜನೆಗಳಿಗೆ ಎಲ್ಲಿ ಅವಕಾಶವಿಲ್ಲವೋ ಅಂಥ ಕಡೆಗಳಲ್ಲಿ ಗೃಹಕೈಗಾರಿಕೆಗಳ ಸೌಲಭ್ಯಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗ ಹೊಸಕೋಟೆ, ದೇವನಹಳ್ಳಿ ವಿಚಾರ ತೆಗೆದುಕೊಂಡರೆ ಇವು ಬಯಲು ಸೀಮೆಯ ಪ್ರದೇಶ. ಈ ಎರಡು ತಾಲ್ಲೋಕುಗಳೂ ಬೆಂಗಳೂರಿಗೆ ಹತ್ತಿರದಲ್ಲಿವೆ. ಅಲ್ಲಿ ಜನಸಾಮಾನ್ಯರಿಗೆ ಎಷ್ಟು ಸೌಲಭ್ಯಗಳು ದೊರೆಯಬೇಕೋ ಅಷ್ಟು ಸೌಲಭ್ಯಗಳು ಸಿಕ್ಕುವುದೇ ಕಷ್ಟವಾಗಿದೆ. ಅಲ್ಲಿ ಸಾಮಾನ್ಯವಾಗಿ ವರ್ಷಕ್ಕೆ 28-30 ಅಂಗುಲಕ್ಕಿಂತ ಹೆಚ್ಚಾಗಿ ಮಳೆಯಾಗುವುದಿಲ್ಲ. ಆದರೂ ಸಹ ನದಿಯ ಆಶ್ರಯದಿಂದ ಬೆಳೆಯಾಗಬೇಕಾಗಿದೆ. ಮಳೆ ಬಹಳ ಕಡಮೆ; ಎಲ್ಲೋ ಅಲ್ಲಲ್ಲೇ ಕೆಲವು ಸಣ್ಣ ಪುಟ್ಟ ಕೆರೆಗಳಿವೆ. ಈ ಹೊತ್ತಿನ ದಿವಸ ಅರಣ್ಯ ಸಂಪತ್ತು ಯಾವರೀತಿ ದಿನೇ ದಿನೇ ಕ್ಷೀಣಗತಿಯಾಗುತ್ತಾ ಹೋಗುತ್ತಿದೆಯೋ ಅದೇ ರೀತಿಯಲ್ಲಿ ಅನೇಕ ಕೆರೆಗಳಲ್ಲಿ ಬಹಳ ವರ್ಷಗಳಿಂದಲೂ ಹೂಳು ತುಂಬಿಕೊಂಡು ಅವುಗಳು ಕ್ಷೀಣಗತಿಗೆ ಬಂದಿವೆ. ಅನೇಕ ಸಂದರ್ಭಗಳಲ್ಲಿ ನೀರು ಬಾರದೆ ಇರುವುದರಿಂದ ಬಹಳ ದುರ್ಭರವಾದ ಸ್ಥಿತಿಗೆ ಈ ಎರಡು ತಾಲ್ಲೋಕುಗಳೂ ಈಡಾಗಿ ಜನರಿಗೆ ಆಗುತ್ತಿರುವ ಕಷ್ಟಗಳು ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ.

ಇನ್ನು ವಿದ್ಯಾಭ್ಯಾಸದ ವಿಚಾರವಾಗಿ ಹೇಳುವುದಾದರೆ ಅಲ್ಲಿನ ಜನರು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು ಪಟ್ಟಣಕ್ಕೆ ಬರಬೇಕಾಗಿರುತ್ತದೆ. ಎರಡು ತಾಲ್ಲೋಕುಗಳಲ್ಲಿಯೂ ಕೇವಲ ಮೂರು ಹೈಸ್ಕೂಲುಗಳಿವೆ. ಇತ್ತೀಚೆಗೆ ನಮ್ಮ ಸರ್ಕಾರದವರು ಒಂದೆರಡು ಹೈಸ್ಕೂಲುಗಳನ್ನು ಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಇಷ್ಟು ಕಷ್ಟ ಸಮಸ್ಯೆಗಳನ್ನು ನಾವು ಇಟ್ಟುಕೊಂಡು, ಹೆಚ್ಚಿನ ವಿದ್ಯಾವ್ಯಾಸಂಗಕ್ಕಾಗಿ ನಮ್ಮ ಹುಡುಗರು ಬೆಂಗಳೂರು ಪಟ್ಟಣಕ್ಕೆ ಬಂದು ವ್ಯಾಸಂಗ ಮಾಡುವುದು ಬಹಳ ಕಷ್ಟ. ಆದ್ದರಿಂದ ಬೆಂಗಳೂರಿನಲ್ಲಿ ವಿದ್ಯಾಶಾಲೆಗಳನ್ನೂ ಮತ್ತು ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿ ಸೌಕರ್ಯಗಳನ್ನೂ ಹೆಚ್ಚು ಮಾಡುವುದಕ್ಕೆ ಬದಲಾಗಿ ಅದೇ ಸೌಕರ್ಯಗಳನ್ನು ಗ್ರಾಮಾಂತರ ಪ್ರದೇಶಗಳಿಗೂ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಕೇವಲ ಬೆಂಗಳೂರು ನಗರದಲ್ಲಿಯೇ ಕೈಗಾರಿಕೆಗಳನು ಅಭಿವೃದ್ಧಿ ಮಾಡುವುದಕ್ಕೆ ಬದಲಾಗಿ ಆ ಕೈಗಾರಿಕೆಗಳನ್ನು ಹೊಸಕೋಟೆ, ದೇವನಹಳ್ಳಿ ಮತ್ತು ವಿಜಯಾಪುರ ಮುಂತಾದ ಪ್ರದೇಶಗಳಲ್ಲಿ ನಡೆಸುವಂತೆ ಮಾಡಿ ಹೀಗೆ ವಿಕೇಂದ್ರೀಕರಣ ಮಾಡಿದರೆ ಆಗ ನಮ್ಮ ಜನರಿಗೂ ಸ್ವಲ್ಪಮಟ್ಟಿಗೆ ಸೌಕರ್ಯಗಳು ಒದಗುತ್ತವೆ. ಸರ್ಕಾರದವರು ಆಗ ಆ ಕಡೆಯೂ ಸ್ವಲ್ಪ ನಿಗಾ ಕೊಟ್ಟಹಾಗಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಸಂಚಾರ ಸೌಲಭ್ಯಗಳ ವಿಚಾರದಲ್ಲಿ ಹೇಳಬೇಕಾದರೆ ಬೆಳಗಾಂ, ಧಾರವಾಡಗಳಲ್ಲಿ ಹೇಗೆ ಸಂಚಾರ ಸೌಲಭ್ಯಗಳ ಕೊರತೆ ಇದೆಯೋ ಅದೇ ಕೊರತೆ ನಮ್ಮ ಕಡೆಯಲ್ಲೂ ಇದೆಯೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, ದೇವನಹಳ್ಳಿ ತಾಲ್ಲೂಕಿನಲ್ಲಿ ಚಿಕ್ಕಬಳ್ಳಾಪುರದಿಂದ ದೊಡ್ಡಬಳ್ಳಾಪುರಕ್ಕೆ ಹೋಗಬೇಕಾಗಿದ್ದರೆ 10-15 ಮೈಲಿ ಹೆಚ್ಚಾಗಿ ಬಳಸಿಕೊಂಡು ಹೋಗಬೇಕಾಗಿರುತ್ತದೆ. ಹೀಗೆ ಸಾರಿಗೆ ಸಂಪರ್ಕಕ್ಕೆ ತೊಂದರೆಯನ್ನು ತಪ್ಪಿಸಲೂ ಹೋಗುವ ರಸ್ತೆಗಳಿಗೆ ಸಂಪರ್ಕ ಕಲ್ಪಿಸಲೂ ಹೆಚ್ಚಿನ ನಿಗಾ ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಹೊಸಕೋಟೆ ತಾಲ್ಲೋಕಿನಲ್ಲಿ ದಕ್ಷಿಣ ಪಿನಾಕಿನಿ ನದಿ ಹರಿಯುತ್ತದೆ. ಮಳೆಗಾಲದಲ್ಲಿ ಈ ನದಿಯಲ್ಲಿ ತುಂಬ ನೀರು ಹರಿಯುವುದರಿಂದ ಆಗ ರಸ್ತೆಗಳ ಸಂಚಾರಕ್ಕೆ ತುಂಬ ಅಡ್ಡಿಯಾಗುತ್ತದೆ. ಆದ್ದರಿಂದ ಮುತ್ತೂರಿನ ಬಳಿ ಒಂದು ಸೇತುವೆಯನ್ನು ಮಾಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈ ಆಯವ್ಯಯ ಪಟ್ಟಿಯನ್ನು ಒಪ್ಪಿಕೊಂಡು ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಎಂ. ಬಸವೇಗೌಡ (ಚಿಕ್ಕಮಗಳೂರು).—ಮಾನ್ಯ ಸಭಾಪತಿಗಳೇ, ಮಾನ್ಯ ಹಣಕಾಸಿನ ಸಚಿವರು ನಮ್ಮ ಮುಂದೆ ಇಟ್ಟಿರುವ ಬಡ್ಜೆಟ್‌ನಲ್ಲಿ ನವ ಮೈಸೂರಿಗೆ ಸಂಬಂದಪಟ್ಟ ಮೂರನೆ ಒಂದುಭಾಗವಾದ ಮಲೆನಾಡು ಪ್ರದೇಶದ ಅಭಿವೃದ್ಧಿ ಕಾರ್ಯಗಳನ್ನು ಹೇಳದೆ ಇರುವುದು ಬಹಳ ಶೋಚನೀಯ ಎಂದು ನಾನು ಹೇಳಬೇಕಾಗಿದೆ. ಮಲೆನಾಡು ಪ್ರದೇಶವು ಅಷ್ಟು ಪ್ರಾಮುಖ್ಯವೆಂದು ಘನ ಸರ್ಕಾರದವರು ತಿಳಿದು ಕೊಂಡಿದ್ದಾರೋ ಇಲ್ಲವೋ ಎಂದು ನನಗೆ ಅನುಮಾನವಾಗಿದೆ. ಕಾಫಿ, ಏಲಕ್ಕಿ, ಮೆಣಸು, ಅಡಿಕೆ, ರಬ್ಬರು, ಇತ್ಯಾದಿ ಪದಾರ್ಥಗಳಿಂದ ಫಾರಿನ್ ಎಕ್ಸ್‌ಚೇಂಜ್‌ನಿಂದ ಬರುವ ಡ್ಯೂಟಿ ಎನ್ನತಕ್ಕ ಟ್ಯಾಕ್ಸ್ ಎಷ್ಟು ಬರುತ್ತದೆ; ಯಾವ ಪದಾರ್ಥಗಳ ಮಾರಾಟದಿಂದ ಟ್ಯಾಕ್ಸ್ ಎಷ್ಟುಬರುತ್ತದೆ, ಎನ್ನುವುದನ್ನು ಯೋಚನೆ ಮಾಡುವುದಾದರೆ ಶೇಕಡ 25 ಭಾಗದಷ್ಟು ರೆವೆನ್ಯೂ ಮಲೆನಾಡಿನಲ್ಲಿ ಬೆಳೆಯತಕ್ಕ ಪದಾರ್ಥಗಳಿಂದಲೇ ಬರಬಹುದೆಂದು ತಿಳಿದಿದ್ದೇನೆ. ಏಕೋ ಈ ಮಲೆನಾಡು ಪ್ರದೇಶವನ್ನು ಇಷ್ಟು ಕಡೆಗಣ್ಣಿನಿಂದ ನೋಡುತ್ತಿರುವುದು ತುಂಬ ಶೋಚನೀಯ

ವಾಗಿದೆ. ಈ ಮಲೆನಾಡು ಇಲ್ಲಿಗೆ ಹತ್ತು ವರ್ಷಗಳ ಕೆಳಗೆ ಯಾವ ಸ್ಥಿತಿಯಲ್ಲಿತ್ತೋ ಈಗಲೂ ಅದೇ ಸ್ಥಿತಿಯಲ್ಲಿದೆ. ಬೆಂಗಳೂರಿನಲ್ಲಿರತಕ್ಕ ಮಿನಿಸ್ಟರುಗಳು ಜೂನ್, ಜೂಲೈ, ಆಗಸ್ಟ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಮಲೆನಾಡಿಗೆ ಟೂರ್ ಹಾಕಿಕೊಂಡು ಬಂದು ಒಳಪ್ರದೇಶಕ್ಕೆ ಹೋದರೆ ಆಗ ಅವರಿಗೆ ಅಲ್ಲಿನ ಸ್ಥಿತಿಗತಿಗಳು ಗೊತ್ತಾಗುವುದು.

ಮಲೆನಾಡಿನ ಒಳಪ್ರದೇಶದ ವಿಚಾರ ಹಾಗಿರಲಿ, ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ನೋಡಿದರೆ ಸಾಕು ನಿಜವಾಗಿಯೂ ಅಲ್ಲಿನ ಸ್ಥಿತಿಯು ಎಷ್ಟು ಶೋಚನೀಯವಾಗಿರುತ್ತದೆ ಎಂಬುದು ಗೊತ್ತಾಗುತ್ತದೆ. Plantation Enquiry Commission ಅವರು ಮಲೆನಾಡಿಗೆ ಬಂದಿದ್ದಾಗ ಅವರು ತಮ್ಮ ರಿಪೋರ್ಟ್‌ನಲ್ಲಿ ಪ್ರಾಂತ ಸರ್ಕಾರದವರು ಮೋಟಾರ್ ಟ್ಯಾಕ್ಸ್ ವಗೈರೆ ಟಾಕ್ಸ್‌ಗಳನ್ನು ಹೆಚ್ಚು ಮಾಡಲು ಆಸಕ್ತಿ ವಹಿಸಿದ್ದಾರೆ, ಆದರೆ ಜನರಿಗೆ ರಸ್ತೆಗಳ ಸೌಕರ್ಯ ಇತ್ಯಾದಿಗಳನ್ನು ಒದಗಿಸುವುದರಲ್ಲಿ ಯಾವ ಆಸಕ್ತಿಯನ್ನೂ ವಹಿಸಿಲ್ಲ, ಮಲೆನಾಡಿಗೆ ಸಂಬಂಧಪಟ್ಟ ಯಾವ ಅಭಿವೃದ್ಧಿ ಕಾರ್ಯ ಕ್ರಮವನ್ನೂ ಕೈಗೊಳ್ಳದೆ ಇರುವುದು ಬಹಳ ಶೋಚನೀಯ ಎಂಬುದಾಗಿ ಬರೆದಿದ್ದಾರೆ. ಆದರೆ ಈಗ ಆಡಳಿತ ವಿಷಯದಲ್ಲಿ ಸ್ವಲ್ಪ ಬದಲಾವಣೆಯಾಗಿದೆ. ಅಷ್ಟು ಶಿವಾಯಿ ಜನಗಳಿಗೆ ಇರುವ ತೊಂದರೆಗಳು ಈಗಲೂ ಹಾಗೆಯೇ ಇವೆ. ಇದನ್ನೆಲ್ಲಾ ಮಂತ್ರಿಗಳು ಟೂರ್ ನೋಟ್ಸ್‌ನಲ್ಲಿ ಪ್ರವಾಸಬಂದಾಗ್ಗೆ ಗುರುತು ಹಾಕಿಕೊಂಡು ಈ ಕೆಲಸಗಳನ್ನು ನಡೆಸಲು ಆಸಕ್ತಿ ವಹಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಂಡರೆ ಆಗ ಅನೇಕ ತೊಂದರೆಗಳಲ್ಲಿ ಕೆಲವು ತೊಂದರೆಗಳಾದರೂ ಬೇಗ ನಿವಾರಣೆ ಆಗುತ್ತವೆ ಎಂದು ನಾನು ಸೂಚಿಸ ಬಯಸುತ್ತೇನೆ. ಅಡ್‌ಮಿನಿಸ್ಟ್ರೇಷನ್ ವಿಚಾರಗಳಲ್ಲಿ ಮಧ್ಯೆ ಇಂಟರ್ ಫಿಯರೆನ್ಸ್ ಆಗುವುದನ್ನು ತಪ್ಪಿಸುವುದಕ್ಕೆ ತಕ್ಕ ಕಾರ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಈಗ ಸಿವಿಲ್ ವರ್ಕ್ಸ್ ಎಂದು ಹೇಳುತ್ತಾ ಹಣವನ್ನು ಖರ್ಚುಮಾಡುತ್ತಿದ್ದಾರೆ. ಅದರಲ್ಲೂ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನಲ್ಲಿ ಜನರಲ್ ಆಗಿ ದಕ್ಷತೆ ಕಡಮೆಯಾಗುತ್ತಿದೆ. ವಿಶೇಷವಾಗಿ ಅಗತ್ಯವಿಲ್ಲದ ಬಾಬುಗಳಿಗಾಗಿ ಹಣ ಅನವ್ಯಯ ಆಗುತ್ತಿದೆ. ಇದನ್ನೆಲ್ಲಾ ಸರಕಾರವು ಸರಿಯಾಗಿ ಪರಿಶೀಲಿಸಿ ಈ ಕಾರ್ಯಕ್ರಮಗಳ ಬಗ್ಗೆ ಸಮರ್ಪಕವಾದ ಏರ್ಪಾಡುಗಳನ್ನು ಮಾಡಬೇಕೆಂದು ನಾನು ಸೂಚಿಸುತ್ತೇನೆ.

ರಸ್ತೆ ಸೌಕರ್ಯಗಳನ್ನು ನೋಡಿಕೊಳ್ಳುವುದಕ್ಕೋಸ್ಕರ 'Chief Engineer for Highways' ಎಂದು ಹೇಳಿ ಒಬ್ಬರನ್ನು ನೇಮಿಸಬೇಕು.

ಅಗ್ರಿಕಲ್ಚರಲ್ ಡಿಪಾರ್ಟಮೆಂಟಿಗೆ ಸಂಬಂಧಪಟ್ಟಂತೆ ಈಗಾಗಲೇ ಟ್ರ್ಯಾಕ್ಟರುಗಳ ವಿಷಯವಾಗಿ ಹೇಳಿದರು. ತೆಂಗಿನಬೆಳೆ ವಿಷಯ. Coconut is a food crop. ತೆಂಗಿನಬೆಳೆ ದೇಶದಲ್ಲಿ ಎಷ್ಟು ಮುಖ್ಯವಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಅಲ್ಲದೆ ತೆಂಗಿನಕಾಯಿಯಿಂದ ಕೊಬ್ಬರಿ ಎಣ್ಣೆ, ಸೋಪುಗಳನ್ನು ತಯಾರಿಸುತ್ತಾರೆ. ಹಾಗೆಯೇ ಕೆಲವು ಕೈಗಾರಿಕೆಗಳಿಗೂ ಉಪಯೋಗಿಸುತ್ತಿದ್ದಾರೆ. ಆದಕಾರಣ ಪ್ಲಾನಿಂಗ್ ಕಮಿಷನ್ನಿನವರು ಇದಕ್ಕೆ ತಕ್ಕ ನೆರವನ್ನೀಯಬೇಕೆಂದು ಪ್ರಾಂತ ಸರಕಾರದವರು ಇದಕ್ಕೆ ತಕ್ಕ ಸೌಕರ್ಯಗಳನ್ನೊದಗಿಸಿ ಮುಂದಕ್ಕೆ ತರಬೇಕೆಂದು ಸಲಹೆಮಾಡಿದ್ದಾರೆ. ಇದರಿಂದ ದೇಶಕ್ಕೂ ಅನುಕೂಲವಾಗುತ್ತದೆ.

ಈಗ Coconut nursery scheme ಎಂಬುದೊಂದಿದೆ. ಇದರ ಪ್ರಕಾರ 6,000 ಸಸಿಗಳನ್ನು ಕೊಡಿ ಎಂದು ಕೇಳಿದರೆ 600 ಸಸಿಗಳನ್ನು ಕೊಡುತ್ತಾರೆ. ಈಗ ನಾವು ನೋಡಿದ್ದೇವೆ. ಹೀಗೆ ಜಾತಿ ಸಸಿಗಳನ್ನು ಕೊಡುವುದರಿಂದ ಎಂಟುವರ್ಷದಲ್ಲಾಗುವ ಫಸಲು ಐದು ವರ್ಷದಲ್ಲೇ ಬಿಡುತ್ತದೆ. ಆದುದರಿಂದ ಇಂತಹ ಒಳ್ಳೆಯ ಸ್ಕೀಮನ್ನು ಇನ್ನೂ ಎಕ್ಸ್‌ಟೆಂಡ್ ಮಾಡಿ ಈ ತೆಂಗಿನ ಬೆಳೆ ಬೆಳೆಯುತಕ್ಕ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ನನ್ನ ವಿಜ್ಞಾಪನೆ.

ಇನ್ನು ಕೋ ಆಪರೇಟಿವ್ ಸೊಸೈಟಿಗಳಲ್ಲಿ ಆಡಳಿತವೇ ಸರಿಯಾಗಿ ನಡೆಯುತ್ತಿಲ್ಲ. ಎಷ್ಟೋಕಡೆ ಪದಾರ್ಥಗಳೇ ಸರಿಯಾಗಿ ಬರುತ್ತಿಲ್ಲ. ಹೀಗೆ ಈ ಅವ್ಯವಸ್ಥೆಗಳೇನಿವೆ ಎಂಬುದನ್ನು ಪರಿಶೀಲನೆ ಮಾಡಿ ಅವುಗಳ ನಿವಾರಣೆಗೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದು ನನ್ನ ಸೂಚನೆ.

ಈಗ ವಿದ್ಯಾಭ್ಯಾಸಕ್ಕೆ ಸುಮಾರು 30 ಪರ್ಸೆಂಟು ಹಣವನ್ನು ಖರ್ಚುಮಾಡಬೇಕೆಂದು ಬಜೆಟಿನಲ್ಲಿ ನಮೂದಿಸಿದೆ. ಆದರೆ ಈಗ 30 ಪರ್ಸೆಂಟು ಖರ್ಚು ಮಾಡಿದರೂ ಒಂದೇ 300 ಪರ್ಸೆಂಟ್‌ನಷ್ಟು ವೆಚ್ಚ ಮಾಡಿದರೂ ಒಂದೇ. ಏನೂ ಪ್ರಯೋಜನವಾಗುತ್ತಿಲ್ಲ. ಎಷ್ಟೋ ಸ್ಕೂಲುಗಳಲ್ಲಿ ಒಂದು ವರ್ಷದಿಂದ ಉಪಾಧ್ಯಾಯರುಗಳೇ ಇಲ್ಲ. ಎಷ್ಟೋ ಸ್ಕೂಲುಗಳಿಗೆ ಕಟ್ಟಡಗಳೇ ಇಲ್ಲ. ಇದ್ದರೂ ಅರ್ಧಂಬರ್ಧ ಕಟ್ಟಿ ಹಾಗೆಯೆ ನಿಂತಿವೆ.

ಅನೇಕ ಉತ್ತಮವಾದ ಗ್ರಂಥಗಳು ಇತರ ಭಾಷೆಗಳಲ್ಲಿವೆ. ಇವುಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಹಂಚಿದರೆ ಇದರಿಂದ ಜನಗಳಿಗೆ ಹೆಚ್ಚು ಅನುಕೂಲವಾಗುತ್ತದೆ, ಎಂದು ನಾನು ತಿಳಿದುಕೊಂಡಿದ್ದೇನೆ.

ರಾಜ್ಯಪಾಲರ ಭಾಷಣದಲ್ಲಿ ಫೇರ್ ಪ್ರೈಸ್ ಡಿಪೋಗಳನ್ನು ಧಾರವಾಡ, ಬಿಜಾಪುರ, ಗುಲ್ಬರ್ಗ ಜಿಲ್ಲೆಗಳಲ್ಲಿ ತೆರೆಯುವುದಾಗಿ ಹೇಳಿದ್ದಾರೆ. ಇದು ಸಾಲದು. ನನ್ನ ದೃಷ್ಟಿಯಲ್ಲಿ ಈರೀತಿಯಾದ ಫೇರ್ ಪ್ರೈಸ್‌ಡಿಪೋಗಳನ್ನು ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿಯೂ ತೆರೆಯಬೇಕು. ಇದರಿಂದ ಬಡವರಿಗೆ ಬಹಳವಾದ ಅನುಕೂಲಗಳು ಸಿಕ್ಕುತ್ತವೆ.

ಇನ್ನು ಫ್ಯಾಮಿಲಿ ಪ್ಲಾನಿಂಗ್‌ಕ್ಲಿನಿಕ್ ಎಂದರೆ ಮಿತ ಸಂತಾನ ಸಲಹಾ ಕೇಂದ್ರದ ವಿಷಯವಾಗಿ ಕೆಲವು ಅಂಶಗಳನ್ನು ಹೇಳಬೇಕಾಗಿದೆ. ಈ ರೀತಿಯ ಕೇಂದ್ರಗಳು ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿವೆ ಎಂದು ಕೇಳಿದ್ದೇನೆ. ಈ ರೀತಿಯಾಗಿ ಈ ಎರಡು ಪ್ರದೇಶಗಳಲ್ಲಿಯೇ ಕೇಂದ್ರವನ್ನು ತೆರೆದರೆ ಪಾಪ್ಯುಲೇಷನ್ ಕಂಟ್ರೋಲುಮಾಡಿದಂತಾಗುವುದಿಲ್ಲ. ಸರ್ವೇ ಸಾಧಾರಣವಾಗಿ ಎಲ್ಲ ಜನಗಳಿಗೂ ತಿಳಿವಳಿಕೆ ಕೊಡುವುದಕ್ಕೆ ಅನುಕೂಲವಾಗುವಂತೆ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಈ ರೀತಿಯ ಮಿತ ಸಂತಾನ ಸಲಹಾ ಕೇಂದ್ರಗಳನ್ನು ತೆರೆಯಬೇಕು ಮತ್ತು ಸಂಸ್ಥಾನದಲ್ಲಿ 91 ಲಕ್ಷ ದನಕರುಗಳು ಇವೆಯೆಂದು ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ. ಇವಕ್ಕೆ ತಕ್ಕ ಗೋಮಾಳಗಳನ್ನು ನಿರ್ಮಿಸಬೇಕು. ಮಲೆನಾಡಿನಿಂದ ಸರ್ಕಾರಕ್ಕೆ ಹೆಚ್ಚಿನ ಉತ್ಪತ್ತಿ ಬರುತ್ತಿದೆ ಮತ್ತು ಹೇರಳವಾದ ಉತ್ಪನ್ನಗಳು ಬೆಳೆಯುತ್ತಿರುವುದು ಮಲೆನಾಡಿನಲ್ಲಿಯೇ ಅಲ್ಲದೆ ಸೌದೆಗಾಗಿ ಈ ಮಲೆನಾಡಿನಲ್ಲಿರುವ ಕಾಡುಗಳನ್ನು ಬೆಳೆಸಬೇಕು. ಮಾನ್ಯ ಮುಖ್ಯ ಮಂತ್ರಿಗಳಿಗೂ ಈ ವಿಷಯಗಳೆಲ್ಲವೂ ತಿಳಿದೇ ಇದೆ. ಆದುದರಿಂದ ಈ ಕಾಡುಗಳನ್ನು ಬೆಳೆಸಲು ಸರಕಾರದವರು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

(ಶ್ರೀ ಎ. ಎಂ. ಬಸವೇಗೌಡ)

ಆಮೇಲೆ ಈಗ Plantation Labour Housing Schemeಗೆ ಮೂರು ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದೆ. ಈ ಮೂರು ಲಕ್ಷವೂ ಯಾವುದಕ್ಕೂ ಸಾಲುವುದಿಲ್ಲ. ಕೊನೆಯ ಪಕ್ಷ 25 ಲಕ್ಷ ವನ್ನಾದರೂ ರಿಸರ್ವ್‌ಮಾಡಬೇಕೆಂದು ನನ್ನ ಸೂಚನೆ.

ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ತಮ್ಮ ಮುಂದೆ ಮಂಡಿಸಿರತಕ್ಕ ಬಡ್ಜೆಟ್ಟನ್ನು ಸ್ವಾಗತ ಮಾಡುತ್ತಾ ಕೆಲವು ಸಲಹೆಗಳನ್ನು ಸರಕಾರದವರ ಅವಗಾಹನೆಗೆ ತರ ಬಯಸುತ್ತೇನೆ.

ಸರಕಾರದವರು ಈ ಭೂ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ ಒಂದು ''ಜತ್ತಿ ಸಮಿತಿ''ಯನ್ನು ನೇಮಕಮಾಡಿದ್ದಾರೆ. ಈ ಜತ್ತಿ ಸಮಿತಿಗೆ ಸರಕಾರ ಕೆಲವು ಸೂಚನೆಗಳನ್ನು ಅವರ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಕೊಟ್ಟಿದ್ದಾರೆ. ಸಾಧಾರಣವಾಗಿ ಗೇಣಿದಾರನು ಅವನಿಗಿರುವ ಜಮೀನನ್ನು ವಾರಕ್ಕೋ ಅಥವಾ ಗುತ್ತಿಗೆಗೋ ಸಾಗುವಳಿ ಮಾಡುತ್ತಾನೆ. ಸಾಗುವಳಿದಾರನಿಗೆ ತಾನೇ ಸ್ವಂತ ಸಾಗುವಳಿ ಮಾಡಬೇಕೆಂಬ ಇನ್ನೊಂದು ಉದ್ದೇಶ ಇರುತ್ತದೆ. ಯಾರು ಜಮೀನನ್ನು ಸಾಗುವಳಿ ಮಾಡುತ್ತಾನೋ ಅವನೇ ಆ ಜಮೀನಿನ ಮಾಲೀಕತ್ವವನ್ನು ಪಡೆಯಬೇಕೆಂದು ಶಾಸನ ಇರಬೇಕೆಂಬುದು ಮೂಲೋದ್ದೇಶ. ಇತ್ತೀಚೆಗೆ ಸರ್ಕಾರವೇ ಸರ್ವಶ್ರೇಷ್ಠವಾದ ಮಾಲೀಕ ಎಂದು ಹೇಳಿ ನಮ್ಮ ದೇಶದಲ್ಲಿಯೇ ಒಂದು ಅಭಿಪ್ರಾಯ ಹೊರಬಿದ್ದಿದೆ. ಇನ್ನೂ ಸರಕಾರದವರು ಅಷ್ಟು ದೂರ ಹೋಗಿಲ್ಲ. ಸಂಪೂರ್ಣವಾಗಿ ಈ ವ್ಯಕ್ತಿಯ ಮಾಲೀಕತ್ವವನ್ನು ತೆಗೆದು ಹಾಕಬೇಕೆಂದೆನ್ನುವುದಕ್ಕೆ ಸರ್ಕಾರದಿಂದ ಒಂದು ಆಜ್ಞೆ ಹೊರಟಂತೆ ಕಂಡುಬರುವುದಿಲ್ಲ. ಈಗಿನ ಗುರಿ ಒಬ್ಬ ರೈತ, ತಾನು ಮಾಡತಕ್ಕ ಭೂಮಿಯನ್ನು ಅವನೇ ಹೊಂದಬೇಕು ಎಂಬ ಗುರಿಯನ್ನು ಮುಟ್ಟುವುದಕ್ಕಾಗಿ ಎಂದಿದೆ.

ಈ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ನನಗೆ ಒಂದು ಲೋಪ ಕಾಣುತ್ತಿದೆ. ಅದೇನೆಂದರೆ ಬಹಳ ಚಿಕ್ಕ ಚಿಕ್ಕವಾಗಿ ಹಂಚಿ ಹೋಗುತ್ತಿರುವ ಜಮೀನುಗಳ ಬಗ್ಗೆ ಏನುಮಾಡಬೇಕೆಂಬುದಕ್ಕೆ ಯಾವ ಮಾರ್ಗವನ್ನೂ ಸೂಚಿಸಿರುವುದು ಕಂಡುಬಂದಿಲ್ಲ. ಭೂಮಿಯು ಭಾಗಗಳಾಗಿ ಒಡೆದುಹೋಗುತ್ತಿರುವುದನ್ನು ತಪ್ಪಿಸುವುದಕ್ಕೆ ಸದ್ಯದಲ್ಲಿ ಯಾವ ಮಾರ್ಗವೂ ಇಲ್ಲ. ಈ ರೀತಿಯ ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗನ್ನು ತಡೆಗಟ್ಟುವ ಷರತ್ತನ್ನು ಈ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಸೇರಿಸತಕ್ಕದ್ದು ಒಳ್ಳೆಯದೆಂದು ನಾನು ಸಲಹೆಮಾಡುತ್ತೇನೆ. ಹೆಚ್ಚು ಆಹಾರ ಬೆಳೆಯುವ ದೃಷ್ಟಿಯಿಂದ ಈ ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್‌ನ್ನು ತಪ್ಪಿಸುವುದು ಅವಶ್ಯಕವಾಗಿದೆ. ಸರ್ಕಾರದ ಉದ್ದೇಶ ಹೀಗಿದ್ದರೂ ಈ ಷರತ್ತಿನಲ್ಲಿ ಈ ವಿಷಯ ತಪ್ಪಿ ಹೋಗಿರಬಹುದೆಂದು ಕಾಣುತ್ತದೆ. ಈ ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್‌ನ್ನು ತಪ್ಪಿಸಬೇಕಾದರೆ ಇನ್ನೊಂದು ಸಮಸ್ಯೆಯನ್ನು ಇದರ ಜೊತೆಯಲ್ಲಿಯೇ ನಾವು ಯೋಚನೆಮಾಡಬೇಕು. ಈಗ ನಮ್ಮ ದೇಶದಲ್ಲಿ Hindu Code ಏನಿದೆ ಇದರಲ್ಲಿ ಇರತಕ್ಕ ನಿಯಮಗಳ ಪ್ರಕಾರ ಗಂಡು ಮಕ್ಕಳಿಗೂ ಮತ್ತು ಹೆಣ್ಣು ಮಕ್ಕಳಿಗೂ ಕೂಡ ಒಂದು ಭಾಗವನ್ನು ಕೊಡಬೇಕೆಂದಿದೆ. ಈಗ ಹೆಣ್ಣು ಮಕ್ಕಳಿಗೂ ಭಾಗವನ್ನು ಕೊಡಬೇಕೆಂದಾಗಿರುವಾಗ, ಭೂಮಿಯನ್ನು ಹೆಚ್ಚಾಗಿ ಭಾಗ ಮಾಡುವುದಕ್ಕೆ ಅವಕಾಶವಾಗಿದೆ. ಈ ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್‌ನ್ನು ತಪ್ಪಿಸಬೇಕಾದರೆ ತಕ್ಕ ಏರ್ಪಾಡುಗಳನ್ನು ಮಾಡಬೇಕು. ಈಗ ಬಾಂಬೆ ಭಾಗದಲ್ಲಿ ಇರುವ ಕಾನೂನು ಇದಕ್ಕೆ ಅನುಕೂಲವಾಗಿದೆ ಎಂದು ನಮ್ಮ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ನಾನು ಹೇಳುತ್ತಿರುವುದು ನಮ್ಮ ಇಡೀ ಮೈಸೂರಿಗೆ ಅನುಕೂಲವಾಗುವ ಕಾಯಿದೆಯನ್ನು ತರುವುದಕ್ಕೆ ಪ್ರಯತ್ನ ಮಾಡೋಣ ಮತ್ತು ಆ ರೀತಿ ಮಾಡಲು ತಕ್ಕ ಅಂಶವನ್ನು ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಸೇರಿಸುವುದು ಒಳ್ಳೆಯದೆಂದು ನಾನು ಸಲಹೆಮಾಡುತ್ತೇನೆ.

3-30 P.M.

ಆಮೇಲೆ ಸರಕಾರದ ಒಂದು ಟ್ಯಾಕ್ಸೇಷನ್ ಪಾಲಿಸಿ ವಿಚಾರದಲ್ಲಿ ನಾನು ಒಂದು ಸಲಹೆ ಮಾಡಬೇಕೆಂದು ಯೋಚಿಸಿದ್ದೇನೆ. ಈಗ ಭೂ ಕಂದಾಯದ ವಿಚಾರ. ನಮ್ಮ ಮುಂದೆ ಮಾನ್ಯ ಹಣಕಾಸಿನ ಸಚಿವರು ಮೈಸೂರು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಿಲ್ಲನ್ನು ಮಂಡಿಸಿದ್ದಾರೆ. ನಮ್ಮ ದೇಶದಲ್ಲಿ ಹಿಂದೆ ಇದ್ದಂಥ ಒಂದು ಕಾನೂನನ್ನು ಈಗ ಸ್ವಲ್ಪ ಬದಲಾವಣೆಮಾಡಿ ಹೊಸ ರೀತಿಯಲ್ಲಿ ಈ ಮಸೂದೆಯನ್ನು ತಂದಿದ್ದಾರೆ. ಕಾನೂನು ಪ್ರಕಾರವಾಗಿ ಕೇವಲ ಕಮರ್ಷಿಯಲ್ ಕ್ರಾಪ್ಸ್ ಮೇಲೆ ಮಾತ್ರ ಇನ್‌ಕಂಟ್ಯಾಕ್ಸ್ ಬೀಳುತ್ತಿದೆ. ಕಮರ್ಷಿಯಲ್ ಕ್ರಾಪ್ಸ್ ಮೇಲೆ ಮಾತ್ರ ನಾವು ತೆರಿಗೆಯನ್ನು ತೆಗೆದುಕೊಂಡು ಆಹಾರ ಬೆಳೆಗಳಾದ ಬತ್ತ, ರಾಗಿ, ಜೋಳ ಇತ್ಯಾದಿ ಇತ್ಯಾದಿ, ಬೇರೆ ಧಾನ್ಯಗಳನ್ನು ಯಾವ ದೊಡ್ಡ ಮನುಷ್ಯನು ಎಷ್ಟು ಬೆಳೆದರೂ ಕೂಡ ಅವುಗಳ ಮೇಲೆ ತೆರಿಗೆ ಇಲ್ಲ ಎಂಬುದು ಸರಿಯಾದುದಲ್ಲ ಎನ್ನುವ ಟೀಕೆ ದೇಶದಲ್ಲಿ ಈಗ ಇದೆ. ಆದ್ದರಿಂದ ನಾನು ಅದಕ್ಕಾಗಿ ಸಲಹೆ ಮಾಡುವುದೇನೆಂದರೆ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ಎಲ್ಲಾ ಬೆಳೆಗೂ ಅನ್ವಯಿಸುವಂತೆ ಮಾಡುವುದು ಒಳ್ಳೆಯದೆಂದು ನನ್ನ ಭಾವನೆ. ಹಾಗೆಂದ ಮಾತ್ರಕ್ಕೆ ಭೂ ಕಂದಾಯದಲ್ಲಿ ಒಂದು ಸುಧಾರಣೆಯನ್ನು ಮಾಡಬೇಕಾಗಿ ಬರುತ್ತದೆ. ಹೊಸ ರಾಜ್ಯದಲ್ಲಿ ಭೂ ಕಂದಾಯ ಅನೇಕ ಕಡೆಗಳಲ್ಲಿ ಅನೇಕ ವಿಧಗಳಾಗಿವೆ. ಬೊಂಬಾಯಿ ಮತ್ತು ಹೈದರಾಬಾದ್‌ನಿಂದ ಬಂದಿರುವ ನನ್ನ ಸ್ನೇಹಿತರನ್ನು ಕೇಳಿದರೆ, ಅವರು ಭೂ ಕಂದಾಯ ತರೀ ಬೆಳೆ ಆಗುವ ಕಡೆ 60-70 ರೂಪಾಯಿ ಇದೆ, ವಾಟರ್ ರೇಟ್ ಸೇರಿ 60 ರೂಪಾಯಿವರೆಗೂ ಹೋಗುತ್ತದೆ ಎಂದು ಹೇಳುತ್ತಾರೆ. ನಮ್ಮ ಹಳೆಯ ಮೈಸೂರಿನಲ್ಲಿ ಬಹಳ ಹೆಚ್ಚು ಎಂದರೆ, ಬಹುಶಃ 15 ರೂಪಾಯಿಗಳಮೇಲೆ ಎಲ್ಲಿಯೂ ಇಲ್ಲವೆಂದು ತಿಳಿದುಕೊಂಡಿದ್ದೇನೆ. ನಮ್ಮ ಮಾನ್ಯ ಹಣಕಾಸಿನ ಸಚಿವರು ಹೇಳಿದ ರೀತ್ಯ ಅವರ ಭಾಷಣದಲ್ಲಿ ಯೂನಿಫಾರಂ ಟ್ಯಾಕ್ಸೇಷನ್ ಮಾಡಬೇಕು ಎಂದು ಹೊರಟಿದ್ದೇ ಆದರೆ ಹಳೆಯ ಮೈಸೂರಿನವರು 60 ರೂಪಾಯಿನಂತೆ ಕೊಡಬೇಕಾಗುವುದು. ಇಲ್ಲವೇ ಹೊರಗಿನವರದನ್ನು ನಮ್ಮ ಹಳೆಯ ಮೈಸೂರಿನಂತೆ 15 ರೂಪಾಯಿಗಳಿಗೆ ಇಳಿಸಬೇಕು. ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಮಾನ್ಯ ಸದಸ್ಯರು ಬಹುಶಃ 60 ರೂಪಾಯಿಗಳಿಂದ 15 ರೂಪಾಯಿಗಳಿಗೆ ಇಳಿಸುವುದಕ್ಕಿಂತ 15 ರೂಪಾಯಿಗಳಿಂದ 60 ರೂಪಾಯಿಗಳಿಗೆ ಏರಿಸುವುದೇ ಮೇಲು ಎಂದು ಸಲಹೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇದರಿಂದ ಏನಾಗುತ್ತದೆಯೆಂದರೆ, ನಮ್ಮ ದೇಶದ ಅರ್ಧ ರಾಜ್ಯದಲ್ಲಿ ರೈತ ವರ್ಗದವರ ಮನಸ್ಸಿಗೆ ಬಹಳ ನೋವು ಉಂಟಾಗುತ್ತದೆ. ಕರ್ನಾಟಕ ಮಾಡಿದ್ದರಿಂದ 15 ರೂಪಾಯಿಗಳನ್ನು ಕೊಡುತ್ತಿದ್ದ ಕಡೆ 60 ರೂಪಾಯಿಗಳ ಕಂದಾಯ ಕೊಡುವ ಸ್ಥಿತಿಗೆ ಬಂದಿದೆ

ಎನ್ನುವ ಪರಿಸ್ಥಿತಿ ಉಂಟಾಗಬಹುದು. ಇದಕ್ಕೆ ಒಂದು ಬೇರೆ ಮಾರ್ಗವನ್ನು ಯೋಚನೆ ಮಾಡುವುದು ಒಳ್ಳೆಯದು ಎಂದು ನಾನು ಸಲಹೆಮಾಡುತ್ತೇನೆ. ಆ ಸಲಹೆಯಂತೆ ಭೂಮಿಯನ್ನು ನಾನಾ ವಿಧವಾಗಿ ವಿಭಾಗಮಾಡಿ 5, 10, 20, 30 ರೂಪಾಯಿಗಳಂತೆ ಕಂದಾಯ ಹಾಕುವ ಬದಲು, ಮುಖ್ಯವಾಗಿ ಮೂರು ಭಾಗಗಳಾಗಿ ಮಾಡೋಣ. ಒಂದು ಕಡೆ ನೀರಾವರಿಯಿಂದ ವ್ಯವಸಾಯ ಮಾಡತಕ್ಕ ಭೂ ಪ್ರದೇಶ, ಇನ್ನೊಂದು ಕಡೆ ಮಳೆಯಿಂದ ವ್ಯವಸಾಯಮಾಡತಕ್ಕ ಡ್ರೈ ಕಲ್ಟಿವೇಷನ್, ಮತ್ತೊಂದು ಕಡೆ ಬಾಗಾಯಿತು ಪ್ರದೇಶ—ಹೀಗೆ ಮೂರು ವಿಧವಾಗಿ ಭೂಮಿಯನ್ನು ವಿಭಾಗ ಮಾಡಿ, ಅದಕ್ಕೆ ಯಾವುದಾದರೂ ಒಂದು ಫ್ಲಾಟ್‌ರೇಟ್ ಯೂನಿಫಾರಂ ಟ್ಯಾಕ್ಸೇಷನ್ನನ್ನು ಎಲ್ಲಾ ಕಡೆಗೂ ಒಂದೇ ರೀತಿಯಾಗಿ ಅನ್ವಯಿಸುವಂತೆ ವಿಧಿಸಬೇಕು. ಇದರಲ್ಲಿ ಕೆಲವರು ಹೀಗೆ ವಾದ ಮಾಡಬಹುದು, ಒಂದು ಕಡೆ ಬಹಳ ಕಪ್ಪು ಭೂಮಿ ಇದೆ, ಒಂದು ಕಡೆ ಬಹಳ ಫಲವತ್ತಾದ ಭೂಮಿ ಇದೆ, ಇನ್ನೊಂದು ಕಡೆ ಬಿಳಿ ಭೂಮಿ ಇದೆ, ಎಂದು ವಾದ ಮಾಡಬಹುದು. ಆದರೆ ಸರ್ವೇಸಾಧಾರಣವಾಗಿ ಕೆಂಪು ಭೂಮಿಯೇ ಇರುತ್ತದೆ. ಕಪ್ಪು ಭೂಮಿಯಲ್ಲಿ 500ರೂಪಾಯಿಯಷ್ಟು ಉತ್ಪತ್ತಿ ಎಕರೆಗೆ ಆಗಬಹುದು, ಗೆದ್ದಲು ಭೂಮಿಯಲ್ಲಿ ಎಕರೆಗೆ ಕೇವಲ 20 ರೂಪಾಯಿಯಷ್ಟು ಉತ್ಪತ್ತಿ ಇಲ್ಲದಿರಬಹುದು, ಅಂತಹ ಕಡೆ ಕೆಲವರು ಅಧಿಕ ತೆರಿಗೆ ಕೊಟ್ಟಂತಾಗುತ್ತದೆ ಎಂದು ಪ್ರಶ್ನೆ ಮಾಡಬಹುದು. ಅದಕ್ಕೆ ನಾನು ಸೂಚನೆ ಮಾಡುವುದು ಏನೆಂದರೆ, ಫ್ಲಾಟ್‌ರೇಟನ್ನು ಯೂನಿಫಾರಂ ಆಗಿ ಬಾಗಾಯಿತು ಭೂಮಿಗೆ ಇಷ್ಟು ಕಂದಾಯ, ತರೀ ಭೂಮಿಗೆ ಇಷ್ಟು ಕಂದಾಯ, ಡ್ರೈ ಕಲ್ಟಿವೇಷನ್ನಿಗೆ ಇಷ್ಟು ಕಂದಾಯ ಎಂದು ಹಾಕಿದರೆ ಅವರಿಗೆ ಉತ್ಪತ್ತಿ ಎಷ್ಟೆಷ್ಟು ಬರುತ್ತದೋ ಅದರ ಮೇಲೆ ಇನ್‌ಕಂಟ್ಯಾಕ್ಸ್ ಕೊಡುತ್ತಾರೆ. ಅದರಿಂದ ಯಾರಿಗೂ ಯಾವ ವಿಧವಾದ ಧಕ್ಕೆಯೂ ಉಂಟಾಗುವುದಿಲ್ಲ, ಯಾರಿಗೂ ಅಸಮಾಧಾನವುಂಟಾಗುವುದಿಲ್ಲ. ಆದ್ದರಿಂದ ನಾವು ಈ ಸನ್ನಿವೇಶಕ್ಕೆ ತಕ್ಕಹಾಗೆ ಸೈಂಟಿಫಿಕ್ಕಾಗಿ ಯೋಚನೆ ಮಾಡುವುದಾದರೆ, ಭೂ ಕಂದಾಯವನ್ನು ಆಯಾ ಪ್ರದೇಶವನ್ನನುಸರಿಸಿ, ತಗೆದುಕೊಳ್ಳುವುದಕ್ಕೆ ಬದಲಾಗಿ ಒಂದು ಫ್ಲ್ಯಾಟ್ ರೇಟ್ ಹಾಕಿ ಇನ್‌ಕಂಟ್ಯಾಕ್ಸನ್ನು ಆಯಾ ವ್ಯವಸಾಯಗಾರರ ಉತ್ಪತ್ತಿಯ ಆಧಾರದಮೇಲೆ ವಸೂಲು ಮಾಡುವುದು ಒಂದು ಸೂಕ್ತವಾದ ಮಾರ್ಗ, ಅದು ಒಂದು ಸೈಂಟಿಫಿಕ್ ಮೆಥೆಡ್ ಎಂದು ನನಗೆ ಭಾಸವಾಗುತ್ತದೆ.

ಇದಾದಮೇಲೆ ಭೂ ಸುಧಾರಣೆಯಲ್ಲಿ ಭೂಮಿಯ ಮಾಲೀಕತ್ವದಮೇಲೆ ಒಂದು ಸೀಲಿಂಗ್ ಫಿಕ್ಸ್ ಮಾಡಬೇಕೆಂದು ಒಂದು ಅಭಿಪ್ರಾಯವಿದೆ. ಯಾವ ಒಬ್ಬ ವ್ಯಕ್ತಿಯೂ ಇಷ್ಟು ಭೂಮಿಗಿಂತ ಹೆಚ್ಚು ಭೂಮಿಯನ್ನು ಹೊಂದಿರಕೂಡದು ಎನ್ನುವ ಅಭಿಪ್ರಾಯ ಬಹಳವಾಗಿ ಚರ್ಚಾಸ್ಪದವಾದುದು ಎಂದು ನಾನು ಭಾವಿಸುತ್ತೇನೆ. ನಾನು ಈ ರೀತಿ ಹೇಳುವಾಗ ಅದಕ್ಕೆ ವಿರೋಧವೇ ಇಲ್ಲ. ಒಂದು ಹೆಜ್ಜೆ ಮುಂದಕ್ಕೆ ಹೋಗಿ ಹೇಳುವುದಾದರೆ, ವ್ಯಕ್ತಿಗಳ ಒಡೆತನ ಇರಬಾರದು, ಸಾಮೂಹಿಕ ರೀತಿಯಲ್ಲಿ ವ್ಯವಸ್ಥೆ ನಡೆಯಬೇಕು ಎಂದು ಯೋಚನೆ ಮಾಡುವವರಲ್ಲಿ ನಾನೂ ಒಬ್ಬ. ಆದರೆ ನಾವು ಈಗ ದೇಶದಲ್ಲಿ ಒಂದು ಸೀಲಿಂಗ್ ಹಾಕಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಭೂಮಿಯ ಮೇಲೆ ಮಾತ್ರ ಸೀಲಿಂಗ್ ಲಿಮಿಟ್ ಹಾಕಬೇಕು ಎಂದು ಯೋಚನೆ ಮಾಡುವಾಗ ಇತರ ವಿಧವಾದ ಆಸ್ತಿ ಏನಿದೆ, ವೆಲ್ತ್ ಏನಿದೆ, ಅದರಮೇಲೆ ಏತಕ್ಕೆ ಸೀಲಿಂಗ್ ಹಾಕಬಾರದು ಎಂಬುದು ಒಂದು ಪ್ರಶ್ನೆ. ಇದನ್ನು ಕೇವಲ ನಮ್ಮ ಸ್ಟೇಟ್ ಗೌರ್ನಮೆಂಟ್ ಮಾತ್ರ ಯೋಚನೆ ಮಾಡಿದರೆ ಸಾಲದು. ನಾನು ಕೇಂದ್ರ ಸರ್ಕಾರದವರಿಗೆ ಸಲಹೆ ಮಾಡುವುದೇನೆಂದರೆ, ಭೂಮಿಯ ಒಡೆತನದಲ್ಲಿ ಅಥವಾ ಭೂಮಿಯನ್ನು ಹೊಂದಬೇಕಾದಾಗ ಯಾವ ಒಂದು ಮೇಲ್ಮಟ್ಟದ, ಒಂದು ಶಾಸ್ತ್ರೀಯವಾದ ಪರಿಮಿತಿಯನ್ನು ಹಾಕಬೇಕು ಎಂದು ಯೋಚನೆ ಮಾಡುತ್ತೀರೋ, ಅದೇ ರೀತಿ ಬೇರೆ ರೀತಿಯಾದ ಪ್ರಾಪರ್ಟಿಗಳ ಮೇಲೂ ಕೂಡ ಒಂದು ಪರಿಮಿತಿಯನ್ನು ಹಾಕುವುದು ಸೂಕ್ತವಾದುದು. ರೈತ ತಾನು ಮಾಡಿದಂಥ ಸಂಪಾದನೆಯನ್ನು ಬೇರೆ ಕಡೆ ಭೂಮಿಯನ್ನು ಕೊಳ್ಳುವುದಕ್ಕೆ ಮತ್ತು ವ್ಯವಸಾಯದ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಉಪಯೋಗಿಸಿದರೆ, ಆಗ ಮಾತ್ರ ಆತನ ಭೂಮಿಯನ್ನು ಕಿತ್ತು ಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಏನಿದೆ ? ಅದೇ ಸಂಪಾದನೆಯನ್ನು ದೊಡ್ಡ ದೊಡ್ಡ ಷಹರುಗಳಲ್ಲಿ, ಪಟ್ಟಣಗಳಲ್ಲಿ, ಮನೆ ಕಟ್ಟಿಕೊಳ್ಳುವುದಕ್ಕೋ ಅಥವಾ ಬ್ಯಾಂಕುಗಳಲ್ಲಿ ಷೇರುಗಳನ್ನು ತೆಗೆದುಕೊಳ್ಳುವ ರೂಪದಲ್ಲಿಯೋ ಅಥವಾ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವ ರೂಪದಲ್ಲಿಯೋ ಉಪಯೋಗಿಸಿದರೆ, ಅದಕ್ಕೆ ಯಾವ ಪರಿಮಿತಿಯೂ ಇಲ್ಲ. ಭೂಮಿಯನ್ನು ಕೊಂಡುಕೊಂಡಿದ್ದೇ ಮಹಾಪರಾಧವೆಂದು ಪರಿಗಣಿಸುವುದಾದರೆ, ಬೇರೆಯವರ ಮೇಲೆ ಆ ರೀತಿ ಕಾನೂನನ್ನು ಏತಕ್ಕೆ ಜಾರಿಗೆ ತರಬಾರದು ಎಂದು ಅನೇಕ ರೈತವರ್ಗದವರು ಈ ಪ್ರಶ್ನೆಯನ್ನು ಹಾಕುತ್ತಾರೆ. ಸೀಲಿಂಗ್ ಹಾಕಬಾರದು ಎಂಬುದು ನನ್ನ ಅಭಿಮತವಲ್ಲ. ಸೀಲಿಂಗನ್ನು ಇದಕ್ಕೆ ಹಾಕಿ, ಇದರ ಜೊತೆಗೆ ಬೇರೆ ವಿಧವಾದ ಆಸ್ತಿಗೂ ಸೀಲಿಂಗ್ ಹಾಕುವುದು ಬಹಳ ಅಗತ್ಯವೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಫಾರೆಸ್ಟ್ ಇಲಾಖೆಯ ವಿಷಯದಲ್ಲಿ ಒಂದು ಸಲಹೆಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ಫಾರೆಸ್ಟ್ ಇಲಾಖೆಯವರು ರೈತರಿಗೆ ಲೈಸನ್ಸ್ ಕೊಟ್ಟು ಗಾಡಿಯಿಂದ ಸೌದೆ ತರುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಗಾಡಿಯಿಂದ ಸೌದೆ ತರುವಾಗ, ಹಸೀ ಸೌದೆಯನ್ನು ತರಕೂಡದು, ಎಂಬ ಕಾನೂನು ಇದೆ. ಒಣ ಸೌದೆಯನ್ನು ಮಾತ್ರ ರೈತ ಗಾಡಿಯಲ್ಲಿ ತರುವುದಕ್ಕೆ ಅವಕಾಶವಿದೆ. ಸ್ಟೇಟ್ ಫಾರೆಸ್ಟ್ ಆಗಲಿ, ಡಿಸ್ಟ್ರಿಕ್ಟು ಫಾರೆಸ್ಟ್ ಆಗಲಿ ಮೈಸೂರು ಪೇಟೆಯಲ್ಲಿ ಸೌದೆಯನ್ನು ಲಾರಿಗಳ ಮೂಲಕ ಸರಬರಾಯಿ ಮಾಡುವ ಜನಗಳಿಗೆ ಲೈಸೆನ್ಸ್ ಕೊಟ್ಟು, ಅವರು ಲಾರಿಯಲಿ ತರುವುದಾದರೆ ಅವರಿಗೋಸ್ಕರ ಕೂಪ್‌ಗಳನ್ನು ಏರ್ಪಾಡುಮಾಡಿ ಹಸಿ ಸೌದೆ ತರುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆದರೆ ಒಬ್ಬ ಹಳ್ಳಿಯ ರೈತ ಹಸಿ ಸೌದೆಯನ್ನು ತರಬೇಕಾದರೆ ಆತನಿಗೆ ಅವಕಾಶವಿಲ್ಲ. ಇದು ಎಂತಹ ಕಾನೂನು ! ಈಗ ಮಲೆನಾಡು ಪ್ರದೇಶದಲ್ಲಿ ರೈತರಿಗೆ ಅವಕಾಶವಿಲ್ಲದೆ, ಏನಾದರೂ ಆತನು ತರತಕ್ಕಂಥ ಒಂದು ಗಾಡಿ ಸೌದೆಯಲ್ಲಿ ಒಂದು ಹಸಿ ಸೌದೆ ಕಂಡದ್ದೇ ಆದರೆ, ಆತನನ್ನು ಹಿಡಿದುಕೊಂಡು ಹೋಗಿ ಆತನಿಗೆ ಶಿಕ್ಷೆ ವಿಧಿಸುವುದಕ್ಕೆ ಒಂದು ಕಾನೂನನ್ನು ಇಟ್ಟಿದ್ದಾರೆ. ಈ ಸಮಯದಲ್ಲಿ ನಾನು ಸಲಹೆ ಮಾಡುವುದೇನೆಂದರೆ, ನಮ್ಮ ಸರ್ಕಾರದವರು ಯಾವ ರೀತಿ ಬೇರೆಯವರಿಗೆ ಲಾರಿಯಲ್ಲಿ ಸೌದೆ ತೆಗೆದುಕೊಂಡು ಹೋಗಲು ಲೈಸೆನ್ಸ್ ಕೊಟ್ಟು ಬೇಕಾದಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದಾರೋ ಅದೇ ರೀತಿ ಒಣ ಸೌದೆ ತರುವುದರ ಜೊತೆಗೆ ಹಸಿ ಸೌದೆಯನ್ನು

(ಶ್ರೀ ಡಿ. ದೇವರಾಜ ಅರಸ್)

ತರುವುದಕ್ಕೆ ರೈತನಿಗೂ ಅವಕಾಶವನ್ನು ಕಲ್ಪಿಸಿ ಕೊಡಬೇಕು. ಈಗ ಒಂದು ಗಾಡಿ ಒಣ ಸೌದೆ ತಂದರೆ 10 ಆಣೆ ಲೈಸೆನ್ಸ್ ಫೀ ಇದೆ. ಅದನ್ನು ಬೇಕಾದರೆ ಗಾಡಿಯೊಂದಕ್ಕೆ 10 ಆಣೆಯಿಂದ 12 ಆಣೆಯವರೆಗೂ ಹೆಚ್ಚಿಸಿ. ಹೀಗೆ ಯಾವುದಾದರೂ ಒಂದು ರೇಟನ್ನು ಹಾಕಿ, ರೈತನಿಗೆ ಒಂದು ಅವಕಾಶ ಒದಗುವ ರೀತಿ ಮಾಡಬೇಕು. ಅದರಿಂದ ಬಡ ರೈತರಿಗೆ ಅನುಕೂಲ ವಾಗುತ್ತದೆ. ಈ ರೀತಿ ಮಾಡಿ ಅವರು ಸೌದೆಯನ್ನು ಸಾಗಿಸುವುದಕ್ಕೆ ಅನುಕೂಲವನ್ನು ಕಲ್ಪಿಸುತ್ತಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri M. C. NARASIMHAN (Kolar Gold Fields).—Mr. Speaker, Sir, when the Chief Minister some time back named the Vidhana Soudha as 'Vishada Soudha' I never thought that he was pronouncing a curse, but looking at the present Budget it looks as if the elements of that curse are still there. Whether we should call this Vidhana Soudha as Vishad Soudha or not we should call this Budget as Vishad Budget as it seems to be the product of Vishad Soudha psychology.

Looking at the financial position of the State as presented to us, I must say it is serious. Despite what the Finance Minister has said about the financial position of the State, as my colleagues on this side have said, our financial position is really very serious. When we have a mounting programme of borrowings and an increasing public debt, when our debt services go on increasing every year, I do not know how we can say our financial position is satisfactory: what our position will be at the end of the Second Five-Year Plan is not clear either. The provision now for debt services is to the tune of about Rs. five crores and it may go up to about Rs. seven and a half or eight crores by the end of the Second Five-Year Plan. On the top of that, we are resorting to deficit financing. Therefore, I do not know how to call this Budget as a budget which reveals the soundness of the financial position of Mysore State, The Finance Minister himself could not escape from this position and that is why he has said on page 9 of his speech that our financial position is none too happy. I would like to draw the attention of the House to this particular remark of his. He himself had to admit that our financial position was not at all very satisfactory and that is obvious when we see that there is a revenue deficit every time and the revenue deficit will go on increasing as we have to meet all our developmental expenditure through borrowings. The present deficit is said to be to the tune of Rs. nine crores, but I think that actually it is much more than that. Let us take it at Rs. nine crores. For meeting this deficit the Finance Minister says that he is going to have Central assistance on the one hand and a borrowing programme on the other. We do not know the extent to which borrowing will be resorted to and we do not know the exact extent of Central assistance to meet this gap. So far as borrowing is concerned, it is not going to be a very easy task for the simple reason that already there is a heavy borrowing programme in the country for the Second Five-Year Plan; there is National Savings Programme and other programmes to promote private savings. That means that so many agencies want to borrow money from the ordinary man. Like those agencies we are also in the market for borrowing. In such a situation, will we be successful in getting the necessary amount every year till the end of the Second Five-Year Plan? I am told that the prices of Government securities have come down in the market. That being the case, unless we offer higher returns, I do not know how we will be able to get the necessary amount under our borrowing programme.

Let us examine the extent of our deficit. I do not mean to say that there should be no deficit at all. Our present deficit is to the extent of one-fifth of the net revenue receipts. This is really a matter for grave concern. Ours is a federal deficit. Such a deficit may be all right in the case of the Centre which has vast resources at its command. Even then, it is not very easy for the Centre also, as deficit will create an inflationary tendency. If that is going to be the result of a deficit at the Centre, the result of federal deficit will be much more. So we have to rely on the Centre for assistance. In this way if all the States were to resort to deficit financing, then our

Second Five-Year Plan itself will be endangered. That is what our Prime Minister has said. Speaking, subject to correction, I remember the Prime Minister has said in the National Development Council that it is irresponsible for States to have deficits. He has made it very clear that he could not think of every State resorting to deficit financing. If every State were to do that, then our whole Second Five-Year Plan itself will be in danger.

Secondly, Sir, deficit financing will have so many other consequences. It will create an inflationary tendency and upset all our calculations in respect of our Plan. The Second Five-Year Plan itself had to be revised to the extent of Rs. 500 crores, I do not think it is a very good sign. So far as our State is concerned, we have been having deficit Budgets every year. It is not that the present Finance Minister alone is responsible for this deficit. There used to be deficit budgets in the the previous years also when we had Congress Ministries. This continuous deficit is, among others, due to one thing. Our relationship with the Centre is not quite good. Because of this position we are at a very great disadvantage. We are not getting our proper share from the Central revenues. I do not know why the Finance Minister is fighting shy of admitting this before this Assembly. The Central Government is not devoting enough attention or giving sufficient share to the State. In this connection I am inviting the attention of the House to one of the remarks made by a previous Finance Minister in 1955-56 :

> "It is not constitutionally right or ethically proper for the States to be reduced to the necessity of waiting upon the Centre for grants or loans every now and then. The present position is that the Centre has accumulated resources to an extent that they are in a position to launch upon a policy of compelling State Governments to adopt particular works and programmes even in items in the State Lists by such inducements as subsidies, loans and partial contributions."

This situation is being continued. The Finance Minister refused to take the Assembly into confidence regarding the extent of grants he has sought from the Centre. If this aspect of the matter is placed before us, we can all join together and place our case before the Centre. There is absolutely no denying the fact that we are entitled to a greater share in the matter of grants from the Centre, but still our case remains unanswered. Why does not the Finance Minister place a greater reliance on the good sense of the House. He should be able to state his demand clearly. Even in the matter of Central loans there is a case for the State in regard to the interest payable. The Centre should bear it. The Finance Minister has tried to give the impression that everything is sound in the State.

I was all along under the impression that a deficit budget was inevitable in every State. But look at Kerala. They have taxed the right quarters and produced a surplus, however small. Not that they were facing less serious problems than we. On the other hand, they had to face more serious problems than we are having. There was the question of unemployment, population pressure, land utilisation problems and the like. Despite these handicaps, they were able to produce a surplus budget in Kerala. I do not like to draw particular reference to Kerala, but would only emphasise that there is a different attitude there, which is lacking here. As an example, I can point out that here in Mysore we have increased taxes in the name of uniformity of taxation. On the other hand, in Kerala they have exempted taxes on fish, foodgrains, etc., in the name of uniformity. Here in the name of uniformity levy on stamp, sales tax, motor vehicles have all gone up. All these, despite the recommendation to the contrary by the Mysore Finance Enquiry Committee or the decision of the Taxation Enquiry Commission in regard to reduction of sales tax, etc. The Finance Minister says that the

(SRI M. C. NARASIMHAN).

increased levy would fetch three crores. Actually it may be more. In the last speech of the Finance Minister in March we find that he anticipated a tax effort to the tune of five crores.

SRI H. M. CHANNABASAPPA.—I would like to draw the attention of the Hon'ble Member that the Finance Minister has taken this House into confidence and given us an account of what he has done with the Finance Commission when it visited the State. He has made a good case for enhancing the grants and the State's share from the Centre.

SRI M. C. NARASIMHAN.—My point is this. The memorandum placed before the Finance Commission has not been placed before the House. We have not been told of the specific steps taken by the Finance Minister to get more grants. What has been stated in the Budget speech does not give us a full idea of the picture.

SRI H. M. CHANNABASAPPA.—But the Government have taken the House into confidence.

SRI M. C. NARASIMHAN.—How does? it arise No copy of the memorandum is available to us. Even in the Budget speech enough indication is not there as to what actually has been asked for.

Apart from this point, there are several other matters so far as the Kerala Budget is concerned. . . .

A MEMBER.—Is he speaking on the Kerala Budget or the Mysore Budget?

MR. SPEAKER.—He is speaking on the Mysore Budget.

SRI M. C. NARASIMHAN.—I am entitled to draw attention to any other budget and point out the comparison, to show that there is difference in what you speak and what others do. If so desired, I shall not refer to the Kerala Budget hereafter and shall come nearer home.

The Finance Minister has made a claim that everything possible has been done to reduce non-productive expenditure. This is a very strange and tall claim. I shall illustrate this by a few instances, without going into details, because many of the members of the Opposition have laid bare as to how the Government is spending on non-productive items. Various recommendations of the Committees appointed by Government to reduce expenditure in administration have not been brought into force even today. There are the recommendations of the Mysore Finance Enquiry Committee which have not been implemented even today. On the other hand they are appointing Deputy Ministers.

A MEMBER.—How many Ministers are there in Kerala?

SRI M. C. NARASIMHAN.—There are no Deputy Ministers in Kerala. Actually I am told that the strength of Deputy Ministers is going to be increased here, as if the present number is not sufficient—with all respects to the younger blood among the Deputy Ministers.

I will point out another instance of waste. The other day a Labour Court was created. Actually the Court has never functioned nor can it function at all for quite some time since till date the rules have not been finalised. From 3rd May till today the Court has not worked and is it not a waste? There is not even a building for the Court to function. There are so many other items of this kind, through which I cannot go owing to lack of time. Let us take the case of the methods of improving revenue. One method is of course taxation. If the Finance Minister makes up his mind to tax the right quarters, the richer sections, I would not object to it. Apart from this, Government can move in several other directions to increase non-tax revenues. Are the State-owned industries running properly? They are not. That was the criticism levelled by this House. Is there at least a proper administrative set-up to ensure that the state-owned industries are running efficiently and profitably? No. We are running the industries as if they are part of the Revenue Department. The Revenue officials are posted to run the Bhadravati works, the K.G.F., etc. The Chief Minister is the Chairman of Kolar Gold Mines Undertakings which is a highly technical organisation. I can say definitely that neither

the Chief Minister nor any of the Ministers of the Cabinet have enongh technical knowledge. We are having the old out-moded, fabian administrative methods which even the fabians have given up recently in U.K. We are not thinking of setting a Corporation, democratising the management with workers' participation and effecting technical improvements.

Mr. SPEAKER.—The Hon'ble Member has used up his time.

Sri M. C. NARASIMHAN.–There are other points on which I wanted to stress; owing to lack of time I am concluding my speech.

(Several members rose)

Mr. SPEAKER.—Sri Pandit will speak after recess.

The House adjourned for recess at Four of the Clock and reassembled at Half past Four of the Clock.

[MR. SPEAKER in the Chair.]

ಅಧ್ಯಕ್ಷರು.—ನನಗೆ ಈಗ ಬಹಳ ತೊಂದರೆಯಾಗಿದೆ. ಇದರಲ್ಲಿ ಹೀಗೆ ಮಾಡಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತಿದೆ. ಆಯಾ ಪಾರ್ಟಿ ವಿಪ್ಪುಗಳುಯಾರಿದ್ದಾರೋ ಅವರುಗಳು ಸ್ವಲ್ಪ ಜವಾಬ್ದಾರಿಯನ್ನು ತೆಗೆದು ಕೊಂಡು ಯಾವ ಯಾವ ಜಿಲ್ಲೆಗಳವರು ಮಾತನಾಡಿದ್ದಾರೆ ಯಾವ ಯಾವ ಜಿಲ್ಲೆಗಳವರು ಮಾತನಾಡಿಲ್ಲ ಎನ್ನುವದನ್ನು ನೋಡಿಕೊಂಡು ಸೂಚನೆ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಹಾಗೆ ಈಗ ಯಾರೂ ಮಾಡುತ್ತಿಲ್ಲ. ಆದರಿಂದ ನನಗೆ ತೊಂದರೆಯಾಗಿದೆ. ಈಗ ನನಗೆ ಇಂತಹ ಸದಸ್ಯರು ಈ ಜಿಲ್ಲೆಗಳವರು ಇಂತಹವರು ಕಾರ್ಪೋರೇಷನ್ನಿನವರು ಮಾತನಾಡಿಲ್ಲವೆಂದು ಹೇಳಿದ್ದಾರೆ. ಹೀಗೆಲ್ಲ ಆಗುತ್ತಿರುವುದರಿಂದ ನನಗೆ ಬಹಳ ತೊಂದರೆಯಾಗಿದೆ. ನೋಡೋಣ ಮುಂದೆ, ಆದಷ್ಟುಮಟ್ಟಿಗೆ ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಲು ಅವಕಾಶಗಳನ್ನು ಕೊಡುತ್ತೇನೆ.

Sri GAJANAN PANDIT (Mangalore II).—Mr. Speaker, Sir, I have great pleasure to welcome the Budget placed before the House by the Hon'ble the Finance Minister. I also thank him for not imposing any new taxes on the people. I also sympathise with him inasmuch as he has to face a difficult task on account of the Reorganisation of the State and the expansion of the State and try to prepare a fairly good Budget. Of course, it is a deficit Budget. As a businessman I feel that it is one's duty to see that the Budget is always balanced. But knowing the difficult circumstances, I feel that the Finance Minister has made a good job of it and I would like to place a few suggestions before the House.

The pay scales of N.G.Os. is a thing for prime consideration. Orders have been passed as far back as January 1957 that the pay scales should be increased but that has not been implemented particularly in my district of South Kanara. I have to request the Government to take very early steps to implement the pay scales in my district so that the poor N.G.Os. do not suffer on account of any further delay. Sir, when we compare the salaries earned by the N.G.Os. with the wages earned by a labourer in an industry, the labourer would be found to be in a much better position than the N.G.O. because the poor N.G.O. has got to maintain the whole family whereas in the case of labour classes or Mazdoors, as we call them, in each house at least three or four people will be wage earners and they normally earn three to four hundred rupees, when the earning of an N.G.O. would not generally be 50 to 100. I therefore request the Government to give their early attention to this aspect. Then, Sir, the pay of the village officers. Government has been pleased to devise a pay scale and sanctioned an increment of Rs. 8 for these village officers. But we have to consider the condition of pay scales of village officers in our neighbouring district of Kerala where their salaries has been increased from 22 to 50 or 52 rupees per annum. I think, this question requires very careful consideration from the Hon'ble the Finance Minister and the condition of the village officers deserves to be improved.

Tenancy legislation is the next point which I propose to touch. No doubt, a Committee has been appointed and the matter is under consideration. But, I feel that the Committee should take

(SRI GAJANAN PANDIT)

very early steps to see that they bring out their report. The matter should not be delayed any further, particularly, as the tenants are suffering a lot and they deserve to be given permanent tenancy right.

Next, I come to Education. In this matter I feel that the pay scales of the teachers are on the lowest of all the Government servants. Particularly, in my district there is a standing grievance from the teachers that their pay scales deserve improvement. In this connection, I would like to place before this House the position of the oriental schools, both the secondary as well as the elementary schools in my district. All of us feel that the oriental language—Sanskrit—should be encouraged. If no encouragement is given to these schools and if they are treated in a step-motherly manner, I am sure that these schools will have to be closed down and Sanskrit education will die. I, therefore, request the Education Minister to look into the matter of these Sanskrit schools in South Kanara district. There are about eight Secondary and Lower Secondary and about 20 Elementary schools. All these schools deserve special consideration from the Education Minister. I would further suggest that a Sanskrit College should be started at Udipi. There are a number of Mutts there and they are sure to give endowments to that college. It would be a great asset to our State to have a Sanskrit College at Udipi.

Then, Sir, I feel that the old system of having Medical Schools be reintroduced. There is great demand for doctors in villages. Since these schools have been abolished, particularly, in Madras and Bombay States, it is very difficult to get doctors to go and practice in villages. M.B.B.S. is a very costly course and one should spend nearly 25 to 30,000 Rupees for the completion of that course. After spending so much, who would like to go and practice in villages? It is very difficult to induce medical graduates to go and settle down in villages. In fact, in my own district five posts of medical practitioners were advertised, but only two men offered to serve and three seats could not be filled. I would, therefore, urge upon the Government the necessity to start medical schools and short-term courses in medicine so that at less expense doctors could complete their course and they could be induced to go and settle down in villages.

The Second Five-Year Plan has been commented upon by many members. I do not think any comment from me is necessary, but I feel that the Plan must be implemented at any cost. N.E.S. Schemes must be started in the Malnad area where there is a great need for improvement.

Coming to the question of food, we are now deficit in food and everybody is aware of it. The problem is how to increase food production. I personally feel that unless the Government takes positive action, it will not be possible to increase food production. First and foremost, the Government must be prepared to offer a reasonable price for the food produced in the villages. Now there is a tenancy legislation and new tenancy legislations are coming up. It will be difficult for the Government to increase food production unless some sort of guarantee is given to the small producers. Unless the Government gives a guarantee that it is going to purchase rice or other foodgrains produced in the villages at a fixed price, it will be very difficult to induce the agriculturists to produce more food. He may think that if more food is produced, prices may come down and it may not be remunerative to him. The prime necessity is that there should be a central depot to purchase foodgrains and the Government must fix the price. Government must also announce the price that is going to be fixed at the beginning of the season and there must be an agency to finance the agriculturists when they are in difficulties to purchase fertilizers or to build houses or for some other purpose. It is very necessary that it should be done. It is no use raising slogans like 'Grow More Food' without doing anything in the matter. I feel that the Agricultural Department is not very keen about the Japanese method

of cultivation. Particularly in my district I find that in spite of the propaganda about Japanese method of cultivation for the last four or five years, there is not much attention paid to it. Even though a lot of money is spent, you do not find the result. It is necessary that the Agricultural Department should pay more attention to this matter. The small agriculturists should be taught the Japanese method of cultivation and more farms should be opened so that those who want to learn this method of cultivation may be taught and those who do not want to learn this method may be persuaded to learn it.

There is another difficulty in my district. Because the agriculturist is not able to make both ends meet, he is taking to the manufacture of beedies. This beedi manufacture is spreading in villages with the result that, when there is urgent necessity for harvesting or when more people are required for cultivation, it is very difficult to get them. So, the Government will have to seriously consider as to how to stop the beedi industries from spreading in villages and thereby putting the agriculturists in difficulties on account of labour not being available at the time of harvesting, because the harvesting has to be done mainly by labour and not by machines.

Coming to the industries run by the Government, I find that in most of the Government undertakings run by the Central Government or by the State Government the profit motive is not given prime consideration. The management is left in the hands of non-technical men with the result that there is no proper management at all. There is no profit motive because it is a Government industry. They do not bother to see that the industries should earn a profit. Naturally, such industries do not prosper or they have to be bolstered up with finance from other sources. I feel that this method of management should be changed and if the co-operation of private industrialists is enlisted, I am sure the management could be improved and all the Government undertakings could be made to earn more profits.

The next point I would like to stress is fishery and the boat-building industry. There is a vast sea-board and a big reservoir of food in the form of fish but it is not tapped. Fish is a very important source of food and it helps to supplement our food. Naturally, we should concentrate more on the fishing industry and on the proper distribution and storage of fish. I hope Government will set apart more funds for this purpose. They have set apart only Rs. 74 lakhs for the whole of the five-year period for this purpose. I would earnestly prevail upon the Government to allot more funds and see that the fishing industry and the boat-building industry prospers.

As there is great congestion in the railways, I feel that Government should encourage the ship-building industry. Country crafts should be made to flourish in my district particularly because boat-building is an industry by itself.

I would also like to stress on electricity and roadways. My district has so many rivers but on account of uneven conditions of terrain it is not possible to have any big dam. If electricity is supplied for lift irrigation, I am sure the food production could be increased to a very great extent.

I would also request the Government to investigate into the mineral resources of my district. The Kanara District is supposed to be rich in minerals generally, but I am sure that South Kanara also is rich in minerals.

Lastly, I would draw the attention of the Government to road transport in my district. On account of the Kasargod Taluk going to Kerala, we have only 7 miles of railway. We what that the Hassan-Mangalore Railway line should come to fruition. I would like this Government to impress upon the Government of India to take up the Hassan-Mangalore line very early.

With these observations, I thank you, Sir, for having given me an opportunity to place my views before this House and I once again congratulate the Finance Minister for presenting this tax-free Budget.

ಶ್ರೀಮತಿ ಅಲ್ಲಂ ಸುಮಂಗಳಮ್ಮ (ಕುರುಗೋಡು).—ಮಾನ್ಯ ಸಭಾಪತಿಗಳೆ, ನಾನು ಬಳ್ಳಾರಿ ಜಿಲ್ಲೆಯಿಂದ ಬಂದಿದ್ದೇನೆ. ಅಲ್ಲಿ ಹರಿಜನರಿಗೆ ಬಹಳ ತೊಂದರೆಯಿದೆ. ಕುರುಗೋಡು ತಾಲ್ಲೂಕಿನಲ್ಲೂ ಬಹಳ ಕಷ್ಟವಿದೆ. ಸ್ಕೂಲುಗಳು, ರಸ್ತೆಗಳು ಹೆಚ್ಚಾಗಿ ಆ ಪ್ರಾಂತದಲ್ಲಿ ಆಗಬೇಕಾಗಿದೆ. ಮಳೆ ಪ್ರಾರಂಭವಾದರೆ ತಿರುಗಾಡಲು ದಾರಿಯಿಲ್ಲದೆ ಬಡವರಿಗೆ ತುಂಬ ಕಷ್ಟವಾಗುತ್ತವೆ. ದೊಡ್ಡವರೇನೋ ಕಾರುಗಳಲ್ಲಿ ಅಥವಾ ರೈಲುಗಳಲ್ಲಿ ತಿರುಗಾಡುತ್ತಾರೆ. ಅದೇ ಕಾಲುನಡಗೆಯಲ್ಲಿ ಅಥವಾ ಗಾಡಿಗಳಲ್ಲಿ ತಿರುಗಾಡುವ ಜನರಿಗೆ ಸರಿಯಾದ ರಸ್ತೆಯಿಲ್ಲದೆ ನಮ್ಮ ಪ್ರಾಂತದಲ್ಲಿ ಬಹಳ ಅನಾನುಕೂಲವಾಗಿದೆ. ಹರಿಜನರ ಮನೆಗಳಿರುವ ಜಾಗ, ರೀತಿ ಮೊದಲಾದುವನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ, ಕುಡಿಯುವ ನೀರಿನ ಬಾವಿಗಳಿಲ್ಲದೆ ಹರಿಜನರು ಬಹಳ ತೊಂದರೆ ಪಡುತ್ತಿದ್ದಾರೆ. ಇದೊಂದು ದೊಡ್ಡ ಸಮಸ್ಯೆಯಾಗಿದೆ. ಕಳೆದ ಐದು ವರ್ಷಗಳಿಂದ ಬಳ್ಳಾರಿ ಜಿಲ್ಲೆ ಬಹಳ ಹಿಂದುಳಿದಿದೆ. ಅಲ್ಲಿನ ಹರಿಜನರೂ ಬಹಳ ಹಿಂದುಳಿದಿದ್ದಾರೆ. ಹೆಣ್ಣುಮಕ್ಕಳಿಗೆ ಸ್ಕೂಲಿಲ್ಲದೆ ಕುರುಗೋಡು ತಾಲ್ಲೂಕಿನಲ್ಲಿ ಹೆಣ್ಣುಮಕ್ಕಳನ್ನು ಶಾಲೆಗೇ ಕಳುಹಿಸುತ್ತಿಲ್ಲ. ಆದ್ದರಿಂದ ಕುರುಗೋಡುಕ್ಷೇತ್ರ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಹರಿಜನರಿಗೆ ವಸತಿ ಸೌಕರ್ಯವನ್ನೊದಗಿಸಬೇಕು, ಕುಡಿಯುವ ನೀರಿನ ಬಾವಿಗಳನ್ನು ತೋಡಿಸಿಕೊಡಬೇಕು ಮತ್ತು ರಸ್ತೆಗಳನ್ನು ದುರಸ್ತು ಮಾಡಿಸಬೇಕು, ಇಲ್ಲದಿರುವ ಕಡೆ ರಸ್ತೆ ನಿರ್ಮಾಣಮಾಡಬೇಕು, ಸ್ಕೂಲುಗಳನ್ನೊದಗಿಸಬೇಕು ಎಂದು ಸೂಚಿಸಿ ಸರ್ಕಾರದವರು ಇದಕ್ಕೆ ಆದಷ್ಟು ಗಮನಕೊಡುವರೆಂದು ನಂಬಿ ಇಷ್ಟು ಹೇಳಲು ನನಗೆ ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಮಾನ್ಯ ಸಭಾಪತಿಗಳೆ, ಶನಿವಾರ ಮಧ್ಯಾಹ್ನ ನಾಲ್ಕು ಗಂಟೆ ಸಮಯದಲ್ಲಿ ಮಾನ್ಯ ಹಣಕಾಸಿನ ಸಚಿವರು ವಿಶಾಲ ಮೈಸೂರಿನ ಆಯ ಮತ್ತು ವೆಚ್ಚದ ಪಟ್ಟಿಯನ್ನು ಮಂಡಿಸಿರುವುದನ್ನು ಅವಲೋಕನ ಮಾಡುತ್ತಾ ಈ ಆದಾಯ ವೆಚ್ಚ ಮೈಸೂರು ಸಂಸ್ಥಾನದ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸುತ್ತದೆಯೇ ಅಥವಾ ಮೈಸೂರಿನ ಮಹಾಜನತೆಯನ್ನು ಕಾರ್ಗತ್ತಲೆಯಲ್ಲಿರಿಸಿದೆಯೆ ಎಂಬುದನ್ನು ಸ್ವಲ್ಪ ಅಳತೆಮಾಡಿ ನೋಡಬೇಕಾಗಿದೆ. ಅಂಕಿ ಅಂಶಗಳನ್ನೊಳಗೊಂಡ ನಾಲ್ಕು ಬಣ್ಣದ ಪುಸ್ತಕಗಳನ್ನು ನಮಗೆ ಕೊಟ್ಟರು. ಅವನ್ನು ನೋಡಿ ಮೈಸೂರು ವಿಶಾಲವಾದ ಮೇಲೆ ಮತ್ತೆ ಅದರ ಸೌಭಾಗ್ಯ ಉದಯವಾಯಿತೆಂದು ಭಾವಿಸಿದ್ದೆವು; ಜನತೆಗೆ ಹಿಡಿ ಅನ್ನ, ಮೈಗೆ ಬಟ್ಟೆ, ವಾಸ ಮಾಡುವುದಕ್ಕೆ ಮನೆ, ಕುಡಿಯಲು ನೀರು, ಓಡಾಡುವುದಕ್ಕೆ ದಾರಿ—ಇವೆಲ್ಲವೂ ದೊರೆಯುವುದೆಂದು ತಿಳಿದಿದ್ದೆವು. ಆದರೆ ಆ ಆಸೆ ಬಡ್ಜೆಟ್ಟನ್ನು ನೋಡಿ ನಿರಾಶೆಯಾಯಿತು. ಇದೆಲ್ಲಾ ಕನಸಿನ ರಾಜ್ಯವಾಗಿದೆ. ಅಂಕಿಗಳನ್ನು ಮೇಲಿಂದ ಕೆಳಕ್ಕೆ ನೋಡಿದರೆ, ಜರಡಿಯಾಡಿದರೆ ಎಲ್ಲಾ ಹೋಗಿ ಹೊಟ್ಟು ನಿಲ್ಲುವ ಹಾಗಿದೆ. 60 ಕೋಟಿ ರೂಪಾಯಿಗಳು ಖರ್ಚಾಗುತ್ತದೆಂದು ಹೇಳಿದ್ದಾರೆ, ಆದರೆ ಹಳ್ಳಿಗಳ ಕಡೆ ಲಕ್ಷ್ಯಕೊಟ್ಟಿದ್ದಾರೆಯೆ ಎಂದು ಕೇಳುತ್ತೇನೆ. ಮೊದಲು ಮೈಸೂರಿನಲ್ಲಿ 16 ಸಾವಿರ ಹಳ್ಳಿಗಳಿದ್ದವು. ಈಗ ವಿಶಾಲ ಮೈಸೂರಿನಲ್ಲಿ 26 ಸಾವಿರ ಹಳ್ಳಿಗಳಿವೆ. ಈ ಹಳ್ಳಿಗಳ ಕಡೆ ಸರ್ಕಾರದ ಗಮನ ಹರಿದಿದೆಯೋ ಎಂದು ಕೇಳಿದರೆ ನಿಜವಾಗಿಯೂ ಹಳ್ಳಿಗಳನ್ನು ನಿರ್ಲಕ್ಷ್ಯಮಾಡಿದ್ದಾರೆ. ಹಳ್ಳಿಗಳ ಜನರನ್ನು ಓಟಿನ ಕಾಲದಲ್ಲಿ ಓಟು ಕೊಡುವುದಕ್ಕೆ ಮಾತ್ರ ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಅವರ ಕಷ್ಟ ಸುಖ ಕೇಳುವುದಕ್ಕೆ ಸರ್ಕಾರದವರು ಮನಸ್ಸು ಮಾಡಿಲ್ಲವೆಂದು ಕಾಣುತ್ತದೆ. ಏಕೆಂದರೆ ಕಾಂಗ್ರೆಸ್ ಮಿತ್ರರು ಮತ್ತು ಇತರರು ಮಾತನಾಡಿರುವುದನ್ನು ಕೇಳಿದ್ದೇನೆ. ಹಿಂದಿದ್ದ ಹಣವನ್ನೇನು ಮಾಡಿದಿರಿ ಎಂದು ಕೇಳಿದರೆ ದೇಶದ ಪುರೋಭಿವೃದ್ಧಿಗಾಗಿ ಖರ್ಚುಮಾಡಿದ್ದೇವೆಂದು ಹೇಳುತ್ತಾರೆ. ಅನುಭವಾಮೃತದಲ್ಲಿ ಹೇಳಿರುವ ಒಂದು ವಿಚಾರ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ, ಅದರಲ್ಲಿ ಹೀಗೆ ಹೇಳಿದೆ—"ಬುದ್ಧಿವಂತನು ಗಳಿಸಿದರ್ಥವು ಬಿದ್ದುಹೋಹುದು ಕಟ್ಟಕಡೆಯಲಿ ಗದ್ದೆಗೆತ್ತಿದ ನೀರತೆರದಲಿ" ಎಂಬಂತೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ದೇಶದಲ್ಲಿ ಸುಖೀರಾಜ್ಯ ಸ್ಥಾಪನೆಯಾಗುತ್ತದೆ, ಗಾಂಧೀಜಿ ಆತ್ಮಕ್ಕೆ ಶಾಂತಿ ದೊರಕುತ್ತದೆ, ಗಾಂಧೀಜಿ ಸ್ವರ್ಗಕ್ಕೆ ಹೋಗುತ್ತಾರೆ ಎಂದು ಆಶಿಸಲಾಗಿತ್ತು, ಆದರೆ ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದಾಗಿನಿಂದ ಗಾಂಧೀಜಿಯವರು ನರಕದ ಬಾಗಿಲಿನಲ್ಲಿ ನಿಂತಿದ್ದಾರೆ. ದೇಶದ ಹಿತವನ್ನು ಗಂಟುಕಟ್ಟಿ ಗಂಗಾನದಿಯಲ್ಲಿ ಹಾಕಿದಂತಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಾಯಿತು, ಎರಡನೆಯ ಪಂಚವಾರ್ಷಿಕ ಯೋಜನೆ ನಡೆಯುತ್ತಿದೆ, ಇನ್ನು ಹತ್ತಲ್ಲ ಇಪ್ಪತ್ತು ಇಂಥ ಪಂಚವಾರ್ಷಿಕ ಯೋಜನೆ ಮಾಡಿದರೂ ಕಾಂಗ್ರೆಸ್ ಸರ್ಕಾರ ಹಳ್ಳಿಗಳ ಕಡೆ ದೃಷ್ಟಿಯಿಡದೆ ಹೋದರೆ ದೇಶದಲ್ಲಿರುವ ನಿರುದ್ಯೋಗ, ಬಡತನ, ಹಳ್ಳಿಗಳವರು ಪಡುವ ಕಷ್ಟ ಪ್ರಮಾಣವಾಗಿಯೂ ಸತ್ಯವಾಗಿಯೂ ಪರಿಹಾರವಾಗುವುದಿಲ್ಲ. ಏಕೆ ಇದನ್ನೆಲ್ಲಾ ಹೇಳುವುದೆಂದರೆ ಈಗ 14 ಕೋಟಿ ರೂಪಾಯಿಗಳ ಹಣ ಕಡಮೆಯಾಗಿದೆ. ತಮ್ಮ ಚತುರತೆಯಿಂದ ಅರ್ಥಿಕ ಸಚಿವರು ಬಡ್ಜೆಟ್ಟನ್ನು ಮಂಡಿಸಿದರು. ಅವರು ಯಾವ ಕಾಲೇಜಿನಲ್ಲಿ ಅರ್ಥಶಾಸ್ತ್ರವನ್ನು ಓದಿದರೆಂದು ಪ್ರಶ್ನಿಸಬೇಕಾಗಿದೆ. ಅಂಕಿಅಂಶಗಳಿಂದ 14 ಕೋಟಿ ರೂಪಾಯಿಗಳಷ್ಟು ಹಣ ಖೋತ ಬರುವುದಾಗಿ ಗೊತ್ತಾಗಿದೆ. ಹೀಗೆ ಒಂದು ಕಡೆ ನಷ್ಟ. ಕಾಂಗ್ರೆಸ್ ಸರ್ಕಾರದವರು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರುವ ಒಂದು ಅಂಶವನ್ನಾದರೂ ನಡೆಸಿದ್ದಾರೆಯೆ ಎಂದು ವಿನಯದಿಂದ ಪ್ರಶ್ನೆ ಮಾಡುತ್ತೇನೆ. ಭೂಸುಧಾರಣೆ ಮಾಡುತ್ತೇವೆ, ಸಾಲದ ಹೊರೆ ಕಡಮೆಮಾಡುತ್ತೇವೆ, ಜನರನ್ನು ವಿದ್ಯಾವಂತರನ್ನಾಗಿ ಮಾಡುತ್ತೇವೆ, ಊರಿಗೆ ದಾರಿ ಮಾಡುತ್ತೇವೆ, ಕುಡಿಯುವ ನೀರಿನ ಬಾವಿ ತೆಗೆಸುತ್ತೇವೆ, ಕೆರೆ ಕಟ್ಟಿಸುತ್ತೇವೆ, ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ, ಸ್ವರ್ಗ ನಿರ್ಮಾಣ ಮಾಡುತ್ತೇವೆ ಎಂದು ಅವರು ಹೇಳಿದರು, ನಿಜ. ಅವರ ಜೊತೆಯಲ್ಲಿ ನಾನೂ ಹೇಳಿದವನೇ. ಆದರೆ ಆ ದಿವಸ ಹೇಳಿದ್ದಕ್ಕೆ ಅವರು ಮುನ್ನೂರು ಮೈಲಿ ದೂರ ಸರಿದಿದ್ದಾರೆ, ಎಲ್ಲಾ ಸ್ವಂತಕ್ಕಾಗಿ ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ, ತಮಗೆ ಸುಖವಾದರೆ ದೇಶಕ್ಕೂ ಸುಖವಾಗುತ್ತದೆ ಎಂದು ಭಾವಿಸಿದ್ದಾರೆ. ಸರ್ಕಾರದವರು ಖೋತಾ ಆಗಿರುವ ಹಣವನ್ನು ಯಾವ ರೀತಿಯಲ್ಲಿ ಭರ್ತಿಮಾಡುತ್ತಾರೆಂಬುದನ್ನೂ ಸಹ ನೋಡಬೇಕಾಗಿದೆ. ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಒಂದು ತಿಂಗಳ ಕೆಳಗೆ ಹೆಂಡದ ಅಂಗಡಿ ಹರಾಜುಮಾಡಿದರು. ಆಗ 44 ರಿಂದ 50 ಲಕ್ಷ ರೂಪಾಯಿಗಳವರೆಗೆ ನಷ್ಟವಾಗಿದೆ, ಸೆಸ್ ಸೇರಿದರೆ ಖಜಾನೆಗೆ ಬರುವ ಹಣ 62 ಲಕ್ಷ ರೂಪಾಯಿಗಳಷ್ಟು ಕಡಮೆಯಾಗಿದೆ. ಎಷ್ಟರ

ಮಟ್ಟಿಗೆ ದೇಶದ ಹಿತ, ಬಡವರ ಹಿತ ಕಾಪಾಡುವುದಕ್ಕೆ ಮನಸ್ಸುಮಾಡಿದ್ದಾರೆಂಬುದನ್ನು ಇದರ ಮೇಲೆ ಲೆಕ್ಕ ಹಾಕಬಹುದು.

*Sri H. S. RUDRAPPA (Minister for Agriculture).—The figures are incorrect.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂತ್ರಿಗಳು ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಸುಭದ್ರವಾಗಿದೆ, ಕೇಂದ್ರ ಸರ್ಕಾರದಿಂದ ನೆರವು ಸಿಕ್ಕುತ್ತದೆಂಬ ಭರವಸೆಯಿದೆ ಎಂದು ಹೇಳಿದರು. ಎಲ್ಲಾ ಖರ್ಚು ಬಾಬುಗಳಲ್ಲೂ ಆಡಂಬರ ಕಡಮೆಮಾಡಿ ಖರ್ಚು ಕಡಮೆಮಾಡುತ್ತೇವೆ, ದೇಶದ ಸುಖ ಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೆ ಮತ್ತು ಜನೋಪಯುಕ್ತವಾದ ಕೆಲಸ ಕಾರ್ಯಗಳಿಗೆ ಹಣ ಒದಗಿಸಿದ್ದೇವೆ ಎಂದು ಹೇಳಿದರು. ಇನ್ನೊಂದು ಕಡೆ, ಯಾರಿಗೂ ಭಯ ಇರಬೇಕಾಗಿಲ್ಲ, ಸೂಕ್ತವಾದ ನೀತಿಯನ್ನನುಸರಿಸಿ ಹಣಕಾಸಿನ ಸ್ಥಿತಿ ಭದ್ರವಾಗಿರುವಂತೆ ವ್ಯವಸ್ಥೆಮಾಡಿದೆ ಎಂದು ಹೇಳಿದರು. ಯಾವ ಮಾತನ್ನು ನಂಬಬೇಕೋ ಅರ್ಥವಾಗಿಲ್ಲ. ನಮ್ಮ ಹಣಕಾಸಿನ ಪರಿಸ್ಥಿತಿ ಭದ್ರವಾಗಿದೆಯೆ ಅಥವಾ ಇಲ್ಲವೆ ಎಂಬುದನ್ನು ಧೈರ್ಯವಾಗಿ ಹೇಳಬೇಕು. ಸಾಲ ಮಾಡಲಿ, ಒಪ್ಪಿಕೊಳ್ಳೋಣ, ದೇಶವನ್ನು ಕಟ್ಟುವ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ಹಣ ಖರ್ಚುಮಾಡಿದರೆ ಆಕ್ಷೇಪವಿಲ್ಲ; ಆದರೆ ದುಂದು ಖರ್ಚುಮಾಡುತ್ತಿರುವುದನ್ನು ಕಡಮೆ ಮಾಡಿಲ್ಲ. ನಾಲ್ಕೈದು ಸುಂಕ ಹಾಕುವುದರಿಂದ, ಕಾನೂನು ಸಮನ್ವಯಮಾಡುವುದರಿಂದ ಮೂರು-ನಾಲ್ಕು ಕೋಟಿ ರೂಪಾಯಿಗಳ ಹಣ ಬರುತ್ತದೆ, ಉಳಿದ ಹಣ ಇಂಡಿಯಾ ಸರ್ಕಾರದಿಂದ ಗ್ರಾಂಟಿನ ರೂಪವಾಗಿ ಅಥವಾ ಸಾಲದ ರೂಪವಾಗಿ ಬರುತ್ತದೆ ಎಂದು ಹೇಳಿದರು. ಇಂಡಿಯಾ ಸರ್ಕಾರದಿಂದ ಸಾಕಷ್ಟು ಧನ ಸಹಾಯ ಬಾರದಿದ್ದರೆ ತಮ್ಮ ಮೇಲೆ ತೆರಿಗೆ ಬೀಳುತ್ತದೆ ಎಂದು ಹಣಕಾಸಿನ ಸಚಿವರ ಭಾಷಣ ನೋಡಿ ಜನ ಊಹಿಸುತ್ತಾರೆ. ಸ್ವಾಮಿ, ಎರಡು

5 P.M.

ಕೋಟಿ ಜನ ಈಗ ತಾನೇ ಸೇರಿದ್ದಾರೆ. ರೈತನ ಬೆನ್ನು ಮೂಳೆ ಮುರಿಯುವಷ್ಟು ಸುಂಕಹಾಕಿದ್ದಾರೆ. ಇದು ಇಣ್ಡೈರೆಕ್ಟ್ ಟ್ಯಾಕ್ಸೇಷನ್. ಟ್ಯಾಕ್ಸ್ ಹಾಕಿಲ್ಲ, ಇದ ಟ್ಯಾಕ್ಸ್‌ಫ್ರೀ ಬಡ್ಜೆಟ್ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಮೋಟಾರ್ ಮೇಲೆ ಹಾಕತಕ್ಕದ್ದು, ಅಗ್ರಿಕಲ್‌ಚರಲ್ ಇಣ್ಕಂ ಟ್ಯಾಕ್ಸ್ ಯಾರ ಮೇಲೆ ಬೀಳುತ್ತದೆ? ಸಾಮಾನ್ಯ ಜನಗಳ ಮೇಲೆ ಬೀಳುತ್ತದೆ. ಅಲ್ಲದೆ ಬೆಂಕಿ ಪೊಟ್ಟಣದ ಮೇಲೆ, ಕಾಫೀಪುಡಿ, ಸಕ್ಕರೆ, ಬಟ್ಟೆ ಇವುಗಳನ್ನು ಕೊಂಡುಕೊಳ್ಳುವವನ ಮೇಲೆ ಬೀಳುತ್ತದೆ. ಮೋಟಾರ್‌ನಲ್ಲಿ ಹೋಗುವ ಪ್ರಯಾಣಿಕನ ಮೇಲೆ ಬೀಳುತ್ತದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಮೋಟಾರ್‌ನಲ್ಲಿ ಹೋಗುವವನ ಮೇಲೆ ಬೀಳುತ್ತದೆ. ಬಟ್ಟೆ ತೆಗೆದು ಕೊಳ್ಳುವವನ ಮೇಲೆ ಹೇಗೆ ಬೀಳುತ್ತದೆ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಡೈರೆಕ್ಟ್ ಟ್ಯಾಕ್ಸೇಷನ್ ಎಂದು ಹೇಳಿ; ನಮಗೆ ಹಣಬೇಕು ಅದಕ್ಕೋಸ್ಕರ ಟ್ಯಾಕ್ಸ್ ಹಾಕಿದ್ದೇವೆ ಎಂದು ಹೇಳಿ. ಅದಕ್ಕೋಸ್ಕರ ಹಿತ್ತಲಕಡೆ ಬಾಗಿಲಲ್ಲಿ ಏಕೆ ಬರುತ್ತೀರಿ? ಹಿತ್ತಲಕಡೆ ಬಾಗಿಲಲ್ಲಿ ಬರಬಾರದು. ದೇಶದ ರಾಜ್ಯಸೂತ್ರ ಹಿಡಿದುಕೊಂಡಿರುವವರು ಇಂಥಿಂಥ ಕಾರಣಗಳಿಗೋಸ್ಕರ ತೆರಿಗೆ ಹಾಕಿದ್ದೇವೆ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ದುಡ್ಡು ಖರ್ಚುಮಾಡಿದ್ದೇವೆ ಎಂದು ಹೇಳಿ. ವ್ಯವಸಾಯದ ಮಂತ್ರಿಗಳು ನನ್ನ ಎದುರಿಗೆ ಕುಳಿತಿದ್ದಾರೆ. Grow more food has become no more food, ಆಹಾರ ಎಲ್ಲೂ ಇಲ್ಲ. ಫಿಗರ್ಸ್ ಕೇಳಿದಾಗ ಲಕ್ಷಾಂತರ ಎಕರೆ ಜಮೀನನ್ನು ವ್ಯವಸಾಯ ಮಾಡುವುದಕ್ಕೆ ಕೊಟ್ಟಿದ್ದಾರೆ, ಅದರಲ್ಲಿ ಲಕ್ಷಾಂತರ ಪಲ್ಲ ಬೆಳೆದಿದ್ದಾರೆ, ಹತ್ತು ಲಕ್ಷ 20 ಲಕ್ಷ ಟನ್ ಬೆಳೆದಿದ್ದಾರೆ ಎಂದು ಹೇಳಿದರು. ಇದನ್ನೆಲ್ಲಾ ನನಗೆ ಜ್ಞಾಪಕ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಕೋಟಿ ಕೋಟಿ ರೂಪಾಯಿ ಹಣ ಖರ್ಚುಮಾಡಿ, ಮತ್ತೆ ಗೋಧಿ ಬೇಕು, ಮೈದಾ ಹಿಟ್ಟು ಬೇಕು, ಮುಸುಕಿನ ಜೋಳಬೇಕು, ಎಂದು ಪಂಡಿತ್ ನೆಹರೂ ಅವರು ಅಮೆರಿಕಾ, ಆಸ್ಟ್ರೇಲಿಯಾ ರಷ್ಯಾದವರನ್ನು ನಾಚಿಕೆಯಿಲ್ಲದೆ ಕೇಳಬೇಕಾಗಿದೆ. ಗ್ರೋ ಮೋರ್ ಫುಡ್‌ಗೆ ಗೊಬ್ಬರ ಕೊಟ್ಟಿದ್ದಾರೆ ಆ ಗೊಬ್ಬರ ಎಲ್ಲಿ ಹೋಗುತ್ತದೆ? ಯಾರಿಗೆ ಬೇಕೋ ಅವರಿಗೆ ಪುಗಸಟ್ಟೆ ಕೊಡುತ್ತಿದ್ದಾರೆ. ಎಕ್ಸ್‌ಪೆರಿಮೆಂಟಿಗೋಸ್ಕರ ಒಂದು ಎಕರೆಗೆ ಗೊಬ್ಬರ ಕೊಡಿ ಎಂದರೆ ಇನ್‌ಫ್ಲುಯನ್ಸ್ ಇರುವವರು ಐದು ಎಕರೆಗೆ ಗೊಬ್ಬರವನ್ನು ಹಾಕಿಸಿಕೊಂಡಿರುತ್ತಾರೆ. ಹೊಗೆಸೊಪ್ಪು ಬೆಳೆಯುವುದಕ್ಕೆ, ಕಬ್ಬು ಬೆಳೆಯುವುದಕ್ಕೆ ಈ ಗೊಬ್ಬರವನ್ನು ಉಪಯೋಗಿಸುತ್ತಿದ್ದಾರೆ. ಈ ಗೊಬ್ಬರವನ್ನು ಕೊಡುತ್ತಿರುವುದು ರೈತರು ರಾಗಿ, ಭತ್ತ ಹೆಚ್ಚಾಗಿ ಬೆಳೆಯಲಿ ಎಂದು. ಆದರೆ ಇವರು ಅದನ್ನು ದುರುಪಯೋಗಪಡಿಸಿಕೊಂಡು ಕಮರ್ಷಿಯಲ್ ಕ್ರಾಪ್ಸ್‌ಗಾಗಿ ಉಪಯೋಗಿಸುತ್ತಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನು ಶ್ರೀಮಾನ್ ಮುಕ್ಕಣ್ಣಪ್ಪನವರೇ ಹೇಳಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂತ್ರಿಗಳು ಆಡಂಬರವಿಲ್ಲ, ನಾವೆಲ್ಲಾ ಖರ್ಚನ್ನು ಬಹಳ ಕಡಮೆಮಾಡಿಕೊಂಡಿದ್ದೇವೆಂದು ಹೇಳುತ್ತಾರೆ. 1,250 ರೂಪಾಯಿ ಬಾಡಿಗೆ ಬರುವ ಮನೆ ಇವರಿಗೆ ಏತಕ್ಕೆ, ಸ್ವಾಮಿ? ಗೆಸ್ಟ್‌ಹೌಸಿಗಾಗಿ 1,250 ರೂಪಾಯಿ ಬಾಡಿಗೆಕೊಟ್ಟು ಇ. ಕೆ. ಪಾಲಿಯಾ ಬಿಲ್ಡಿಂಗ್ ತೆಗೆದುಕೊಂಡಿದ್ದಾರೆ. ಅವರ ಕೈಕೆಳಗೆ ಅಧಿಕಾರಿಗಳಿದ್ದಾರೆ. ರೆಂಟ್ ಕಂಟ್ರೋಲರ ಸಹಾಯದಿಂದ 80 ರೂಪಾಯಿ ಅಥವಾ 100 ರೂಪಾಯಿ ಕೊಟ್ಟರೆ ಬಾಡಿಗೆಮನೆ ಸಿಕ್ಕುತ್ತಿತ್ತು. ಆಗ ಸರ್ಕಾರಕ್ಕೆ ಸಾವಿರಾರು ರೂಪಾಯಿಗಳು ಉಳಿತಾಯವಾಗುತ್ತಿರಲಿಲ್ಲವೇ? 500 ರೂಪಾಯಿ ಸಂಬಳ ತೆಗೆದುಕೊಂಡು ಕೆಲಸ ಮಾಡಿದ್ದರೆ ಸರ್ಕಾರಕ್ಕೆ ಎಷ್ಟೋ ಉಳಿತಾಯವಾಗುತ್ತಿತ್ತು. ಶ್ರೀ ಪಂಡಿತ ಜವಾಹರ್‌ಲಾಲ ನೆಹ್ರೂ ಅವರು ಕೂಡ ಸಂಬಳವನ್ನು ಕಡಮೆಮಾಡಿಕೊಂಡಿದ್ದಾರೆ. ರಾಜಾಸ್ಥಾನದಲ್ಲಿ ಸಂಬಳವನ್ನು ಕಡಿಮೆ ಮಾಡಿಕೊಂಡಿದ್ದಾರೆ. 900 ರೂಪಾಯಿಗಳಂತೆ ಬರೀ ಮಂತ್ರಿಗಳ ಸಂಬಳಕ್ಕೆ 6 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಇದು ಯಾತಕ್ಕೆ, ಸ್ವಾಮಿ? ಇದು ಸರಳ ಜೀವನವೇ? ಇದು ಹೇಗೆ ಸರಳ ಜೀವನವೆಂದು ನನಗೆ ಅರ್ಥವಾಗುವುದಿಲ್ಲ. ಬ್ರಿಟಿಷರ ಕಾಲದಲ್ಲಿ ಬಟ್ಲರ್ ಮುಂತಾದವರನ್ನು ಇಟ್ಟುಕೊಂಡಿದ್ದರು. ಇನ್ನೂ ಅವರನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ನನಗನ್ನಿಸುತ್ತದೆ, ಸರ್ಕಾರದವರಿಗೆ ಕುಬೇರನಲ್ಲಿರುವ ಹಣ ತಂದುಕೊಟ್ಟರೂ ಮುಂದಿನ ವರ್ಷಕ್ಕೆ ಆರ್ಥಿಕ ಮಂತ್ರಿಗಳು ಇನ್ನೂ 25 ಕೋಟಿ ಡಿಫಿಸಿಟ್ ಆಗುತ್ತದೆ ಎಂದು ಹೇಳುತ್ತಾರೆ. ನಾವು ಪ್ರಜಾಪ್ರತಿನಿಧಿಗಳು, ಯಾರಿಗೋಸ್ಕರ ರಾಜ್ಯಭಾರ ಮಾಡುತ್ತಿದ್ದೇವೆ, ಯಾರನ್ನು ಉದ್ಧಾರ ಮಾಡಬೇಕು, ಯಾವ ದೇಶದ ಕೀರ್ತಿ ಎತ್ತಿ ಹಿಡಿಯಬೇಕು ಎಂಬುದನ್ನು ನಾವು ಮರೆತಿದ್ದೇವೆ, ಅದನ್ನು ಮರೆಯಬಾರದು. ದೇಶ, ಇನ್ನು ಐದು ವರ್ಷಗಳ ಕಾಲ ತನಗೆ ಶ್ರೇಯಸ್ಸಾಗುತ್ತದೆಯೋ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ.)

ಅಥವಾ ಅನ್ಯಾಯವಾಗುತ್ತದೆಯೇ ಎನ್ನುವುದನ್ನು ಕಾದುನೋಡುತ್ತದೆ. ಅನ್ಯಾಯ ಮಾಡಬಾರದು.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಆಂಟಿ ಕರಪ್‌ಷನ್ ಶಾಖೆಗೆ ಸಿಬ್ಬಂದಿಕೊಟ್ಟಿರುವುದು ಅನಾವಶ್ಯಕವೆಂದು ಹೇಳುತ್ತೇನೆ. ನಾವು ನಮ್ಮ ಜನ ಸತ್ಯವಂತರು ಧರ್ಮಿಷ್ಟರು ಎಂದು ಹೇಳುವುದಾದರೆ ಆಂಟಿ ಕರಪ್‌ಷನ್ ಶಾಖೆ ಏತಕ್ಕೆ ಇಡಬೇಕು ? ಅದಕ್ಕೆ ದುಡ್ಡು ಏತಕ್ಕೆ ಖರ್ಚುಮಾಡಬೇಕು ? ನಾಲ್ಕು ಜನ ಡಿ.ಎಸ್.ಪಿ. ಗಳು, ಐದು ಜನ ಎ. ಎಸ್. ಪಿ. ಗಳು, 30 ಜನ ಪೋಲೀಸ್ ಇನ್‌ಸ್ಪೆಕ್ಟರುಗಳು ಮತ್ತು ಕಾನ್‌ಸ್ಟೇಬಲ್ ಗಳು ಏತಕ್ಕೆ ಸ್ವಾಮಿ? ಇಂಥ ಗಾಂಧಿ ರಾಜ್ಯದಲ್ಲಿ ಲಂಚ ನಿರೋಧ ಶಾಖೆ ಏತಕ್ಕೆ ? ಈ ಹೊತ್ತಿನ ದಿವಸ ಲಂಚ ಯಾವರೀತಿ ಇದೆಯೆಂದರೆ ಮಿಂಚಿನ ವೇಗದಲ್ಲಿ ಹೋಗುತ್ತಿದೆ. ಸಣ್ಣಪುಟ್ಟ ನೌಕರರು ಲಂಚ ತೆಗೆದುಕೊಳ್ಳುತ್ತಾರೆಂದು ಪ್ರತೀತಿಯಿದೆ. ಒಂದು ಸಾವಿರ ಎರಡು ಸಾವಿರ ಮೂರು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಬೆಂಗಳೂರಿನಲ್ಲಿ ಮನೆಯನ್ನು ಕೊಂಡುಕೊಂಡು ಬಾಡಿಗೆ ಬರುವ ಹಾಗೆ ಮಾಡಿಕೊಂಡರೆ ಅಂತಹವರ ವಿಚಾರದಲ್ಲಿ ಯಾರೂ ಏನೂ ಮಾಡುವುದಿಲ್ಲ. ಯಾರಾದರೂ ನಾಲ್ಕು ಆಣೆಕೊಟ್ಟರೆ ಅದನ್ನು ರಿಜಿಸ್ಟರಿನಲ್ಲಿ ಬರೆಯಿರಿ ಅನ್ನುತ್ತಾರೆ. ಸಬ್‌ರಿಜಿಸ್ಟ್ರಾರ್, ಪೋಲೀಸ್ ಕಾನ್‌ಸ್ಟೇಬಲ್, ರೆವಿನ್ಯೂ ಇನ್‌ಸ್ಪೆಕ್ಟರ್ ಇವರೇನಾದರೂ ಒಂದು ತೆಂಗಿನಕಾಯನ್ನು ತೆಗೆದುಕೊಂಡರು ಎಂದರೆ ಅಮಲ್ದಾರರಿಗೆ ಹೇಳಿ ಅವರನ್ನು ಸಸ್ಪೆಂಡ್ ಮಾಡಿಸುತ್ತಾರೆ. ಇದು ಆಂಟಿಕರಪ್‌ಷನ್ ಇಲಾಖೆ ಮಾಡುವ ಕೆಲಸ. ನಾನು ಬೇಕಾದರೆ ಹೇಳುತ್ತೇನೆ. ನನಗೆ ಸಂಬಳವನ್ನೇ ಕೊಡಬೇಡಿ ಯಾವ ಯಾವ ಅಧಿಕಾರಿಗಳು ಲಂಚ ತೆಗೆದುಕೊಳ್ಳುತ್ತಾ ಇದ್ದಾರೆಂಬುದನ್ನು ತಿಳಿಸಿ ಎಂದು ಹೇಳಿದರೆ ಸಾಕು, ಈಗಲೂ ಅಂಥ ನೂರಾರು ಜನ ಲಂಚಕೋರರನ್ನು ಹಿಡಿದುಕೊಂಡುಬಂದು ರಿಪೋರ್ಟ್ ಮಾಡುತ್ತೇನೆ, ಅವರಮೇಲೆ ಕ್ರಮ ತೆಗೆದುಕೊಳ್ಳಲಿ.

ಶ್ರೀ ಎಚ್. ಎಸ್. ರುದ್ರಪ್ಪ.—ಅಂತಹ ಡಿಪಾರ್ಟ್‌ಮೆಂಟ್‌ಗಳು ಸಿಕ್ಕಿದರೆ ಕೆಲವರಿಗೆ ಸಂಬಳವೇ ಬೇಡ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.–ಮೂಗಿಗಿಂತ ಮೂಗುತಿ ಭಾರ ಎನ್ನುವ ಗಾದೆಯಂತೆ ಈಗತಾನೆ ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್‌ಬೇಕು ಎಂದು ರೆವಿನ್ಯೂ ಮಂತ್ರಿಗಳು ಒಂದು ಮಸೂದೆಯನ್ನು ಮಂಡಿಸಿದ್ದಾರೆ. ಹೆಚ್ಚಿನ ಖರ್ಚುಮಾಡುವುದಕ್ಕೆ ದುಡ್ಡಿಲ್ಲ, ರಿಟ್ರೆಂಚ್‌ಮೆಂಟ್ ಮಾಡುತ್ತೇನೆ ಎಂದು ಹೇಳುತ್ತಾರೆ. ಇದು ಯಾಕೆ ? ರೆವಿನ್ಯೂ ಬೋರ್ಡಿನಲ್ಲಿ ಸೇಲ್ಸ್‌ಟ್ಯಾಕ್ಸ್ ಕೇಸುಗಳೆಷ್ಟಿವೆ ? ಇದನ್ನು ನೋಡಿದರೆ ನಮಗೆ ಅನ್ನಿಸುತ್ತದೆ, ಯಾರಿಗೋ ತಮಗೆ ಬೇಕಾದವರಿಗೆ ಜಾಗ ಮಾಡಿಕೊಡುವುದಕ್ಕೆ ಛೇರ್‌ಮನ್ ಮತ್ತು ಎರಡು ಸ್ಥಾನಗಳಲ್ಲಿ ತಮ್ಮವರನ್ನು ನೇಮಿಸಿಕೊಳ್ಳುವುದಕ್ಕೋಸ್ಕರ ಸೇಲ್ಸ್‌ಟ್ಯಾಕ್ಸ್ ಟ್ರಿಬ್ಯೂನಲ್ ಮಾಡುತ್ತಾರೆಂದು ತೋರುತ್ತದೆ. ಇದು ನ್ಯಾಯವೇ ? ಈಗ ತೆಗೆದುಕೊಂಡರೆ 60–70 ಕೇಸುಗಳಿವೆ. I have not got correct figures. ಟ್ರೆಜರಿ ಬೆಂಚಿನವರು ಹೆಚ್ಚಿನ ಫಿಗರ್ಸ್ ಕೊಡಬಹುದು. ಹೈಕೋರ್ಟಿನಲ್ಲಿ ಅಪೀಲ್ ಇವೆ. 10 ಜನ-15 ಜನ ಕೆಲಸಮಾಡತಕ್ಕ ಜಾಗದಲ್ಲಿ ಹೈಕೋರ್ಟಿಗೆ ಹೆಚ್ಚು ಜಡ್ಜಿಗಳನ್ನು ನೇಮಕ ಮಾಡಿ ಎಂದರೆ ಅದಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ. ಸೇಲ್ಸ್‌ಟ್ಯಾಕ್ಸ್ ಟ್ರಿಬ್ಯೂನಲ್ ಮಾಡುತ್ತೇವೆಂದು ಹೇಳುತ್ತಾರೆ. ಏಕಾನಮಿ ಹೇಗೆ ಮಾಡುತ್ತಾರೆಂಬುದು ನನಗೆ ಅರ್ಥವಾಗುವುದಿಲ್ಲ.

ಕೇಂದ್ರ ಸರ್ಕಾರದಿಂದ ನೆರವು ಬರುತ್ತದೆಯೆಂದು ಹೇಳುತ್ತಾರೆ. ಅದು ಸುಳ್ಳು. ಏಕೆಂದರೆ ನಾನೂರು ಕೋಟಿ ಅವರಿಗೆ ಬಡ್ಜೆಟ್ ಕಡಮೆ ಬಂದಿದೆ. ಎಲ್ಲದರ ಮೇಲೂ ಸುಂಕಹಾಕಿ 60–70 ಕೋಟಿ ದುಡ್ಡು ಮಾತ್ರ ಬರುತ್ತದೆ. ಇನ್ನು 330 ಕೋಟಿ ಚಿಲ್ಲರೆ ಡೆಫಿಸಿಟ್ ಬರುತ್ತದೆ. ಆದ್ದರಿಂದ ಪ್ರಾಂತ ಸರ್ಕಾರಗಳಿಗೆ ನೆರವು ನೀಡುವ ಭರವಸೆ ಇಲ್ಲ. ಅವರೇ ಪೇಚಿನಲ್ಲಿ ಸಿಕ್ಕಿಹಾಕಿಕೊಂಡಿರುವಾಗ ಹೇಗೆ ನೆರವು ಕೊಡುತ್ತಾರೆ ? ಕಣ್ಣಿಗೆ ಮಣ್ಣು ಎರಚಬೇಡಿ.

ಇನ್ನು ಅರಣ್ಯ ಶಾಖೆಯ ವಿಷಯವಾಗಿ ಹೇಳುವುದಾದರೆ, ಒಬ್ಬರು 100 ಎಕರೆ fuel ಕಂಟ್ರ್ಯಾಕ್ಟ್ ಪಡೆದವರು ಅವರ ಬೌಂಡರಿ ಕಲ್ಲನ್ನು ಇನ್ನೂ ಮುಂದು ವರಿಸಿಕೊಂಡು 200 ಎಕರೆಯವರೆಗೂ ಕಡಿದಿರುತ್ತಾರೆ. ಅವರನ್ನು ಯಾರೂ ಕೇಳುವುದಿಲ್ಲ. ಈ ರೀತಿ ಆಗಿರುವುದನ್ನು ಮಧುಗಿರಿ ಸಬ್-ಡಿವಿಜನ್ನಿನಲ್ಲಿ ನೋಡಿದ್ದೇನೆ. ನೂರು ಎಕರೆ ಕೊಟ್ಟಿರುವ ಕಡೆ ಇನ್ನೂರು ಎಕರೆವರೆಗೆ ಕಡಿದಿದ್ದಾರೆ.

ಯಾರು ನಿಮಗೆ ಸಹಾಯ ಮಾಡಿದರೋ ಯಾರು ನಿಮ್ಮ ಜೊತೆಯಲ್ಲಿ ನಿಂತು ಭುಜಕ್ಕೆ ಭುಜಕೊಟ್ಟು ನಿಮಗೆ ಬೆಂಬಲ ಕೊಟ್ಟಿದ್ದಾರೋ ಯಾರು ನಿಮಗೆ ತ್ಯಾಗಮಾಡಿ ಸುಂಕಕೊಟ್ಟಿದ್ದಾರೋ ಅವರ ಹಣವನ್ನು ಮತ್ತು ದೇಶದ ಆಸ್ತಿಪಾಸ್ತಿಗಳನ್ನು ಸರಿಯಾಗಿ ನೋಡಿಕೊಳ್ಳದೆಹೋದರೆ ನೀವು ಇಲ್ಲಿರುವುದಕ್ಕೆ ಲಾಯಕ್ಕೇ ಎಂದು ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ಇನ್‌ಸ್ಟೆನ್ಸಸ್ ಕೊಡುತ್ತೀರಾ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೆಸರು ಬೇಕಾದರೆ ಹೇಳುತ್ತೇನೆ.

ಅಧ್ಯಕ್ಷರು.—ಅವರ ಛೇಂಬರ್‌ನಲ್ಲಿ ಮಾತ್ರ ಹೇಳಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನು ಪೋಲೀಸ್ ಇಲಾಖೆಯ ವಿಚಾರ. Police to guard the people ಎಂದು ಬೋರ್ಡ್ ಹಾಕಿಕೊಂಡಿದ್ದಾರೆ. ಅದು ಹೇಗಿದೆ ಎಂದರೆ:—" Police to guard the people " ಎಂದಿರುವುದು ಈಗ ಅದು ಹೀಗಾಗಿದೆ. " People to guard the police and not the police to guard the people ". ಸುಳ್ಳು ಹೇಳುವುದರಲ್ಲಿ ಇನ್‌ಸ್ಪೆಕ್ಟರೇ ಮೊದಲಾಗಿರುತ್ತಾರೆ. ಎ. ಎಸ್. ಪಿ. ಇನ್‌ವೆಸ್ಟಿಗೇಷನ್ ಮಾಡಿಕೊಂಡು ಬಂದದ್ದನ್ನು ನೋಡಿದರೆ ಎಷ್ಟು fail ಆಗಿದೆ ಎನ್ನುವುದು ಗೊತ್ತಾಗುತ್ತದೆ. ಪೋಲೀಸು ಶಾಖೆಗೆ ಹೆಚ್ಚಿಗೆ ಖರ್ಚಾಗುತ್ತಿದೆ. ಇದನ್ನು ಕಡಮೆಮಾಡಬೇಕೆಂದು ಹೇಳಿದ್ದರೂಕೂಡ ರೀತಿಯಾಗಿಲ್ಲ, ಇದು ತುಂಬ ವಿಷಾದಕರ. ಪೋಲೀಸು ಶಾಖೆಯ ಕೆಲಸ ಯಾವ ಒಂದು ನೀತಿ ಅಥವಾ ಧರ್ಮದಿಂದ ನಡೆಯುತ್ತಿಲ್ಲ. ಈ ಮೈಸೂರು ರಾಜ್ಯಭಾರದಲ್ಲಿ ಪೋಲೀಸು ಶಾಖೆಯಲ್ಲಿರುವಷ್ಟು ಸುಳ್ಳು ತಟವಟ ಮತ್ತೆ ಇನ್ನಾವ ಡಿಪಾರ್ಟ್‌ಮೆಂಟಿನಲ್ಲಿಯೂ ಇಲ್ಲ.

ಇನ್ನು ರೆವಿನ್ಯೂ ಅಧಿಕಾರಿಗಳ ವಿಷಯದಲ್ಲಿ ಹೇಳಬೇಕಾಗಿದೆ. ರೆವಿನ್ಯೂ ಅಧಿಕಾರಿಗಳಲ್ಲಿ ಮಾಹೆಯಾನ ಎರಡು ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳುವ ಡಿವಿಜನಲ್ ಕಮಿಷನರೊಬ್ಬರಲ್ಲಿಗೆ ಒಂದು ಸಂದರ್ಭದಲ್ಲಿ ಅಲ್ಲಿನ ಜನರಿಗೆ ಸ್ವಲ್ಪ ಕಾಲಾವಕಾಶವನ್ನು ಕೊಡಿಸುವುದಕ್ಕಾಗಿ ಹೋಗಬೇಕಾಗಿ ಬಂತು. ಪಟೇಲ್, ಶ್ಯಾನುಭೋಗರು ಸ್ಟ್ರೈಕ್ ಮಾಡಿ

ದ್ದಾಗ ಕಂದಾಯ ವಸೂಲುಮಾಡಲಿಲ್ಲ, ಮೂರು ತಿಂಗಳಮೇಲೆ ಪಟೇಲ್, ಶ್ಯಾನುಭೋಗರು ಸ್ಟ್ರೈಕ್ ಮುಗಿಸಿದಮೇಲೆ ಕಂದಾಯವನ್ನೆಲ್ಲಾ ಒಂದೇಸಾರಿ ಕೊಡಬೇಕೆಂದು ತೊಂದರೆ ಕೊಡುತ್ತಾರೆಂದೂ ಸ್ವಲ್ಪ ಕಾಲಾವಕಾಶ ಕೊಡಬೇಕೆಂದೂ ಕೇಳಿದುದಕ್ಕೆ ಅವರು "The worst possible people are the Mysore people" ಎಂದು ಹೇಳಿ ಜನಗಳನ್ನು ಧಿಕ್ಕಾರಮಾಡಿ ಮಾತನಾಡಿದರು. ಬಡ ಬೋರೇಗೌಡನ ಭಂಡಾರದಿಂದ ದಪ್ಪ ಸಂಬಳ ತೆಗೆದುಕೊಳ್ಳುವ ಈ ಮೇಲಿನ ಅಧಿಕಾರಿಗಳೇ ಹೀಗೆ ಮಾತನಾಡಿದರೆ ಇನ್ನು ಇವರ ಕೈಕೆಳಗಿರುವ ಅಧಿಕಾರಿಗಳು ಎಷ್ಟು ದಕ್ಷತೆಯಿಂದ ಕೆಲಸಮಾಡುತ್ತಾರೆ ಎಂಬುದನ್ನು ನೀವೇ ಯೋಚನೆ ಮಾಡಬೇಕಾಗಿದೆ. ಹೀಗೆ ಲಂಗು ಲಗಾಮಿಲ್ಲದ ಅಧಿಕಾರಿಗಳನ್ನು ಸರಕಾರದಲ್ಲಿಟ್ಟಿದ್ದಾರೆ. ಇದಕ್ಕೆ ಕಾರಣ ಪ್ರಾಯಶಃ ಇವರುಗಳು ಮಿನಿಸ್ಟರುಗಳಿಗೆ ಬೇಕಾದವರಾಗಿರಬೇಕು. ಏನುಮಾಡಿದರೂ ಇವರನ್ನು ಕೇಳುವವರೇ ಇಲ್ಲ. ಈ ರೀತಿಯಾದರೆ ಸರ್ಕಾರದಲ್ಲಿ ದಕ್ಷತೆ ಬಹಳ ಕಡಮೆಯಾಗುತ್ತದೆ ಎಂದು ಹೇಳಬೇಕಾಗಿದೆ.

ಇನ್ನು ಸಬ್‌ಡಿವಿಜನ್ ಆಫೀಸುಗಳ ವಿಷಯವಾಗಿ ಹೇಳಬೇಕಾದರೆ, ಇವನ್ನು ಪೂರ್ಣವಾಗಿ ವಜಾಮಾಡಬೇಕೆಂದು ನಾನು ಸಲಹೆಮಾಡುತ್ತೇನೆ. ಇವುಗಳಲ್ಲಾಗುವ ಕೆಲಸ ಬರೀ ಪೋಸ್ಟ್‌ಮ್ಯಾನ್ ಮಾಡುವ ಕೆಲಸ. ನಾನೂರು ರೂಪಾಯಿಗಳ ಸಂಬಳ ತೆಗೆದುಕೊಳ್ಳುವ ಈ ಅಧಿಕಾರಿಗಳು ಮಾಡುವ ಕೆಲಸ ಏನೆಂದರೆ, ಯಾವುದಾದರೂ ಪೆಟಿಷನ್ ಬಂದರೆ "Petition submitted to the Deputy Commissioner for orders" ಮತ್ತು ಅಮಲ್ದಾರರುಗಳಿಗೆ ಕಳುಹಿಸಬೇಕಾದರೆ "Forwarded to the Amildar for enquiry and report" ಎಂದು ಬರೆಯುವುದೇ ವಿನಾ ಮತ್ತಾವ ಕೆಲಸವೂ ನಡೆಯುವುದಿಲ್ಲ. Revenue Manualನ್ನು ತೆಗೆದುಕೊಂಡು ನೋಡಿದರೆ ಇವರಿಗೆ ಕೊಟ್ಟಿರುವ ಅಧಿಕಾರ ಯಾವರೀತಿಯಾಗಿದೆ ಎಂಬುದನ್ನು ನೋಡಬಹುದು. ಈ ಆಫೀಸರುಗಳು ತಮ್ಮಲ್ಲಿಗೆ ಬಂದ ಯಾವ ಕೇಸನ್ನೂ ನಿರ್ಧರಿಸುವಹಾಗಿಲ್ಲ. ಈ ಆಫೀಸುಗಳಿರುವುದರಿಂದ ಏನೂ ಉಪಯೋಗವಿಲ್ಲ. ಆದ್ದರಿಂದ ಇವುಗಳನ್ನು ವಜಾಮಾಡಿದರೆ ನಮಗೆ ಈಗ ಬಂದಿರತಕ್ಕ ಹದಿನಾಲ್ಕು ಕೋಟಿ ರೂಪಾಯಿಗಳ ಖೋತಾವನ್ನು ಸರಿಪಡಿಸಿಕೊಳ್ಳಬಹುದು; ಮತ್ತು ಇಂದಿನ ಪರಿಸ್ಥಿತಿಯಲ್ಲಿ ಈ ಆಫೀಸುಗಳನ್ನು ವಜಾಮಾಡುವುದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ.

ಇನ್ನು ಕೋ-ಆಪರೇಟಿವ್ ಸೊಸೈಟಿಗಳ ವಿಷಯ. ಈ ದೇಶದಲ್ಲಿ co-operative movement ಎಷ್ಟರಮಟ್ಟಿಗೆ ಬೆಳೆಯಬೇಕೋ ಅಷ್ಟರ ಮಟ್ಟಿಗೆ ಬೆಳೆದಿಲ್ಲ. ಸಮಗ್ರ ಸೇವಾ ಸಹಕಾರ ಸಂಘ ಎಂಬುದನ್ನು ಸ್ಥಾಪಿಸಿದ್ದಾರೆ. ಮಹಾತ್ಮಗಾಂಧಿಯವರು ಒಂದು ದೊಡ್ಡ ಮನಸ್ಸುಮಾಡಿ ಈ ರೀತಿಯ ಸಮಗ್ರ ಸೇವಾ ಸಹಕಾರ ಸಂಘಗಳಿಂದ ಬಡವರಿಗೆ ಉಪಕಾರವಾಗುತ್ತದೆ ಎಂದು ಆಶಿಸಿದ್ದರು. ಆದರೆ ಈಗ ಹೇಗಾಗಿದೆ ಎಂದರೆ, ಈ ಸಂಘಗಳಿಗೆ ಸದಸ್ಯರು ಕೊಟ್ಟಿರುವ ಷೇರು ಹಣವೇ ವಾಪಸು ಬರುವುದಿಲ್ಲ. ಎಂಟು ಲಕ್ಷ ರೂಪಾಯಿಗಳಷ್ಟು ಹಣ ಈ ಸಹಕಾರ ಸಂಘಗಳಲ್ಲಿ ದುರುಪಯೋಗವಾಗಿದೆ. ಎಲೆಕ್ಷನ್ ಟೈಮಿನಲ್ಲಿ ಈ ಹಣವನ್ನು ವಾಪಸ್ ತೆಗೆದುಕೊಂಡು ಪ್ರಚಾರಕ್ಕಾಗಿ ಉಪಯೋಗಿಸಿರುವುದನ್ನು ನಾನೇ ನೋಡಿದ್ದೇನೆ. ಈ ಕೋ-ಆಪರೇಟಿವ್ ಸೊಸೈಟಿಯನ್ನು ಮಹಾತ್ಮ ಗಾಂಧಿಯವರು ಯಾವ ಉದ್ದೇಶದಿಂದ ಮಾಡಬೇಕೆಂದು ಆಶಿಸಿದ್ದರೋ ಆ ರೀತಿ ಈಗ ಕಾಂಗ್ರೆಸ್ಸಿಗರು ಮಾಡುತ್ತಿಲ್ಲ. ಇನ್ನುಮುಂದೆಯಾದರೂ ಇವುಗಳನ್ನೆಲ್ಲಾ ಸರಿಪಡಿಸಬೇಕೆಂದು ಕೋರುತ್ತೇನೆ.

ಇನ್ನು R. I. C. S. ವಿಷಯ, ಎಂದರೆ, Rural Industrial Co-operative Societies. ಇದರ ವಿಷಯವಾಗಿ ಹೇಳಬೇಕಾದರೆ ಬಹಳ ದುಃಖವಾಗುತ್ತದೆ. ಇವರು ಹೇಳುವುದು; "Uplift the economic status of the rural folk" ಎಂದು; ಆದರೆ ಇವರು ಮಾಡುತ್ತಿರುವುದು "To relieve the rich man from paying Income Tax" ಎನ್ನುವಂತಿದೆ. ಈ ಹಣದಲ್ಲಿ ಶೇಕಡ 90 ರಷ್ಟು ಮಿಸ್‌ಯೂಸ್ ಆಗುತ್ತಿದೆ. Rural Industrial Co-operative Society ಎಂದು ಹೇಳಿ ಇದರಿಂದೇನೂ ಬಡಜನಗಳಿಗೆ ಉಪಯೋಗವಾಗದೇ ಇದ್ದರೆ ಇದರಿಂದೇನು ಪ್ರಯೋಜನ ?

ಈ Community Development Blocks. N.E.S. Blocks ಕಾಮಧೇನು ಕಲ್ಪವೃಕ್ಷದಂತಿವೆ. ಬಡ ಬೋರೇಗೌಡನ ದುಡ್ಡು ಈ ಶಾಖೆಯಲ್ಲಿ ನೀರಿನಂತೆ ಖರ್ಚಾಗುತ್ತಿದೆ. ಈ ಶಾಖೆಯಲ್ಲಿ ಕೆಲಸಮಾಡುವ ಸಿಬ್ಬಂದಿಯ ಸಂಬಳಕ್ಕೆ ಹೆಚ್ಚಿನ ಹಣ ಖರ್ಚಾಗುತ್ತಿದೆ. ಎರಡು ತಿಂಗಳಲ್ಲಿ ಆಗುವ ಕೆಲಸಕ್ಕೆ ಆರು ತಿಂಗಳು ಹಿಡಿದು 10 ಸಾವಿರ ರೂಪಾಯಿಗಳು ಸಂಬಳಕ್ಕಾಗಿ ಖರ್ಚಾಗುತ್ತಿದೆ. ಮಾಡುವ ಕೆಲಸ ಒಂಬತ್ತೂವರೆ ಸಾವಿರ ರೂಪಾಯಿನಷ್ಟು ಕೂಡ ಆಗಿರುವುದಿಲ್ಲ. ಎಂಟು ತಿಂಗಳೊಳಗಾಗಿ ಈ N.E.S. ಅಥವಾ Community Development Blockಗಳಲ್ಲಿ ಆಗಬೇಕಾಗಿರುವ ಕೆಲಸ ವರ್ಷವಾದರೂ ಮುಗಿಯುವುದಿಲ್ಲ. ಹೀಗೆ ದೊಡ್ಡ ದೊಡ್ಡ ಹೆಸರುಗಳನ್ನೇನೋ ಕೊಟ್ಟು ಜನತೆಗೆ ಉಪಕಾರ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರಿಂದ ದೇಶಕ್ಕೇನೂ ಪ್ರಯೋಜನವಾಗಿಲ್ಲ.

ಈ ಹಣಕಾಸಿನ ಪರಿಸ್ಥಿತಿ ತೃಪ್ತಿಕರವಾಗಿಲ್ಲ ಮತ್ತು ಅಷ್ಟು ಸಮಂಜಸವಾಗಿಲ್ಲ ಮತ್ತು ವಿಶಾಲ ಮೈಸೂರಿನ ಬಡ್ಜೆಟ್ಟು ಮಂಡಿಸಿರುವುದು ಸರಿಯಾಗಿಲ್ಲವೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

Sri V. P. DEENADAYALU NAIDU (Cubbonpet).—Sir, I stand to uphold the financial statement presented by the Finance Minister. First of all, I want to say that the Opposition are working under a fear complexion. I wish they were in a position to appreciate some of the schemes undertaken by Government and make concrete suggestions to Government. While accepting some of the good schemes of Government, I have to say that there are many more schemes that will have to be undertaken and there are certain schemes which have got to be modified. The burden of my song for some time past had been that if Government were to function efficiently they must decentralise certain functions. Now that we are in a new set up,

(SRI V. P. DEENADAYALU NAIDU)

Government must first think of decentralising their functions. As a first step in the democratic set up, Government have decided to bring about uniform laws throughout the State. I welcome this step. At the same time I have to say that this step does not go hand in hand with the existing set up and, therefore, it is very necessary that in addition to bringing about uniform laws we must also think of decentralising the functions ofGovernment. I say this from my experience of the Bangalore Corporation. The Bangalore Corporation had sent certain amendments to Government. Those amendments to the statute are pending with Government for the last 8 or 9 months. Two or three sets of committees have scrutinisied the functions of the Corporation and it is after that these amendments were sent to the Government. I wish to ask the Hon'ble Minister concerned as to what has happened to these amendments sent by the Corporation. In the democratic set up that we want to create, we must first start with the lower bodies, namely the local boards, corporations and other local self-government institutions. These bodies should be given certain functions worthy of their name. I am pointedly bringing this to the attention of the House, because I find that things are not moving with Government as fast as they should.

Government are saying that they are bringing uniform laws throughout the State. I wish to ask one question regarding what is called Road Fund. In all the areas which have come to Mysore, there is what is called a Road Fund. So I want to ask Government whether they have created a Road Fund for the new Mysore State as such. I want to be enlightened on this point. If the road goes bad, I will have to depend on the Finance Code. The Finance Code definitely puts a bar against my claiming any amount for Road Fund. There is no Road Fund nor can I claim any grant. I will only come forward for a loan, whereas in other parts of the State which have come to the Mysore State, there is, I must bring it to the attention of the Government, a definite provision for a Road Fund. But what has happened here? The Vehicular Tax was fixed as early as 1936 and now the number of vehicles have increased ten-fold, but Government have not thought of revising the vehicular tax. That means that all the local bodies have to suffer. There is one institution, municipality or the local body, which gets six rupees out of this vehicle tax. Even today, Government have not thought of a Road Fund nor have they thought of revising the vehicle tax by trying to bring it on par with the latest figures of vehicles running on the road. I earnestly appeal to the Government to revise the vehicle tax up-to-date or we must have a Road Fund created.

Secondly, water supply is a burning problem of the day, which has never been tackled seriously so far. I must congratulate the Governmeut because they have taken up this question in all earnestness. But before we succeed in the next two or three years—till now we have not succeeded and it is hoped that 16 gallons per head per day will be available by the end of July—we must consider the possibility of arise in population. By the end of the third year when we hope to provide water to the existing population, the number would increase and this must be taken into account. We must take up the more important scheme, the Cauvery Scheme for which about eleven crores have been estitmated. Every effort should be made to push this scheme by the next four to five years. It is very necessary that we must make a beginning with the Cauvery Scheme.

What has happened to the slum clearance schemes? It is more talked about than done. We have about 98 to 100 slums. We have not succeeded even in clearing one slum in one year. Therefore I must conclude that at this rate we will not be able to do away with the slums even in one century. In Madras, clearance work has been tackled at the Governmental level. The Corporation does not come into the picture.

The work is being tackled by Government with the assistance of the Centre. If at all we are to succeed in battling against the slums, it should be done in that way. Neither the Government, nor the City Improvement Trust Board nor the Corporation is doing anything in this regard. Because, no funds are available for this purpose. Even if 50 thousands or one lakh is sanctioned, that would be only a drop in the ocean. There is a proposal for legislation which the Corporation or the Trust Board has sent to Government. That question is lying in cold storage. I want the amendments to the Act as well as slum clearance legislation to be brought forward at once.

With regard to the Health Department, may I ask one question ? If we go to the Mental Hospital, we find that even a man who has gone there for observation is clubbed together with a man who is a chronic mental patient. Where is the distinction ? Where is the observation ? That Mental Hospital is supposed to be the best in India. With great respect, I must say that we have to separate people who are under observation from other patients. This has been pointed out in many reports, but no action has been taken. What has happened is that people who go to the hospital at the initial stage are mixed with others and those under observatin too are mentally upset and become a bad case. Therefore, I respectfully submit that Government must take immediate steps to segregate these people who are under observation from those who are chronically affected.

We have not made a proper survey of the position of the hospitals. I have been repeatedly urging on Government the need for survey in various departments whether it be in the administration departments, in the educational field or survey with regard to health units and dispensaries. In Bangalore, let me ask the Health Minister whether he has made a survey as to where they require local fund dispensaries. It has not been done, according to present requirements. They have callously shifted the isolation hospital originally located at the leprosorium at Magadi Road and consolidated two into one. There was one at the Magadi Road and one at the old Madras Road, where the isolation hospital now stands. In a big city like Bangalore to concentrate and consolidate two Isolation Hospitatls into one at one place and asking people from one end of Bangalore to go to the other does not stand to the convenience, comfort or security of the patient. There have been several representations but to our misfortune Government have not reconsidered their step. I should draw the attention of the Government to the utter dissatisfaction felt by the people as also the great discomfort experienced by the patients because of this consolidation. I only hope they would think of revising their decision and take suitable action.

My last suggestion about the Health Department concerns the milk schemes. I find from the Budget there is to be a scheme in Hubli. One lakh and seventy-three thousand rupees have been allotted. There was a committee constituted by the Government with all experts and technical men and I know there is a very bulky file or report with the Government. What has happened to that file ? What is the action taken ? I have been often stressing the formation of co-operative unions, rural co-operative unions which can jointly work a milk scheme in Bangalore. In Bombay, the Aarey Milk scheme is the pride of that place. Let us have an equally or more efficient scheme in Bangalore. It would solve many other problems. Today the cattle are huddled together in the heart of the city, giving rise to housing problems, malarial troubles, etc. An organised milk scheme, which removes the centre for cattle away from the city, would not only provide good milk to the city population but would also help make life healthier.

Coming to education, the mission authorities, all of a sudden closed certain schools this academic year. I would however congratulate the Education Minister because I received a communication that some of these schools were taken over by the Government. But what has happened is that these mission authorities before closing down the institutions, one and a half

(SRI V. P. DEENADAYALU NAIDU).

years ago wrote a communication to the Government that they were closing down. Under the rules, they are expected to give oneyear's notice. In spite of the 1½ years' notice given, no action was taken by the Government and it is only when all the parents started agitating that the Government started initiating action. I only submit that in the interests of a great many people to be educated, we cannot be so very lethargic about these matters and Government should ensure that communications received are promptly dealt with.

5-30 P.M.

With regard to High Schools, I find no concerete or definite policy of the Government. They say: 'If some private enterprise comes forward, then we come forward with grants.' In case no private enterprise comes forward what should happen to our boys, Sir? In such an event, should the State of Mysore go without any high school? In the Civil Station which has been newly retroceded, there has not been a single high school where there are three lakhs of people. Supposing no private philanthropist or private donor comes forward. Should all the students there go without a high school? It is a very melancholy state of affairs. Government should make very effort to start one where there is no high school. The Constitution says that education must be given in the mother-tongue wherever sufficient number is available. What is happening now is, if you go to an area where there is Kannada speaking students, you find a Tamil primary school and an Urdu primary school. For instance I cite Jogapalyam. I do not find fault with the Government, but proper survey is not made. That should be done; that is all my submission.

Then, coming to the Flying School, I would like to say that it is run most unsatisfactorily and we spend about Rs. 2,30,000. I think my friend Sri Byre Gowda would be able to give more information as he is more competent to speak about it. Then, the rehabilitation of the ex-servicemen, the Mysore Arts and Crafts and the Adult Education are the other points on which I wish to say something. Sir, I can speak volumes on these, but suffice it if I say that the whole thing should be revised. The Government Flying School is receiving large grants from the Central Government. Is it working satisfactorily? What is the progress we have made there in relation to the grant received from the Government of India? I do not know how many of our friends here have gone and seen that school. Similarly with regard to ex-servicemen. They have been rehabilitated in places where they could not stay or are not inclined to stay and many have left those places and stil we pursue the policy to accommodate them in the same old way. We must try to put them in more conducive places. The other important point is regarding the Mysore Arts and Crafts which we find in South Parade. It is a commission bureau. It is not a place where you can find the best Mysore product. There is no advisory committee which I know of. Formerly, there was one which could give suggestions from time to time. With regard to Adult Education much has been said and very little has been achieved. We have to revise our policy with regard to all these.

One more point and I am done and that is about the handloom weavers. Sir, Government must come forward with taxation no doubt. But, at the same time, they must also come forward with certain reliefs to certain people. Government should have given some relief to these handloom weavers. What is happening in Cubbonpet for instance? The poor weavers are not exempted from sales tax; they are not exempted from any other tax. No concession is shown to them on electricity consumption. This is an industry which requires some relief and Government would do Well to show certain concessions to these poor weavers.

Sir, I think the Minister for Local Self-Government would excuse me if I say that at the Government level files are missing. We should make up our mind to see that such state of

affairs do not continue. Administration also requires toning up. It also requires decentralisation. With these words I conclude and I thank the Chair for giving me this opportunity.

ಶ್ರೀ ವೈ. ವೀರಪ್ಪ (ಹೊಳೆ ನರಸೀಪುರ).—ಮಾನ್ಯ ಸಭಾಪತಿಗಳೆ, ಕಳೆದ ಎರಡು ದಿವಸಗಳಿಂದ ಮೈಸೂರು ದೇಶದ ಹಣಕಾಸಿನ ಪರಿಸ್ಥಿತಿಯನ್ನು ಕೂಲಂಕಷವಾಗಿ ಉಭಯಪಕ್ಷದವರೂ ಚರ್ಚೆ ಮಾಡುತ್ತಿದ್ದೇವೆ. ಆದರೆ ನಾನು ಅದರ ಅಂಕಿಅಂಶಗಳನ್ನು ಮತ್ತು ಹಣಕಾಸಿನ ಆಯವ್ಯಯದ ರಚನೆಯನ್ನು ನೋಡಿದಾಗ್ಗೆ, ನನ್ನ ಸ್ನೇಹಿತರು ಹೇಳಿದ ಹಾಗೆ, ಅದು ನಿಜವಾಗಿಯೂ ಕೂಡ ಒಂದು ತೆರಿಗೆ ರಚಿತವಾದ ಬಡ್ಜೆಟ್ಟಲ್ಲ ಅಥವಾ ಟ್ಯಾಕ್ಸ್ ಫ್ರೀ ಬಡ್ಜೆಟ್ ಅಲ್ಲ. ನನ್ನ ಒಂದು ಅರ್ಥದಲ್ಲಿ ಹೇಳಬೇಕಾದರೆ tactful ಬಡ್ಜೆಟ್ ಎಂದು ಹೇಳಬೇಕಾಗುತ್ತದೆ, ಅನಿವಾರ್ಯವಾಗಿ ಅದನ್ನು ಬಹಳ ಚತುರತೆಯಿಂದ ರಚಿತವಾದ ಬಡ್ಜೆಟ್ ಎಂದು ಹೇಳಬೇಕಾಗುತ್ತದೆ. ಅನೇಕ ತೆರಿಗೆಗಳನ್ನು ಸಮಿಾಕರಣ ಮಾಡುವುದರ ಮೂಲಕ ನಮಗಾಗಿರುವ ಖೋತಾ ಬಡ್ಜೆಟ್ಟನ್ನು ಸರಿದೂಗಿಸಬೇಕೆಂಬ ಅಂಶ ಇದರಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ. ಅಂದಮೇಲೆ ಅವರು ಯಾವ ರೀತಿ ಜನಗಳ ಹೊರೆಯನ್ನು ಕಡಮೆ ಮಾಡಿದ್ದಾರೆಂಬುದನ್ನು ಸ್ವಲ್ಪ ಪರಿಶೀಲನೆ ಮಾಡಬೇಕಾಗಿದೆ; ಮತ್ತು ಈ ಆಯವ್ಯಯದ ಮೇಲೆ ಭಾಷಣಮಾಡಿದಂಥ ಮಾನ್ಯ ಸಚಿವರ ಭಾಷಣವನ್ನು ನಾವು ಕೂಲಂಕಷವಾಗಿ ನೋಡಿದರೆ, ಆದರಲ್ಲಿ ಪ್ರತಿ ವರ್ಷ ಮಾಮೂಲಾಗಿ ಬರುವ ಅಂಕಿ ಅಂಶಗಳಿವೆಯೇ ವಿನಾ ಯಾವ ರೀತಿಯ ಒಂದು ರಚನಾತ್ಮಕ ಸೂಚನೆಯೂ ಇಲ್ಲ. ನನ್ನ ಅರ್ಥದಲ್ಲಿ ಹೇಳಬೇಕಾದರೆ, it is like a judgment of an ameturist which is full of pleadings and evidence but devoid of discretion and reasoning ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಪ್ರತಿಯೊಂದು ಸಾರಿಯೂ ಪ್ರತಿಯೊಂದು ಅಧಿವೇಶನದಲ್ಲೂ ಸಹ ನಾವು ಸಮತಾವಾದ ಸಮಾಜ ರಚನೆಮಾಡುತ್ತೇವೆ, ಜನರಿಗೆ ಸಹಾಯ ಮಾಡುತ್ತೇವೆ ಎಂದು ಬಹಳ ಜೋರಾಗಿ ಹೇಳುತ್ತಿದ್ದಾರೆ. ಅದನ್ನು ನಮ್ಮ ಮಾನ್ಯ ಮಿತ್ರರೂ ಕೂಡ ಬಹಳವಾಗಿ ಪುಷ್ಟೀಕರಿಸಿಕೊಂಡು ಬಂದಿದ್ದಾರೆ. ಅದನ್ನು ನೋಡಿದರೆ, it is a sort of mutual admiration society ಎಂದು ಕಾಣುತ್ತದೆ. ಮಾನ್ಯ ಮಂತ್ರಿಗಳು ಮಾಡಿರುವುದಕ್ಕೆ ಕಾಂಗ್ರೆಸ್ ಸದಸ್ಯರು ತಥಾಸ್ತು ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ನನಗೆ ಸಲಹೆ ಕೊಡುವುದಕ್ಕೆ ಜವಾಬ್ದಾರಿಯಿಲ್ಲ, ನಿಮಗೆ ಜವಾಬ್ದಾರಿಯಿದೆ. ಆದರೂ ಸಲಹೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದ್ದರಿಂದ ನನಗೆ ಸಾಕಾದಷ್ಟು ಕಾಲಾವಕಾಶ ಕೊಡಬೇಕೆಂದು ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ. ನನಗಿರುವ ಅಲ್ಪ ಕಾಲದಲ್ಲಿ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ಹೇಳುವುದಕ್ಕೆ ಸಾಧ್ಯವಿಲ್ಲವಾದದ್ದರಿಂದ ಕೇವಲ ಕೆಲವು ಮುಖ್ಯವಾದ the most burning problems and the most pressing problems of the day ಹೇಳುತ್ತೇನೆ. They are Demand No. 15 Administration of Justice, Demand No. 23. Agriculture, Demand No. 21 Medical, Demand No. 20 Education.—ಇವುಗಳ ವಿಚಾರದಲ್ಲಿ ಸ್ವಲ್ಪ ಮಟ್ಟಿಗೆ ನಾನು ತಿಳಿದುಕೊಂಡಿರುವುದನ್ನು ಹೇಳಬೇಕೆಂದು ಬಯಸುತ್ತೇನೆ. ಯಾವ ರೀತಿ ಸಮತಾವಾದ ಸಮಾಜ ರಚನೆ ಮಾಡಿದ್ದಾರೆ, ಯಾವ ರೀತಿ ಜನಸೇವೆ ಮಾಡುತ್ತಿದ್ದಾರೆ, ಆ ಬಗ್ಗೆ ಕೈಕೊಂಡಿರುವ ಕಾರ್ಯಕ್ರಮವೇನು, ಕೈಗಾರಿಕೆ ವಗ್ಗೆರೆಗೆ ಸಾಲತೆಗೆದು ಕೆಲಸಮಾಡುತ್ತಿರುವಾಗ ದೇಶದ ಆದಾಯವನ್ನು ಎಷ್ಟರ ಮಟ್ಟಿಗೆ ವೃದ್ಧಿಮಾಡಲು ಸಾಧನೆ ಮಾಡಿದ್ದಾರೆ ಎಂಬ ಅಂಶ ಇದರಲ್ಲಿ ವ್ಯಕ್ತವಾಗುತ್ತಿಲ್ಲ. ಉದಾಹರಣೆಗೆ Administration of Justice ತೆಗೆದುಕೊಂಡರೆ ಯಾವ ರೀತಿಯಾಗುತ್ತಿದೆ, ಏನು ಲೋಪದೋಷವಿದೆ, ಅದರಿಂದ ಜನರಿಗೆ ಅನುಕೂಲವಾಗುತ್ತಿದೆಯೆ ಎಂಬುದನ್ನು ನೋಡಿದರೆ, ಲೋಪವಿರುವುದನ್ನು ಸರಿಪಡಿಸುವುದಕ್ಕೆ ಸರ್ಕಾರ ಗಮನ ಕೊಟ್ಟಿಲ್ಲವೆಂಬುದು ವ್ಯಕ್ತವಾಗುತ್ತದೆ. ಮಾಮೂಲಾಗಿ ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟಿಸ್ ಬಾಬಿಗೆ ಎಷ್ಟು ಹಣ ಒದಗಿಸುತ್ತಿದ್ದರೋ ಅದರಂತೆ ಹಣ ಒದಗಿಸಿದ್ದಾರೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಒಂದು ಸಣ್ಣ ಪುಟ್ಟ ಜಗಳವಾದರೆ, ಯಾರಾದರೂ ಕೋಳಿ ಕದ್ದರೆ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಬರಬೇಕಾಗುತ್ತದೆ. ಕೇಸನ್ನು ರಿಜಿಸ್ಟರು ಮಾಡಿಕೊಂಡು ಇತ್ಯರ್ಥಮಾಡುವುದಕ್ಕೆ ಸಿಬ್ಬಂದಿ ಬೇಕಾದಷ್ಟಿದ್ದರೂ ವರ್ಷಗಟ್ಟಲೆ ಕಾಯಬೇಕು. ಸರ್ಕಾರದವರು ಈ ವಿಚಾರದಲ್ಲಿ ಸುಧಾರಣೆ ಮಾಡುವುದಕ್ಕೆ ಪ್ರಯತ್ನಮಾಡಿದ್ದಾರೆಯೆ, ಇಲ್ಲವೆ ಎಂಬುದನ್ನು ಸೂಚಿಸುವುದಕ್ಕೆ ಈ ಒಂದು ಉದಾಹರಣೆ ಹೇಳಿದೆ. ಹಳ್ಳಿಯಿಂದ ಕೋರ್ಟಿಗೆ ಅನೇಕ ಅವಿದ್ಯಾವಂತರು ಬರುತ್ತಾರೆ, ಕೋರ್ಟುಗಳಲ್ಲಿ ಇಂಗ್ಲೀಷಿನಲ್ಲಿ ವ್ಯವಹಾರ ನಡೆಯುವುದರಿಂದ ಅಲ್ಲಿ ಆಗುವುದು ಅವರಿಗೆ ಗೊತ್ತಾಗುವುದಿಲ್ಲ, ಕೇವಲ ಸಣ್ಣ ಪುಟ್ಟ ಜಗಳಕ್ಕೆ ಬಹಳ ಹಣವ್ಯಯವಾಗುವುದೂ ಅಲ್ಲದೆ ಅನೇಕವಾಗಿ ಕಾಲವೂ ವ್ಯಯವಾಗುತ್ತದೆ. ಈ ಬಗ್ಗೆ ಸೂಚನೆ, ಅದೂ ಮೂಲಭೂತವಾದ ಸೂಚನೆಬಂದಿದೆ. ಮೊದಲು ಇರುವ ತೊಂದರೆ ತಪ್ಪಿಸಲು ಗ್ರಾಮ ಪಂಚಾಯಿತಿ ಕೋರ್ಟನ್ನು ರಚನೆ ಮಾಡಿ ಅದಕ್ಕೆ ಹೆಚ್ಚಿನ ಅಧಿಕಾರ, ಮುನ್ಸೀಫ್ ಮ್ಯಾಜಿಸ್ಟ್ರೇಟರಿಗೆ ಕೊಟ್ಟಿರುವ ಅಧಿಕಾರ, ಕೊಡಬೇಕು ಮತ್ತು ಆಖೈರಾಗಿ ಕೇಸು ಅಲ್ಲೇ ತೀರ್ಮಾನವಾಗಬೇಕು. ಹೀಗಾದರೆ ಹೆಚ್ಚು ಹಿಯರಿಂಗು ಕೊಡುವುದಕ್ಕೆ ಅವಕಾಶವಿರುವುದಿಲ್ಲ. ಇದರಿಂದ ರೈತ ತನ್ನ ಕೆಲಸ ಮಾಡಿಕೊಳ್ಳಬಹುದು, ಬೆಳೆಯ ಕಡೆ ನಿಗ ಕೊಡಬಹುದು, ಅವನ ಮಾಮೂಲು ಕೆಲಸಗಳಿಗೆ ಅಷ್ಟು ತೊಂದರೆಯೂ ಆಗುವುದಿಲ್ಲ. ಈ ಸಂಬಂಧದಲ್ಲಿ ಅಲ್ಲಲ್ಲಿರುವ ವಿದ್ಯಾವಂತರನ್ನು ಅಥವಾ ನಿವೃತ್ತರಾದ ಅಧಿಕಾರಿಗಳನ್ನು ತೆಗೆದುಕೊಂಡು ಅವರಿಗೆ ಜವಾಬ್ದಾರಿ ವಹಿಸಿದರೆ ತಕ್ಕ ಸುಧಾರಣೆಯಾಗುತ್ತದೆಂದು ಕಾಣುತ್ತದೆ. ಆಮೇಲೆ ನ್ಯಾಯಾಂಗ ಇಲಾಖೆಯಲ್ಲಿ ಹುದ್ದೆಗಳನ್ನು ಭರ್ತಿ ಮಾಡುವ ವೈಖರಿ ನೋಡಿದರೆ ಕೇವಲ ಕೆಲವರಿಗೆ ಅಲ್ಲಿನ ಹುದ್ದೆಗಳು ಮಿಾಸಲಾಗಿವೆಯೆಂದು ಗೊತ್ತಾಗುತ್ತದೆ. ಇದಕ್ಕೆ ಆಧಾರವಿದೆ. ಸರ್ಕಾರ ಮಾಡಿದ ಕೆಲಸದ ಮೇಲೆ ಯಾರಿಗೂ ಮಾತನಾಡುವುದಕ್ಕೆ ಅವಕಾಶವಿಲ್ಲ. ಇದೆಲ್ಲಾ ಸುಧಾರಣೆಯಾಗಬೇಕು. ಇದಕ್ಕಾಗಿ ಅನುಭವಿಗಳೂ, ನಿಪುಣರೂ, ಯೋಗ್ಯರೂ ಇರುವ ಸಮಿತಿಯನ್ನು ರಚಿಸಿದರೆ ಸರಿಯಾದ ನ್ಯಾಯ ದೊರೆಯಲು ಅನುಕೂಲವಾಗುತ್ತದೆ ಎಂದು ಧಾರಾಳವಾಗಿ ಹೇಳಬಹುದು; ಇಲ್ಲದಿದ್ದರೆ 'ದಕ್ಷತೆ' ಎಂಬ ಪದಕ್ಕೆ ಧಕ್ಕೆ ಬರುತ್ತದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ದೇಶದಲ್ಲಿರುವ ಕೋರ್ಟುಗಳ ವ್ಯವಹಾರಗಳನ್ನು ಈಗ ಪ್ರತ್ಯೇಕವಾದ

(ಶ್ರೀ ವೈ. ವೀರಪ್ಪ).

ಭಾಷೆಯಲ್ಲಿ ಆಗುವ ಹಾಗೆ ಮಾಡಿದೆ. ಅದರ ಆಗು ಹೋಗುಗಳನ್ನು ಚೆನ್ನಾಗಿ ನಡೆಯಿಸಿಕೊಂಡು ಹೋಗುವ ದೃಷ್ಟಿಯಿಂದ ಸರ್ಕಾರದವರು ಕೋರ್ಟಿನಲ್ಲಿ ಆಗತಕ್ಕಂಥ ವ್ಯವಹಾರಗಳನ್ನು ಕನ್ನಡದಲ್ಲಿಯೇ ಮಾಡಿದರೆ ಕಕ್ಷಿಗಾರರು ಮತ್ತು ಇತರರು ಅಲ್ಲಿನ ವ್ಯವಹಾರವನ್ನು ಚೆನ್ನಾಗಿ ಅರಿತು ಎಲ್ಲರಿಗೂ ಅನುಕೂಲವಾಗಬಹುದೆಂದು ಸೂಚನೆ ಮಾಡುತ್ತೇನೆ.

ಎರಡನೆಯದಾಗಿ ವಿದ್ಯಾಭ್ಯಾಸದ ವಿಚಾರ. ಈಗಿನ ವಿದ್ಯಾಭ್ಯಾಸ ಇಲಾಖೆಯಲ್ಲಿ ಅನ್ಯಾಯಗಳು ಆಗುತ್ತಿವೆ. ಇಂಡಿಯಾ ದೇಶದ ರಾಜ್ಯಾಂಗದ ಆರ್ಟಿಕಲ್ 45ರ ವಿಚಾರವಾಗಿ ಅನೇಕ ನನ್ನ ಮಾನ್ಯ ಸ್ನೇಹಿತರು ಬಹಳ ಮಾತನಾಡಿದ್ದಾರೆ. ಆದರೆ ನಾನು ಸರ್ಕಾರದವರಿಗೆ ಒಂದು ಸವಾಲು ಹಾಕುತ್ತೇನೆ. ನಮ್ಮ ಈ ಬಡ್ಜೆಟ್‌ನಲ್ಲಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಆ ಅಂಕಿ ಅಂಶಗಳನ್ನು ಶೇಖರಿಸುವಾಗ ಸರ್ಕಾರದವರು ಏನಾದರೂ ಒಂದು ಯೋಚನೆ ಮಾಡಿದ್ದಾರೆಯೇ ಎಂದರೆ ಅದೇನೂ ಇಲ್ಲ. ಕೇವಲ 14 ವರ್ಷ ವಯಸ್ಸಿನವರೆಗೆ ಇರುವ ಹೆಣ್ಣುಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಮುಫತ್ತಾಗಿ ವಿಧ್ಯಾಭ್ಯಾಸವನ್ನು ಒದಗಿಸುವ ಸಲುವಾಗಿ ಭಾರತದ ರಾಜ್ಯಾಂಗದ ಆ ಸೆಕ್ಷನ್ 45ರ ಪ್ರಕಾರ ಕಲ್ಪಿಸಿರುವ ನಿರ್ದೇಶಗಳನ್ನು ಏನಾದರೂ ಕಾರ್ಯಗತ ಮಾಡಿದ್ದಾರೆಯೇ ಎಂದರೆ ಅದೇನೂ ಇಲ್ಲ ಎದ್ದು ಕಾಣುತ್ತಾ ಇಲ್ಲ. ಅವರು ಖಂಡಿತವಾಗಿಯೂ ಮಾಡಿಯೇ ಇಲ್ಲ. ಇದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಈಗಿನ ವಿದ್ಯಾಭ್ಯಾಸದ ಕ್ರಮಕ್ಕೂ ಹಿಂದಿನ ವಿದ್ಯಾಭ್ಯಾಸದ ಕ್ರಮಕ್ಕೂ ಬಹಳ ವ್ಯತ್ಯಾಸವಿದೆ. ಹಿಂದಿನ ಒಂದು ಸಂಸ್ಕೃತಿ ಯಾವ ರೀತಿ ಇತ್ತು ಎಂದರೆ ಒಂದು ಗುರುಕುಲಾಶ್ರಮದಲ್ಲಿ ವಿದ್ಯಾಭ್ಯಾಸ ಮಾಡಿ ರಾಷ್ಟ್ರೀಯ ಭಾವನೆಯಿಂದ ಶ್ರೇಷ್ಠ ಪ್ರಜೆಗಳಾಗಿ ಬಾಳುತ್ತಿದ್ದರು. ಆ ರೀತಿ ಹೆಚ್ಚು ರಾಷ್ಟ್ರೀಯ ಭಾವನೆಯುಳ್ಳವರು ಯಾರಾದರೂ ಇದ್ದಾರೆಯೇ ಎನ್ನುವುದನ್ನು ನೋಡಿದರೆ ನನಗೆ ಅಷ್ಟೇನೂ ಕಾಣುತ್ತಿಲ್ಲ. ಒಂದು ಉದಾಹರಣೆಗೆ ಹೇಳುವುದಾದರೆ, ಈಗ ಒಬ್ಬ ಬಿ. ಎ. ಪರೀಕ್ಷೆಯಲ್ಲಿ III ಕ್ಲಾಸ್‌ನಲ್ಲಿ ಪಾಸಾಗಿರುತ್ತಾನೆ, ಆತನು ನಾಳೆ ಪ್ರೊಫೆಸರ್ ಆಗುತ್ತಾನೆ. ಈ ರೀತಿ ಆದರೆ ಎಫಿಷಿಯೆನ್ಸಿ ಹೇಗೆ ಬರುತ್ತದೆ? ನಾಲ್ಕಾರು ಇಲಾಖೆಗಳಲ್ಲಿ ಸೇವೆ ಮಾಡಿ ಹೆಚ್ಚು ಅನುಭವಗಳಿಸಿ ಜನತೆಗೆ ಹೆಚ್ಚು ಉಪಕಾರ ಮಾಡತಕ್ಕಂಥವರನ್ನು ನೇಮಕ ಮಾಡುವುದಕ್ಕೆ ಬದಲಾಗಿ ಯಾರೋ ಒಬ್ಬ ಮಂತ್ರಿಗಳ ಮಗನೋ ಅಥವಾ ಅಳಿಯನೋ ಅಥವಾ ಕಾಂಗ್ರೆಸ್ ಬಂಧುವೋ ಅಥವಾ ಕಾಂಗ್ರೆಸ್ ಸ್ನೇಹಿತರೋ ಅಥವಾ ಇನ್ನೇನಾದರೂ ಒಂದು ಇನ್‌ಫ್ಲೂಯನ್ಸ್ ಇದ್ದವನಿಗೆ ಒಂದು ಕಾನ್ವೋಕೇಷನ್‌ನಲ್ಲಿ ಡಿಗ್ರಿ ಕೊಡುವುದಕ್ಕೆ ಮುಂಚಿತವಾಗಿಯೇ ಅವನಿಗೆ ಕೆಲಸ ಕೊಡುತ್ತಾರೆ. ಇನ್ನೂ ಅನೇಕ ಅಂಶಗಳನ್ನೂ ತಮ್ಮ ಗಮನಕ್ಕೆ ತರುತ್ತೇನೆ. ನನ್ನ ಸ್ನೇಹಿತರಲ್ಲಿ ಕೆಲವರಿಗೆ ಏನೂ ಅನುಭವ ಇಲ್ಲದಿದ್ದರೂ ಅಂಥವರಿಗೆ ನೇರವಾಗಿ ಅಧಿಕಾರವನ್ನು ಕೊಟ್ಟಿರುವ ನಿದರ್ಶನಗಳು ಬೇಕಾದಷ್ಟು ಇವೆ. ನಾನು ಮತ್ತು ನನ್ನ ಸ್ನೇಹಿತರು ಮುಂದೆ ಇದನ್ನು ಪರೀಕ್ಷೆ ಮಾಡುವ ಅವಕಾಶ ಬರಬಹುದೆಂದು ನಾನು ಹೇಳಬಲ್ಲೆ.

Sri K. PUTTASWAMY (Mysore).—Sir, this remark seems to be rather sweeping.

Sri Y. VEERAPPA.—I want to reiterate it because I know it for a fact. I am giving a challenge because I know that such things are going on in the University of Mysore.

Mr. SPEAKER.—The Hon'ble Member can make such remarks.

Sri K. PUTTASWAMY.—I never objected to his making sweeping remarks. I made a request that he may come out with instances. He said that Ministers' sons, sons-in-law and other relations are appointed as Professors.

Mr. SPEAKER.—I can only say that Hon'ble Members can make such remarks.

Sri K. PUTTASWAMY.—I never objected to that. I have been repeating that I never objected to his making sweeping remarks. I only requested that he might come out with the information in his possession.

Mr. SPEAKER.—It is not advisable to ask him to disclose that information here. Supposing he comes out with the names, it will become very inconvenient.

Sri K. PUTTASWAMY.—I think I am within my right in making that request. ದಯವಿಟ್ಟು ಕ್ಷಮಿಸಬೇಕು. ಸ್ವಾಮಿ. ವಿರೋಧ ಪಕ್ಷದ ಸದಸ್ಯರಾದ ಶ್ರೀ ವೀರಪ್ಪನವರು ಮಂತ್ರಿಗಳ ಮಗ, ಮಂತ್ರಿಗಳ ಅಳಿಯ ಮುಂತಾದವರಿಗೆ ಏನೂ ಅನುಭವ ಇಲ್ಲದೆ ಇದ್ದರೂ ಸಾಕಷ್ಟು ಸಾಮರ್ಥ್ಯ ಇಲ್ಲದೆ ಇದ್ದರೂ ಸಾಕಷ್ಟು ಪಾಂಡಿತ್ಯ ಇಲ್ಲದೇ ಇದ್ದರೂ ಇವರಿಗೆ ಅಧಿಕಾರ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ, ಹಾಗೆ ಹೇಳಿದರೆ ಏನು ತಿಳಿದುಕೊಳ್ಳಬೇಕು?

ಅಧ್ಯಕ್ಷರು.—ರೂಲ್ಸ್ ಪ್ರಕಾರ ಹೇಳುವ ಅವಕಾಶ ಇದೆ. ಅವರು ಏನು ಮಾತನಾಡಿದರೂ ಮಂತ್ರಿಗಳು ಉತ್ತರ ಕೊಡುತ್ತಾರೆ. ಇದರಿಂದ ನಾವು ಒಳಗೊಳಗೆ ಮಾತಾಡುವುದರಿಂದ ಏನು ಪ್ರಯೋಜನ ಬರುತ್ತದೆ ಎಂಬುದನ್ನು ತಾವು ಹೇಳಿ.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಮಂತ್ರಿಗಳು ಉತ್ತರ ಕೊಡಬಾರದು ಎಂದು ಹೇಳಲಿಲ್ಲ. ಅವರಿಗೆ ಉತ್ತರ ಕೊಡುವುದಕ್ಕೆ ಶಕ್ತಿ ಇಲ್ಲ ಎಂದು ನಾನು ಹೇಳಲಿಲ್ಲ. ಅವರು ಸ್ವೀಪಿಂಗ್ ರಿಮಾರ್ಕ್ಸ್ ಮಾಡಿದ್ದಾರೆ, ಅದು ಎಷ್ಟು ಸತ್ಯವೋ ಅಸತ್ಯವೋ ನನಗೆ ಗೊತ್ತಿಲ್ಲ. ಆ ವಿಚಾರದಲ್ಲಿ ಅವರು ಮುಗುಮ್ಮಾಗಿ ಹೇಳಿದ್ದಾರೆ. ವಿಶದವಾಗಿ ಹೇಳಿ ಎಂದು ಕೇಳುತ್ತೇನೆಯೇ ಹೊರತು ಬೇರೆ ಏನೂ ಇಲ್ಲ.

ಅಧ್ಯಕ್ಷರು.—ವಿವರಗಳೆಲ್ಲವನ್ನೂ ಈಗ ಕೊಡಕೂಡದು. ಹಾಗೆ ಯಾರು, ಏನು ಎಂದು ಹೆಸರು ಕೇಳಬಾರದು. ಆ ವಿಚಾರಗಳು ಇಲ್ಲಿ ಬೇಡ. ಹೆಸರು ಕೊಡುವುದರಿಂದ ಬಹಳ ತೊಂದರೆಯಾಗುತ್ತದೆ.

ಶ್ರೀ ವೈ. ವೀರಪ್ಪ.—ಈ ವಿಚಾರದಲ್ಲಿ ನನ್ನ ಮಾನ್ಯ ಸ್ನೇಹಿತರು ನಾನು ಯಾವ ಒಂದು ಆಧಾರವಿಲ್ಲದೆ

ಆ ಮಾತನ್ನು ಹೇಳಲಿಲ್ಲ ಎಂಬುದನ್ನು ತಿಳಿಯಬೇಕು. ಅನುಭವ ಇಲ್ಲದೆ ಇರುವವರನ್ನು ದಾಕ್ಷಿಣ್ಯದ ಮೇಲೆ ತೆಗೆದುಕೊಂಡಿದ್ದಾರೆಂದು ನಾನು ಹೇಳುತ್ತೇನೆ. ಇದನ್ನು ನಿರ್ದಿಷ್ಟವಾಗಿ ನಾನು ಹೇಳಲಿಲ್ಲ. . . . . . .

ಅಧ್ಯಕ್ಷರು.—ತಮಗೂ ಒಂದು ಮಾತು ಹೇಳುತ್ತೇನೆ. Members must be sure of the grounds on which they are making sweeping remarks. ಸುಮ್ಮನೆ ಹೇಳುತ್ತಾ ಹೋದರೆ ಪ್ರಯೋಜನವಿಲ್ಲ.

ಶ್ರೀ ವೈ. ವೀರಪ್ಪ.—ಅವರು ಹೇಳಿದುದನ್ನು ನಾನು ಗಮನಿಸಿದ್ದೇನೆ.

Sri H. S. RUDRAPPA.—Supposing an Hon'ble Member makes a sweeping remark and the Ministers have uo authority to question it, it will create a difficult situation.

Mr. SPEAKER.—I do not mean that the Ministers have no authority to question it. What I mean is that members need not interfere and that it is only the Ministers who can interfere. The Hon'ble Minister may ask the member to give instances.

Sri B. K. PUTTARAMIYA (Channapatna).—The other members are also entitled to know something about it.

Mr. SPEAKER.—There are certain things which other members need not know.

ಶ್ರೀ ವೈ. ವೀರಪ್ಪ.—ಸ್ವಾಮಿ, ನಾನು ಕಳೆದ ಹತ್ತು ವರ್ಷಗಳಿಂದ ನೋಡುತ್ತಿದ್ದೇನೆ. ಕೋರ್ಟು ವ್ಯವಹಾರವನ್ನು ಕನ್ನಡದಲ್ಲಿಯೇ ಮಾಡುವುದಕ್ಕೆ ಇನ್ನೂ ನಮ್ಮ ಸರ್ಕಾರದವರು ಪ್ರಯತ್ನ ಮಾಡಲಿಲ್ಲ.

ಇನ್ನು ಸ್ಕಾಲರ್‌ಷಿಪ್ಪು ಫಾರಂಗಳನ್ನು ಹಂಚುವ ವಿಚಾರ. ಈ ಫಾರಂಗಳನ್ನು ಕಳುಹಿಸಲು ಒಂದು ರೀತಿಯ ನಿಯಮಗಳನ್ನೇನೋ ಇಟ್ಟುಕೊಂಡಿದ್ದಾರೆ. ಮೊದಲು ಅಪ್ಲಿಕೇಷನ್ನು ಬರಬೇಕು. ಅನಂತರ ಅದನ್ನು ಪರಿಶೀಲಿಸಿ ನಿರ್ಧರಿಸಬೇಕು. ಆದರೆ ಯಾವುದೋ ಒಂದು ದಾಕ್ಷಿಣ್ಯದ ಮೇಲೆ ಅನೇಕ ಸಂದರ್ಭಗಳಲ್ಲಿ ಈ ಸ್ಕಾಲರ್‌ಷಿಪ್ಪುಗಳು ಅರ್ಹರಾದವರಿಗೆ ಸಿಕ್ಕುವುದಿಲ್ಲ. ಹೀಗೆ ಒಂದು ರೀತಿಯ ದಾಕ್ಷಿಣ್ಯಕ್ಕೆ ಒಳಗಾದರೆ ನಿಜವಾಗಿಯೂ ಬಡವರಿಗೆ ಅನುಕೂಲವಾಗುವುದಿಲ್ಲ. ಇಂತಹ ದಾಕ್ಷಿಣ್ಯಗಳಿಂದ ದೂರವಾಗಿರಬೇಕಾದುದು ಆವಶ್ಯಕ.

ಆಮೇಲೆ ಮೆಡಿಕಲ್ ಡಿಪಾರ್ಟುಮೆಂಟನ್ನು ತೆಗೆದುಕೊಂಡರೆ, ಅನೇಕ ಸೌಕರ್ಯಗಳನ್ನು ಡಿಪಾರ್ಟ್‌ಮೆಂಟಿನವರು ಏನೋ ಕೊಟ್ಟಿದ್ದಾರೆ. ಆದರೆ ಅವರು ಕೊಡತಕ್ಕ ಸೌಕರ್ಯಗಳು ಯಾವ ರೀತಿಯಾಗಿ ವಿನಿಯೋಗವಾಗುತ್ತಿವೆ ಎಂಬುದನ್ನು ಕೇಳಬೇಕಾಗಿದೆ. ಈ ಆಸ್ಪತ್ರೆಗಳನ್ನು ತೆಗೆದುಕೊಂಡರೆ, ಸರಕಾರದವರು ಒದಗಿಸಿರುವ ಈ ಆಸ್ಪತ್ರೆಯ ಸೌಕರ್ಯ ಸಾಮಾನ್ಯ ಕೂಲಿಗಾರರಿಗೂ ಹಳ್ಳಿಯವರಿಗೂ ಅನುಕೂಲವಾಗಿ ದೊರೆಯುತ್ತಿಲ್ಲ. ಹಳ್ಳಿಯವರು ಪಟ್ಟಣಕ್ಕೆ ಬರುವುದಕ್ಕೆ ಅವಕಾಶವಿಲ್ಲ. ಏಕೆಂದರೆ ಅವರುಗಳಿಗೆ ಬರಲು ಸರಿಯಾದ ವಾಹನಸೌಕರ್ಯವಿರುವುದಿಲ್ಲ. ಇವರುಗಳಿಗೆಲ್ಲ ಅನುಕೂಲವಾಗುವಂತೆ Mobile Hospitals ಹೆಚ್ಚಾಗಿ ಪ್ರಚಾರಕ್ಕೆ ತರಬೇಕು ಮತ್ತು ಔಷಧಗಳನ್ನು ಹೆಚ್ಚಿಗೆ ಸರಬರಾಜು ಮಾಡಿ ಈ ರೀತಿಯ Mobile Hospitalಗಳನ್ನು ಸ್ಥಾಪಿಸಬೇಕು. ಇದರಿಂದ ಹಳ್ಳಿಗಾಡಿನವರಿಗೂ ಮಿಲ್‌ನಲ್ಲಿ ಕೆಲಸ ಮಾಡುವ ಕೂಲಿಗಾರರಿಗೂ, ಇಂತಹ ಆಸ್ಪತ್ರೆಗಳಿಂದ ಬಹಳವಾದ ಅನುಕೂಲಗಳು ಸಿಗುತ್ತವೆ. ಈ ವಿಚಾರವಾಗಿ ಸರಕಾರ ಎಷ್ಟು ಜನ ಔಷಧಿಗಳಿಲ್ಲದೆ ಹಳ್ಳಿಗಾಡಿನಲ್ಲಿ ಸಾಯುತ್ತಿದ್ದಾರೆಂಬುದನ್ನು ಸರ್ವೆ ಮಾಡಿ ನೋಡಿದರೆ ಗೊತ್ತಾಗುತ್ತದೆ. ನಿಜವಾಗಿಯೂ ಬಡವರಾದ ಹಳ್ಳಿಗಾಡಿನ ಜನರಲ್ಲಿ ಸರಿಯಾದ ಔಷಧಿಗಳ ಸೌಕರ್ಯ ಸಿಕ್ಕದೆ ಶೇಕಡ 90ರಷ್ಟು ಜನ ಸಾಯುತ್ತಿದ್ದಾರೆಂಬುದನ್ನು ಸಂಕಟದಿಂದ ಇಲ್ಲಿ ಹೇಳಬೇಕಾಗಿದೆ.

ಇನ್ನು P.W.D. ವಿಚಾರವನ್ನು ತೆಗೆದುಕೊಂಡರೆ, ಸರಕಾರದವರು Foreign Studiesಗೆ ಇಲ್ಲಿಂದ ಹೊರದೇಶಗಳಿಗೆ ಕಳುಹಿಸಿ ತರಬೇತು ಮಾಡಿಸಿ ಅಲ್ಲಿಂದ ಅವರು ಬಂದ ಮೇಲೆ ಅವರಿಗೆ ಸಾಕಷ್ಟು ಉತ್ತೇಜನವನ್ನು ಕೊಡುತ್ತಿಲ್ಲ. ಈಗ ತರಬೇತು ಹೊಂದಿದವರ ಸಂಖ್ಯೆಯ ಅಭಾವ ಹೆಚ್ಚಾಗಿದೆ ಎಂದು ಕೇಳಿದ್ದೇವೆ. ಹಾಗಿದ್ದರೂ ಕೂಡ ಹೊರಗಡೆಯಿಂದ ತರಬೇತು ಹೊಂದಿ ಬಂದಿರುವ ಉಮೇದುವಾರರಿಗೆ ಸರಿಯಾದ ಅವಕಾಶಗಳು ಸಿಕ್ಕುತ್ತಿಲ್ಲ. ಎಷ್ಟೋ ನಿದರ್ಶನಗಳನ್ನು ಬೇಕಾದರೂ ಕೊಡಬಹುದು. ಒಂದು ನಿದರ್ಶನವನ್ನು ಕೊಡುತ್ತೇನೆ. ಒಬ್ಬ ಆಸಿಸ್ಟೆಂಟು ಇಂಜನೀಯರನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಹೇಳಬೇಕಾಗಿದೆ. ಅವರನ್ನು ನಾಲ್ಕೈದು ವರ್ಷಗಳ ಕಾಲ ಹೊರದೇಶಗಳಿಗೆ ಕಳುಹಿಸಿ ಟ್ರೈನಿಂಗ್ ಆಗಿ ಅವರು ವಾಪಸು ಬಂದಿದ್ದಾರೆ. ಅವರಿಗೆ ಹಿಂತಿರುಗಿ ಬಂದ ಮೇಲೆ ಸರಿಯಾದ ಸ್ಥಳಾವಕಾಶ ಸಿಕ್ಕಲಿಲ್ಲ. ಈ ವಿಷಯವನ್ನು ಅವರು ಅಪ್ಲಿಕೇಷನ್ನು ಕೊಟ್ಟು ಮಂತ್ರಿಗಳಿಗೆ ಕಳುಹಿಸಬೇಕೆಂದು ಕೇಳಿಕೊಂಡರೆ ಅದನ್ನು ಚೀಫ್ ಇಂಜಿನೀಯರವರು ಕಳುಹಿಸದೆ ಹಾಗೆಯೇ ನಿಲ್ಲಿಸಿದ್ದಾರೆ. ಬೇಕಾದರೆ Statistics ತರಿಸಿಕೊಂಡು ನೋಡಬಹುದು. ಹೀಗೆ ಹೊರಗಿನಿಂದ ತರಪೇತು ಹೊಂದಿ ಬಂದಂತಹವರ ಅನುಭವ ಜ್ಞಾನಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸದೆ ಇದ್ದರೆ ನಿಜವಾಗಿಯೂ ಇದರಿಂದ ದೇಶಕ್ಕೆ ಹಾನಿಯುಂಟಾಗುತ್ತದೆ ಎಂದು ವಿಷಾದದಿಂದ ಹೇಳಬೇಕಾಗಿದೆ.

ವ್ಯವಸಾಯದ ಕಾರ್ಯಕ್ರಮದ ವಿಷಯವಾಗಿ ಹೇಳಬೇಕಾದರೆ, ನಮ್ಮ ದೇಶದ ಹಳ್ಳಿಗಾಡಿನ ಜನಕ್ಕೆ ಈಚಿನ ಹೊಸ ಪದ್ಧತಿಗಳ ಪರಿಚಯ ಸರಿಯಾಗಿ ದೊರಕುತ್ತಿಲ್ಲ. ನಿಜವಾಗಿಯೂ ನಮ್ಮ ಆಹಾರದ ಸಮಸ್ಯೆಯು ಪರಿಹಾರವಾಗಬೇಕಾದರೆ ನಾನು ಒಂದು ಸೂಚನೆಯನ್ನು ಇಲ್ಲಿ ಹೇಳುತ್ತೇನೆ. ಅಗ್ರಿಕಲ್ಚರಲ್ ಕೋ-ಆಪರೇಟಿವ್ ಸೊಸೈಟಿಗಳನ್ನು ಏರ್ಪಾಡು ಮಾಡಬೇಕು ಅಥವಾ Farm System of Cultivation ಬರಬೇಕು. ಹಾಗೆ ಈಗಿನ ವ್ಯವಸಾಯಾಭಿವೃದ್ಧಿಗೆ ಗಮನವನ್ನು ಹೆಚ್ಚಿಗೆ ಕೊಡಬೇಕಾಗಿದೆ. ಇಲ್ಲದಿದ್ದರೆ ಆಹಾರದ ಅಭಾವ ಬರುತ್ತದೆ ಎಂದು ಹೇಳಬೇಕಾಗಿದೆ. ಬೆಳೆಗಳನ್ನು ಬೆಳೆಯಲು ಸರಿಯಾದ ಭೂಮಿಗಳಿಲ್ಲ. ಬಡವರಿಗೆ ಎತ್ತು ಮತ್ತು ಗೊಬ್ಬರದ ಸೌಕರ್ಯಗಳು ದೊರೆಯುತ್ತಿಲ್ಲ. ಈ ಬಗ್ಗೆ ಹೆಚ್ಚಿನ ಸರ್ವೆ ಮಾಡಬೇಕೆಂದು ನನ್ನ ಸೂಚನೆ. ಈಗ ವ್ಯವಸಾಯದ ಅಭಿವೃದ್ಧಿಗಾಗಿ ಬೇಕಾದಷ್ಟು ಖರ್ಚು ಮಾಡುತ್ತಿದ್ದರೂ ಆ ಖರ್ಚು ಮಾಡಿದುದಕ್ಕೆ ತಕ್ಕಂತೆ ಉತ್ಪತ್ತಿ ದೊರೆಯುತ್ತಿಲ್ಲ. ದೇಶದಲ್ಲಿ ಯೋಜನೆಗಳನ್ನು ಮಾಡುವಾಗ 1952-53ರಲ್ಲಿ Self-sufficiency ಬರುತ್ತದೆಂದು ಹೇಳಿದರು, ಬರಲಿಲ್ಲ. Inefficiency ಅನಿವಾರ್ಯವಾಗಿ ಬರುತ್ತಿದೆ. ಹಣ

(ಶ್ರೀ ವೈ. ವೀರಪ್ಪ)

ಕಾಸಿನ ವಿಚಾರವಾಗಿ ಬಹಳ ಜವಾಬ್ದಾರಿಯುತವಾಗಿ ಚರ್ಚೆ ಮಾಡಬೇಕಾಗಿದೆ. ಸಾರ್ವಜನಿಕ ಹಣಕಾಸಿನ ಪರಿಸ್ಥಿತಿಯನ್ನು ನಿಜವಾಗಿಯೂ ಕೂಲಂಕಷವಾಗಿ ಪರಿಶೀಲಿಸಿದರೆ ಈಗ ವಿಧಾನ ಸೌಧದ ರಿಪೋರ್ಟಿನಲ್ಲಿರುವಂತೆ 60 ಲಕ್ಷ ರೂಪಾಯಿಗಳು ವ್ಯಯವಾಗುತ್ತಿರಲಿಲ್ಲವೆಂದು ನಾನು ಹೇಳಬೇಕಾಗಿದೆ. ಆದಕಾರಣ ಎಲ್ಲ ದೃಷ್ಟಿಯಿಂದ ನೋಡಿ ಈ ಸಮಸ್ಯೆಯ ವಿಚಾರದಲ್ಲಿ ಬಹಳ ಜವಾಬ್ದಾರಿಯಿಂದ ಮಾತನಾಡಬೇಕಾಗಿದೆ; ಮತ್ತು ನಮ್ಮ ಅನೇಕ ಸ್ನೇಹಿತರು ಈಗಾಗಲೇ ಏನೇನು ಸೂಚನೆಗಳನ್ನು ಕೊಟ್ಟಿರುವರೋ ಅವುಗಳನ್ನು ಕಾರ್ಯರೂಪಕ್ಕೆ ತಂದು ಜನಗಳಿಗೆ ಅನುಕೂಲಗಳನ್ನು ಕಲ್ಪಿಸುವುದಕ್ಕೆ ಘನಸರ್ಕಾರದವರು ಮನಸ್ಸು ಮಾಡಬೇಕೆಂದು ಕೋರುತ್ತೇನೆ.

ಒಬ್ಬ ಸದಸ್ಯರು.—ಸ್ವಾಮಿ, ನಮ್ಮ ಜಿಲ್ಲೆಯ ಪ್ರತಿನಿಧಿಗಳಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ. ಅಲ್ಲಿಯ ಜನಸಂಖ್ಯೆಗನುಗುಣವಾಗಿಯಾದರೂ ಒಬ್ಬರಿಗೂ ಅವಕಾಶ ಕೊಟ್ಟಿಲ್ಲ. ಧಾರವಾಡ ಜಿಲ್ಲೆಯವರು ಯಾರೂ ಮಾತನಾಡಿಲ್ಲ.

ಅಧ್ಯಕ್ಷರು.—ಈಗ ನಾನು ಒಂದು ಕ್ರಮವನ್ನನುಸರಿಸುತ್ತಿದ್ದೇನೆ. ರಾಜ್ಯಪಾಲರ ಭಾಷಣದ ಮೇಲೆ ಹೋದ ಸಲ ಭಾಷಣ ಮಾಡಲು ಕಾಂಗ್ರೆಸ್ ಪಕ್ಷದವರಿಗೆ ಹೆಚ್ಚಿನ ಅವಕಾಶ ಸಿಕ್ಕಿಲ್ಲ ಮತ್ತು ಇತರರು ಆಗ ಮಾತನಾಡದೇ ಇರುವವರಿಗೆ ಈ ಸಾರಿ ಅವಕಾಶ ಕೊಡಬೇಕೆಂದು ಇದ್ದೇನೆ. ಎರಡು ಕಡೆಯ ಜನರೂ ಮಾತನಾಡಬೇಕು. 15 ಜನ ಕಾಂಗ್ರೆಸ್ಸಿನವರು ಮಾತನಾಡಬೇಕೆಂದು ಪಟ್ಟಿ ಕಳಿಸಿದ್ದಾರೆ.

About the present position that has arisen, I would like to make my remarks very clear. Hon'ble members have a right to make sweeping remarks but such sweeping remarks should be based on certain facts and they should be sure of the ground on which they make such remarks. It is not proper for either the Hon'ble Members or for the Treasury Benches to ask for details. Sometimes giving out such details may land us in difficulties because the facts may or may not be true. Another point is, the remarks may relate to some persons who may not be present in this House. Therefore, the Chair is unwilling to allow such things. So far as making sweeping remarks are concerned, Hon'ble Member who makes it must be sure of the ground on which he makes such remarks because if anybody asks for the details he must be in a position to give. Otherwise, the Chair will have to pull him up.

6 P.M.

Sri R. CHENNIGARAMIAH (Minister for Local Self-Government).—If the remarks are supported by facts, they would not become sweeping remarks.

Sri K. PUTTASWAMY.—I do not say anything against the ruling.

Mr. SPEAKER.—I am not making any remarks against you. I am only explaining the position.

*Sri K. PUTTASWAMY.—I am sorry. The Chair seems to have misunderstood my intention. The Hon'ble Member Sri Veerappa was not making a sweeping remark against any persons who are not in this House. He was referring to the Ministers and he was stating that due to the influence of the Ministers Ministers' near relations were being, appointed as professors though they were not fully qualified to be so appointed. I did not challenge his remark nor did I dispute his right to make those remarks. I wanted to know whether the member could give the information. If he could give the information the members are here to defend themselves. Sir, with all humility, I submit that I as a member would be within my rights to request for such information because that information would be in the best interests of the public.

Mr. SPEAKER.—I will explain once again personally. There is a possibility that there are two opinions in the matter. I do not say my Hon'ble friend Sri Puttaswamy is not correct. But so far as I am concerned, I know such ugly situations have arisen in Bombay also. At that time, what we did was, we asked the Hon'ble Member making a sweeping remark that he should be sure of the ground on which he was making those remarks. Then, he was not allowed to disclose the facts at all. Of course, remarks were made against certain Ministers. But there were other persons involved in it. So, it is always better not to go into the facts themselves. The Hon'ble Minister can say that the observations made by the Hon'ble Member are not correct and they are utterly false.

*Sri D. DEVARAJ URS.—In this connection I would like to submit to you one thing. You were pleased to say just now that if an Hon'ble Member who makes a sweeping remark or an allegation were to say that he has got facts and if the Hon'ble Minister were to ask for information and if that

information is not allowed to be given in this House, then a difficulty will arise. We will not be sure whether the remark that is made by the Hon'ble Member—whether it is sweeping or otherwise—is true or not, and the House will not be in a position to know that. Supposing the Minister also keeps quiet and does not ask for the information, whether that particular remark is correct or not, and if the Members are also not allowed to ask for the information, we will be completely in the dark as to whether the Hon'ble Member who makes that remark is doing it based on facts or whether the Hon'ble Minister is at fault. So, it will be very helpful to the House if we know the information.

Sri M. C. NARASIMHAN.—I want to know if it is proper when the Speaker has given a ruling, to go on discussing that particular ruling. I understand you have given a ruling.

Mr. SPEAKER.—Let us not take it in that light. Of course, if the Minister concerned were to ask the Hon'ble Member to give the facts, then that is a different thing altogether. The Minister concerned is not here. He has not asked for the facts of the case. So, it will be rather difficult for other members to go into these facts. I have already said that so far as such awkward situations are concerned, the Chair shall ask the Hon'ble Member concerned whether he is sure of the fact or whether he is sure of the ground on which he stands. Of course, if he states that he is sure of the ground on which he stands, even though it may not be correct, and it may be mere imagination, I will have to allow. If the Hon'ble Minister concerned were here and if he were to ask the Hon'ble Member to give the facts, then it would be a different matter.

Sri R. CHENNIGARAMIAH.—He did not mention any particular Minister. He merely said 'Minister'. We do not know which Minister. We are very much confused as to which particular Minister he refers.

Mr. SPEAKER.—I have already stated that I have no objection so far as Ministers are concerned in asking for the facts.

Sri H. M. CHANNABASAPPA.—I would like to say a word.

Mr. SPEAKER.—If it is questioning the ruling of the Chair, I would not allow it.

Sri H. M. CHANNABASAPPA.—I do not think I would go to the length of questioning the ruling of the Chair. I would only submit to the Chair.

Mr. SPEAKER.—Even indirectly, the Hon'ble Member should not question the ruling.

Sri H. M. CHANNABASAPPA.—Nor do I propose to do so. The Hon'ble Member not only referred to the Ministers, if I remember right, he also said 'Congress Members' in general. I think I am correct.

Mr. SPEAKER.—He did not hear so.

Sri H. M. CHANNABASAPPA.—On the recommendation of Congressmen, something like that, he said. He has not merely referred to Ministers.

Mr. SPEAKER.—I do not remember that.

Sri H. M. CHANNABASAPPA.—I would request the Chair to go into the proceedings and find out what he has said.

Mr. SPEAKER.—I will go through the whole record and find out whether he has said in respect of all Congressmen or in respect of Ministers.

Sri H. M. CHANNABASAPPA.—These are things which cannot be so easily swallowed and once a member makes a statement of fact, the House is seized of it.

Mr. SPEAKER.—I do not mean to say that the members should take anything lying down. When they get an opportunity they may hit him back.

*ಶ್ರೀ ಆಲೂರು ಹನುಮಂತಪ್ಪ (ನೆಲಮಂಗಲ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರ್ಥಸಚಿವರು ಆಯವ್ಯಯದ ಪಟ್ಟಿಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ದೇಶ ಒಂದು ಪ್ರಗತಿಮಟ್ಟಕ್ಕೆ ಮತ್ತು ಉನ್ನತ ಮಟ್ಟಕ್ಕೆ ಹೋಗುವಾಗ ಹಣಕಾಸಿನ ಕೊರತೆ ಆಯವ್ಯಯ ಪಟ್ಟಿಯಲ್ಲಿರತಕ್ಕದ್ದು ಅತಿಶಯೋಕ್ತಿಯಲ್ಲವೆಂದು ತಮ್ಮಮುಂದೆ ಹೇಳಬಯಸುತ್ತೇನೆ. ನಮ್ಮ ದ್ವಿತೀಯ ಪಾಂಚವಾರ್ಷಿಕ ಯೋಜನೆಯೇ ಆಗಲಿ ಅಥವಾ ದೇಶದ ಇತರ ಯಾವ ಯೋಜನೆಗಳೇ ಆಗಲಿ, ಹಳ್ಳಿಗಾಡಿನ ರೈತನ ಪರಿಸ್ಥಿತಿಯನ್ನು ಉತ್ತಮಪಡಿಸಿ ಅವನ ಹಣಕಾಸಿನ ಮುಗ್ಗಟ್ಟನ್ನು ನೀಗುವಂತೆ ಮಾಡಿ ವ್ಯವಸಾಯದ ಉತ್ಪಾದನೆಯನ್ನು ಹೆಚ್ಚಿಸಬೇಕೆನ್ನುವುದು ಅವುಗಳ ಮುಖ್ಯವಾದ ಗುರಿ. ದೇಶದಲ್ಲಿ ಶೇಕಡ 80 ಭಾಗಕ್ಕಿಂತ ಹೆಚ್ಚು ಜನರು ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ. ಅವರ ಸ್ಥಿತಿಗತಿಗಳು,

(ಶ್ರೀ ಆಲೂರು ಹನುಮಂತಪ್ಪ).

ಅವರ ವಸತಿ, ಅವರಿಗೆ ಬೇಕಾದ ಸಹಾಯ ಸೌಲಭ್ಯಗಳನ್ನು ಒದಗಿಸದೆ ಹೋದರೆ, ಅವರು ಸಮಾಜದಲ್ಲಿ ಇತರ ವರ್ಗದ ಜನರ ಜೀವನದ ಮಟ್ಟಕ್ಕೆ ಬರುವುದಿಲ್ಲವೆಂದು ಅನೇಕ ಯೋಜನೆಗಳನ್ನು ಇವೊತ್ತು ಜಾರಿಗೆ ತಂದಿದ್ದಾರೆ. ಈ ಯೋಜನೆಗಳು ಸರಿಯಾಗಿ ಕಾರ್ಯಗತವಾಗಿ ಯಾವ ಒಂದು ಘನೋದ್ದೇಶದಿಂದ ಈ ಯೋಜನೆಗಳನ್ನು ಜಾರಿಗೆ ತಂದಿದ್ದೇವೋ ಆ ಉದ್ದೇಶ ಸಾಧನೆಯಾಗಿ ರೈತನು ಒಂದು ಮೇಲ್ಮಟ್ಟಕ್ಕೆ ಹೋಗಲು ಅವನಿಗೆ ಸೌಕರ್ಯವನ್ನು ಒದಗಿಸುವ ಒಂದು ದೊಡ್ಡ ಜವಾಬ್ದಾರಿ ಸರ್ಕಾರದಮೇಲೂ ಮತ್ತು ಸಾರ್ವಜನಿಕರ ಪ್ರತಿನಿಧಿಗಳಾದ ನಮ್ಮ ಮೇಲೂ ಇದೆ ಯೆಂದು ತಮ್ಮ ಮುಂದೆ ಹೇಳುತ್ತೇನೆ. ವ್ಯವಸಾಯದ ಉತ್ಪತ್ತಿ ಎಷ್ಟರಮಟ್ಟಿಗೆ ಈ ದಿವಸ ದೇಶದಲ್ಲಿ ಆಗುತ್ತಿದೆ, ಒಬ್ಬ ರೈತನ ಕಷ್ಟಸುಖಗಳೇನು ಎನ್ನುವ ಕೆಲವು ವಿಷಯಗಳನ್ನು ನಾವು ಚರ್ಚೆಮಾಡಬೇಕಾದುದು ಸೂಕ್ತವೆಂದು ನಾನು ಭಾವಿಸುತ್ತೇನೆ. ರೈತರ ಹಿಂದಿನ ಪರಿಸ್ಥಿತಿ ಏನಿತ್ತು, ಒಂದು ಎಕರೆ ಜಮೀನಿನಲ್ಲಿ ಎಷ್ಟರಮಟ್ಟಿಗೆ ಆಹಾರಧಾನ್ಯಗಳನ್ನು ಬೆಳೆಯುವುದಕ್ಕೆ ಸಾಧ್ಯ, ಅವರ ಹಣಕಾಸಿನ ಪರಿಸ್ಥಿತಿ ಎಷ್ಟರಮಟ್ಟಿಗೆ ಇತ್ತು ಎಂಬುದನ್ನು ಆಲೋಚನೆಮಾಡಿದರೆ, ಜನ ಜೀವನ ಮಟ್ಟದಲ್ಲಿ ಹಿಂದುಳಿದ ವರ್ಗವೆಂದರೆ ರೈತ ವರ್ಗದ ಜನ. ಇವೊತ್ತಿನ ದಿವಸ ಅವರ ಕಷ್ಟ ಕಾರ್ಪಣ್ಯಗಳು ಸರಿಹೋಗಬೇಕಾದರೆ, ಅವರಿಗೆ ಒದಗತಕ್ಕ ಸರ್ಕಾರದ ಸೌಲಭ್ಯಗಳು ಆದಷ್ಟು ಜಾಗ್ರತೆ ಒದಗಬೇಕು. ಸರ್ಕಾರದ ಅಧಿಕಾರಿಗಳ ಮೂಲಕ, ಸಹಕಾರ ಸೊಸೈಟಿಗಳ ಮೂಲಕ ಕುಂದುಕೊರತೆಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನಿಸಬೇಕು. ಯಾವ ಒಬ್ಬ ರೈತನು ಬಾವಿಯ ಅವಶ್ಯಕತೆಗೆ ಕೊಡತಕ್ಕ ಒಂದು ಅರ್ಜಿಯೋ, ಅಥವಾ ಒಂದು ಅಹವಾಲೋ ಸರ್ಕಾರದ ಮುಂದೆ ಬಂದಾಗ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ರೈತನ ಕಷ್ಟಸುಖಗಳನ್ನು ಕೇಳಬೇಕು. ಅವನ ಕಷ್ಟಗಳನ್ನು ಆದಷ್ಟು ಜಾಗ್ರತೆ ಹೋಗಲಾಡಿಸುವುದಕ್ಕೂ ಮತ್ತು ಅವನಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದಕ್ಕೂ ಪ್ರಯತ್ನ ಮಾಡಬೇಕೆಂದು ಈ ಮೂಲಕ ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ.

ವ್ಯವಸಾಯ ಎಷ್ಟರಮಟ್ಟಿಗೆ ಈ ದಿವಸ ನಮ್ಮ ಹಳ್ಳಿಗಾಡಿನಲ್ಲಿ ನಡೆಯುತ್ತಿದೆಯೆಂದರೆ ಬಹುಜನ ತಮ್ಮ ವ್ಯವಸಾಯವನ್ನು ಮಾಡುವ ಕಾಲ ವರ್ಷದಲ್ಲಿ ಕೇವಲ ಆರು ತಿಂಗಳು ಅಥವಾ ಎಂಟು ತಿಂಗಳು. ಇನ್ನುಳಿದ ಮೂರು ನಾಲ್ಕು ತಿಂಗಳು ಕೆಲಸವಿಲ್ಲದೆ ಕಾಲ ಕಳೆಯುತ್ತಾರೆ. ಆ ಕಾಲದಲ್ಲಿ ಅವರಿಗೆ ಕೆಲಸ ವಿರುವಂತೆ ಯಾವುದಾದರೂ ಒಂದು ಕೈಗಾರಿಯನ್ನು ಸ್ಥಾಪಿಸಿ ರೈತರು ತಮ್ಮ ವಿರಾಮ ಕಾಲವನ್ನು ಸದ್ವಿನಿಯೋಗ ಮಾಡಿಕೊಂಡು ತನ್ಮೂಲಕ ಉನ್ನತ ಸ್ಥಿತಿಗೆ ಬರಲು ಮಾರ್ಗ ಮಾಡಿಕೊಡಬೇಕು. ಸಹಕಾರ ಸಂಘಗಳ ಮೂಲಕ ಕೈಗಾರಿಗೆಗಳನ್ನು ಜಿಲ್ಲೆಯ ಪ್ರತಿಯೊಂದು ತಾಲ್ಲೂಕು ಹೋಬಳಿಗಳಲ್ಲೂ ಸ್ಥಾಪಿಸಿ ವ್ಯವಸಾಯಗಾರರಿಗೆ ಉದ್ಯೋಗ ಕಲ್ಪಿಸಿಕೊಟ್ಟು ಸೌಕರ್ಯ ಮಾಡಿಕೊಡಬೇಕು. ಸಹಕಾರ ಸಂಘಗಳನ್ನು ನೋಡಿದರೆ ಈದಿವಸ ಗ್ರಾಮಾಂತರಗಳಲ್ಲಿ ಅವು ಅಷ್ಟೊಂದು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದು ಸರ್ಕಾರದ ಮುಂದೆ ಹೇಳಬೇಕಾಗಿದೆ. ಮುಖ್ಯವಾಗಿ ಅದಕ್ಕೆ ಸಾರ್ವಜನಿಕರ ಬೆಂಬಲ ದೊರಕಿದರೂ ಕೂಡ ಸಹಕಾರ ಸಂಘಗಳು ಹೀನಸ್ಥಿತಿಯಲ್ಲಿ ಕೆಲಸ ಮಾಡುತ್ತಾ ಅಸಡ್ಡೆಯ ಮನೋಭಾವದಿಂದ ಇರುವುದಕ್ಕೆ ಕಾರಣವೇನೆಂದು ಸರ್ಕಾರ ಆಲೋಚಿಸಿ ಅದಕ್ಕೆ ಸೂಕ್ತವಾದ ಸಲಹೆ ಕೊಡುತ್ತಿರಬೇಕು. ವ್ಯವಸಾಯದ ಇಲಾಖೆಯಿಂದ ಒದಗಿಸುವ ಕೃತಕ ಗೊಬ್ಬರವನ್ನಾಗಲಿ ಅಥವಾ ರೈತರಿಗೆ ಬೇಕಾದ ಇತರ ಉಪಕರಣಗಳನ್ನಾಗಲಿ ಹಂಚಲು ಸಹಕಾರ ಸಂಘಗಳನ್ನು ಅಥವಾ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಬೇಕು. ಹಾಗೆ ಮಾಡದಿದ್ದರೆ ರೈತರಿಗೆ ತೊಂದರೆಯಾಗುತ್ತದೆ. ಈ ಸಂಘಗಳನ್ನು ಉನ್ನತ ಮಟ್ಟಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಆಮೇಲೆ ಸಾಲಸೋಲಗಳನ್ನೊದಗಿಸುವ ವಿಷಯದಲ್ಲಿ ಒಂದೆರಡು ಮಾತನ್ನು ಹೇಳಬೇಕೆಂಬ ಇಚ್ಛೆಯಿದೆ. ಈಗ ರೈತರಿಗೆ ಅಲ್ಪಾವಧಿ ಸಾಲ ಮತ್ತು ದೀರ್ಘಾವಧಿ ಸಾಲಗಳನ್ನೊದಗಿಸಿ ಸರ್ಕಾರದವರು ನಾಲ್ಕಾರು ರೀತಿಯಲ್ಲಿ ಸಹಾಯ ಮಾಡುತ್ತಿದ್ದಾರೆ. ಆದರೆ ಇದರಿಂದ ರೈತವರ್ಗಕ್ಕೆ ಎಷ್ಟುಮಟ್ಟಿಗೆ ಅನುಕೂಲವಾಗುತ್ತಿದೆಯೆಂದರೆ ಈ ದಿವಸ ಒಬ್ಬ ರೈತ ಒಂದು ಅರ್ಜಿ ಸರ್ಕಾರಕ್ಕೆ ಕೊಟ್ಟರೆ ಅದು ಕಾರ್ಯಗತವಾಗಬೇಕಾದರೆ ಬಹಳ ಕಾಲ ವಿಳಂಬವಾಗುತ್ತದೆ ಎಂದು ಬಹಳ ಮಂದಿ ರೈತರು ತಮಗಿರುವ ಕುಂದುಕೊರತೆಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣ ನಾಲ್ಕಾರು ಇಲಾಖೆಗಳಿಗೆ ಈ ವಿಚಾರ ಸಂಬಂಧಪಟ್ಟಿರುವುದು ಎಂದು ನನಗನ್ನಿಸುತ್ತದೆ. ನಾಲ್ಕಾರು ಇಲಾಖೆಗಳಿಗೆ ರೈತ ಅರ್ಜಿ ಹಾಕಬೇಕು. ಆ ಮೂಲಕ ಸೌಕರ್ಯ ಕೇಳಬೇಕು. ರೈತ ಸುಲಲಿತವಾಗಿ ಅವನಿಗಿರುವ ಕಾಲವನ್ನು ಕಳೆಯದೆ ಅವನ ಕೆಲಸದಲ್ಲಿ ಉದ್ಯುಕ್ತನಾಗಿ ಕೆಲಸ ಮಾಡಿಕೊಂಡು ಹೋಗಬೇಕಾದರೆ, ಆತನ ಕೆಲಸಕಾರ್ಯ ಸುಲಲಿತವಾಗಿ ಆಗಬೇಕಾದರೆ ಸುವ್ಯವಸ್ಥಿತವಾದ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಕೈಕೊಳ್ಳಬೇಕು, ರೈತನಿಗೊದಗಬೇಕಾದ ಸೌಕರ್ಯಗಳನ್ನೊದಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ. ವ್ಯವಸಾಯದ ಇಲಾಖೆ ರೈತರಿಗೆ ಎಷ್ಟುಮಟ್ಟಿಗೆ ಈ ದಿವಸ ಉಪಯುಕ್ತವಾಗಿದೆಯೆಂದರೆ ಇಡೀ ಮೈಸೂರು ದೇಶದಲ್ಲಿ ಒಂದು ವ್ಯವಸಾಯದ ಸಂಘವಿದೆ. ರೈತನ ವಿಷಯದಲ್ಲಿ ಪ್ರಚಾರ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ರೈತರಿಗೆ ಒದಗಿಸಬೇಕಾದ ಸೌಕರ್ಯ ಸೌಲಭ್ಯಗಳ ಕಡೆ ಗಮನ ಕೊಡುವುದಕ್ಕೆ ಅನುಕೂಲವಾಗುವಂತೆ ಸರ್ಕಾರ ಹೆಚ್ಚಿನ ಮಟ್ಟದಲ್ಲಿ ಈ ವ್ಯವಸಾಯ ಸಂಘಕ್ಕೆ ಹಣಸಹಾಯ ನೀಡಬೇಕು. ಈ ಸಂಘಕ್ಕೆ ಒಂದು ಕಟ್ಟಡ ಸಹ ಕೊಟ್ಟು ಕಾರ್ಯಕ್ರಮಕ್ಕೆ ಸಹಕಾರಿಯಾಗುವಂತೆ ಒಂದು ವ್ಯಾನ್ ಕೊಡಬೇಕು, ಹಾಗೆ ಮಾಡಿದರೆ ಬಹಳ ಹೆಚ್ಚಿನ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದು ಎಲ್ಲಾ ಡಿಸ್ಟ್ರಿಕ್ಟುಗಳಿಗೂ ಸಂಬಂಧಪಟ್ಟ ವಿಷಯ. ರೈತವರ್ಗ ನಮ್ಮ ದೇಶದಲ್ಲಿ ಅಧಿಕ ಸಂಖ್ಯೆಯಲ್ಲಿದೆ ಯೆಂದರೆ ಅತಿಶಯೋಕ್ತಿಯಲ್ಲ. ಆದ್ದರಿಂದ ಅವರಿಗೆ ಬೇಕಾದ ಕೆಲಸಗಳು ಜರೂರಾಗಿ ಮತ್ತು ಅವಶ್ಯಕವಾಗಿ ಆಗಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹಳ್ಳಿಗಳಲ್ಲಿ ಈ ದಿವಸ ಪ್ರಚಾರ ಕಾರ್ಯಕ್ರಮವಿರುವುದು ಬಹಳ ಮುಖ್ಯವಾದುದು. ಯಾವ ಭೂಮಿಗೆ ಕೃತಕ ಗೊಬ್ಬರವನ್ನು ಉಪಯೋಗಿಸಬೇಕು, ಯಾವ ಬಿತ್ತನೆ ಬೀಜದಿಂದ ಉತ್ತಮ ಮಟ್ಟದ ಒಳ್ಳೆಯ ಬೆಳೆ ಬೆಳೆಯುತ್ತದೆ ಎಂದು ಏನೂ ಅರಿಯದಿರುವ ಹೆಚ್ಚು ಭಾಗದ ರೈತವರ್ಗಕ್ಕೆ ಪ್ರಚಾರ ಮಾಡಲು ತಕ್ಕ ಕಾರ್ಯಕ್ರಮವಿರಬೇಕಾದದ್ದು ಬಹಳ ಮುಖ್ಯವಾದುದೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಈಗ ದೇಶದ ಆದಾಯದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಹಳ್ಳಿ

ಗಳಿಗೆ ವ್ಯವಸಾಯಕ್ಕಾಗಿ ಮುಖ್ಯವಾಗಿ ವಿನಿಯೋಗವಾಗುವ ರೀತಿಯಲ್ಲಿ ನೋಡಿಕೊಳ್ಳಬೇಕಾದದ್ದು ಆವಶ್ಯಕ. ಆ ಜವಾಬ್ದಾರಿ ಸರ್ಕಾರದ ಮೇಲಿದೆ. ಅದಕ್ಕೆ ಈ ದಿವಸ ವ್ಯವಸಾಯದ ಇಲಾಖೆಯಲ್ಲಿ ಆಯಾ ತಾಲ್ಲೂಕುಗಳಲ್ಲಿರುವ ಸಿಬ್ಬಂದಿ ಸಾಲದು. ಪ್ರತಿಯೊಂದು ಹೋಬಳಿಗೂ ಒಬ್ಬೊಬ್ಬ ಫೀಲ್ಡ್‌ವರ್ಕ್ ಆದರೂ ಕೊಡಬೇಕು. ಆ ಮೂಲಕ ರೈತರ ಜಮೀನಿನ ಹತ್ತಿರ ಹೋಗಿ ಖುದ್ದಾಗಿ ನೋಡಿ ಮಾಡುವ ವ್ಯವಸಾಯ ಸರಿಯಾಗಿದೆಯೆ, ಇಲ್ಲವೆ ಎಂದು ಪರೀಕ್ಷೆ ಮಾಡುವ ವ್ಯವಸ್ಥೆಯನ್ನು ಮಾಡಲೇಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ, ಈ ರೀತಿಯಾಗಿ ವ್ಯವಸಾಯ ಸುಧಾರಣೆಯಿಂದ ನಾವು ರೈತವರ್ಗದ ಜೀವನ ಮಟ್ಟವನ್ನು ಉತ್ತಮಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕು, ಇಡೀ ದೇಶದ ಪ್ರಗತಿ ಈ ದಿವಸ ರೈತರನ್ನವಲಂಬಿಸಿದೆಯೆಂದರೆ ತಪ್ಪಾಗಲಾರದು, ಅತಿಶಯೋಕ್ತಿಯಾಗಲಾರದು. ಈಗ ಜನಜೀವನ ಮಟ್ಟ ಯಾವರೀತಿಯಿದೆ, ರೈತನ ಸ್ಥಿತಿಗತಿ ಹೇಗಿದೆ ಎಂದು ಹೊಸ ಸಮಾಜ ರಚನೆಯಾಗುವ ಈ ಸಂದರ್ಭದಲ್ಲಿ ನಾವೆಲ್ಲರೂ ಪರಿಶೀಲಿಸಿ ನೋಡಬೇಕಾದ್ದು ಬಹಳ ಅಗತ್ಯವಾದುದು. ರೈತ ತಾನು ಬೆಳೆದ ಆಹಾರ ಧಾನ್ಯವನ್ನು ತಾನು ಅನುಭವಿಸುವುದರ ಜೊತೆಗೆ ದೇಶಕ್ಕೆಲ್ಲಾ ಒದಗಿಸಲು ಸಾಧ್ಯವಾಗುವಂತೆ ರೈತನ ಸ್ಥಿತಿಗತಿಯನ್ನು ಉತ್ತಮಪಡಿಸುವಂತೆ ಕಾರ್ಯಕ್ರಮ ಕೈಕೊಳ್ಳಬೇಕಾದದ್ದು ಅಗತ್ಯವಾದ ಕರ್ತವ್ಯ. ಮುಂದೆ ಇವರ ವಿಷಯದಲ್ಲಿ ಹೆಚ್ಚಿನ ಜವಾಬ್ದಾರಿಯಿಂದ ಸರ್ಕಾರದವರು ವರ್ತಿಸುತ್ತಾರೆಂದು ನಂಬಿದ್ದೇನೆ.

ಇನ್ನು ನಿರುದ್ಯೋಗದ ಸಮಸ್ಯೆಯ ವಿಚಾರವನ್ನು ಅನೇಕ ಮಿತ್ರರು ಹೇಳಿದ್ದಾರೆ, ಅನೇಕ ಜನ ವಿದ್ಯಾವಂತರು ಈ ದಿವಸ ಕೆಲಸ ಕಾರ್ಯವಿಲ್ಲದೆ ಬಹಳ ತೊಂದರೆಗೆ ಈಡಾಗಿದ್ದಾರೆ. ವಿದ್ಯಾಭ್ಯಾಸ ಮಾಡಿದ ಮೇಲೆ ಉದ್ಯೋಗಸ್ಥರಾಗಬೇಕು, ಇಲ್ಲವೆ ಹಳ್ಳಿಗಳಲ್ಲಿ ನೆಲಸಬೇಕು ಅಥವಾ ಪಟ್ಟಣಗಳಲ್ಲಿ ಕೆಲಸ ಕಾರ್ಯಗಳಲ್ಲಿದ್ದು ಜೀವನ ಮಾಡಬೇಕು. ಕೆಲಸಕಾರ್ಯಗಳನ್ನು ಮಾಡಿಕೊಂಡು ಜೀವನ ಮಾಡುವುದಕ್ಕೆ ಹಣಕಾಸಿನ ಮುಗ್ಗಟ್ಟು ಅಥವಾ ಇಲಾಖೆಗಳಲ್ಲಿ ಕೆಲಸ ಸಿಕ್ಕದೆ ಇರುವುದು ಅಡ್ಡಿಯಾಗುತ್ತದೆ. ವಿದ್ಯಾರ್ಥಿ ವಿದ್ಯಾಭ್ಯಾಸ ಮಾಡಿದ ಮೇಲೆ ಹಳ್ಳಿಗಳಲ್ಲಿ ನೆಲಸಬೇಕು. ಹಾಗೆ ಮಾಡಬೇಕಾದರೆ ಅಲ್ಲಿ ಅತನಿಗೆ ಸೌಕರ್ಯ, ಸೌಲಭ್ಯ ಒದಗಿಸಬೇಕು. ಅದು ಸರ್ಕಾರದ ಮೇಲಿರುವ ಜವಾಬ್ದಾರಿ. ಅದನ್ನು ನಿರ್ವಹಿಸಲು ಗ್ರಾಮ ಕೈಗಾರಿಕೆಗಳನ್ನು ಆಯಾ ತಾಲ್ಲೂಕುಗಳಲ್ಲಿ ಆಯಾ ಹೋಬಳಿಗಳಲ್ಲಿ ಪ್ರಾರಂಭಿಸಬೇಕಾದ ಆವಶ್ಯಕತೆಯಿದೆ. ಜನರು ಕೇಳುವ ಕೈಗಾರಿಕೆಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಮುಂದುವರಿಸಬೇಕು. ನಿರುದ್ಯೋಗ ಸಮಸ್ಯೆಯನ್ನು ಆದಷ್ಟು ಜಾಗ್ರತೆಯಾಗಿ ನಿರ್ಮೂಲ ಮಾಡಬೇಕು, ಈ ದಿವಸ ದೇಶದ ಮುಂದಿರುವ ಈ ದೊಡ್ಡ ಪ್ರಶ್ನೆಯನ್ನು ಬಿಡಿಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ರೈತರಿಗೆ ಕೊಡುವ ಕೆಲವು ಸೌಲಭ್ಯಗಳನ್ನು ನೋಡೋಣ. ಆಹಾರ ಧಾನ್ಯಗಳ ಬೆಲೆ ಹೆಚ್ಚುತ್ತಿದೆ ಎಂದು ವ್ಯಾಪಾರ ಮಾಡದಿರುವವರು ವಾದ ಮಾಡುತ್ತಿದ್ದಾರೆ. ವ್ಯಾವಸಾಯಗಾರರಲ್ಲದಿರುವವರಲ್ಲಿ ಸರ್ಕಾರಿ ಅಧಿಕಾರಿಗಳು ಅಥವಾ ಪಟ್ಟಣವಾಸಿಗಳಿದ್ದಾರೆ, ವರ್ತಕರಿದ್ದಾರೆ. ಬೆಲೆ ಹೆಚ್ಚುತ್ತಿವೆಯೆಂದು ಹೇಳುವುದು ಸಹಜ, ಅದನ್ನು ಒಪ್ಪೋಣ. ಹಳ್ಳಿಗಾಡಿನಲ್ಲೂ ಬೇಕಾದಷ್ಟು ಜನ ವ್ಯವಸಾಯಗಾರರಲ್ಲದಿರುವ ಕೂಲಿಗಾರರಿದ್ದಾರೆ. ಈ ದಿವಸ ಇತರ ಪದಾರ್ಥಗಳ ಮೇಲೆ ಎಷ್ಟುಮಟ್ಟಿಗೆ ಬೆಲೆ ಏರಿದೆ. ಅದರಿಂದ ರೈತರಿಗೇನಾದರೂ ತೊಂದರೆಯಾಗಿದೆಯೆ ಎಂಬುದನ್ನೂ ಆಲೋಚಿಸಬೇಕು. ಬರೀ ವ್ಯವಸಾಯದಿಂದ ಬಂದ ಉತ್ಪತ್ತಿಯಿಂದ ಜೀವನ ಮಾಡುವ ರೈತನ ಸ್ಥಿತಿಗತಿಯನ್ನು ಕೂಡ ಆಲೋಚಿಸಬೇಕಾದದ್ದು ಬಹಳ ಆವಶ್ಯಕ. ಅದಕ್ಕೆ ಪ್ರಾರ್ಥನೆ ಮಾಡುವುದಿಷ್ಟೆ: ಹೆಚ್ಚು ಬೆಳೆ ಬೆಳೆಯುವುದಕ್ಕೆ ಪ್ರೋತ್ಸಾಹಿಸಿ ಆದಷ್ಟುಮಟ್ಟಿಗೆ ರೈತನ ಕುಂದುಕೊರತೆಯನ್ನು ಜಾಗ್ರತೆ ಹೋಗಲಾಡಿಸಿ ಎಕರೆಯೊಂದಕ್ಕೆ ಐದರಿಂದ ಹತ್ತು ಪಲ್ಲ ಬೆಳೆಯುವ ಜಮೀನುಗಳಲ್ಲಿ 20-22 ಪಲ್ಲ ಬೆಳೆಯಲು ಬೇಕಾದ ಸೌಕರ್ಯ ಕೊಡಬೇಕು. ಹಾಗೆ ಮಾಡಿದ್ದೇ ಆದರೆ ಈ ದಿವಸದ ಪ್ರಶ್ನೆ ಉದ್ಭವವಾಗುವುದಿಲ್ಲ. ಇದಕ್ಕಾಗಿ ಸಾಮಾನ್ಯವಾಗಿ ವ್ಯವಸಾಯದ ಇಲಾಖೆ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಇತರ ಅಧಿಕಾರಿಗಳು, ಜನಗಳು ದುಡಿಯುತ್ತಾರೆ, ಸರ್ಕಾರ ಆಗಾಗ್ಗೆ ಇದಕ್ಕೆ ಉತ್ತೇಜನ ಕೊಡುತ್ತದೆ ಎಂದು ನಂಬಿ ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, ಇದುವರೆಗೂ ಅನೇಕ ನನ್ನ ಸಹೋದರರು ಅನೇಕ ವಿಷಯಗಳ ಬಗ್ಗೆ ಸರ್ಕಾರವನ್ನು ಟೀಕಿಸುವ ರೀತಿಯಲ್ಲಿ ಮಾತನಾಡಿದ್ದಾರೆ. ಆದರೆ ನಾವು ಬರೀ ಸರ್ಕಾರದವರನ್ನು ಟೀಕಿಸಿದರೆ ಅಥವಾ ಹಳಿದರೆ ಅವರಲ್ಲಿರುವ ನ್ಯೂನತೆಗಳನ್ನು ಅವರು ತಿದ್ದಿಕೊಳ್ಳುವುದಿಲ್ಲ. ಅನ್ಯರನ್ನು ಟೀಕೆ ಮಾಡತಕ್ಕ ಜನರು ನುಡಿದಂತೆ ನಡೆಯುವುದನ್ನು ಕಲಿಯಬೇಕು. ''ಮನಮೆಚ್ಚಿ ಶುದ್ಧನಲ್ಲದೆ ಜನಮೆಚ್ಚಿ ಶುದ್ಧನಲ್ಲವಯ್ಯ'' ಎಂಬ ವಚನಕ್ಕೆ ಅನುಸಾರವಾಗಿ ನಾವು ನಮ್ಮ ಕಾರ್ಯಗಳಲ್ಲಿ ಅಂತರಂಗಶುದ್ಧಿಯಿಂದ ನುಡಿದಂತೆ ನಡೆಯಬೇಕು. ಆಗ ನಾವು ಸರ್ಕಾರದವರನ್ನು ಟೀಕೆ ಮಾಡಿದರೆ ಅವರು ತಮ್ಮಲ್ಲಿರುವ ನ್ಯೂನತೆಗಳನ್ನು ಮತ್ತು ದೋಷಗಳನ್ನು ತಿದ್ದಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಾರೆ. ಆದರೆ ನಾನೀಗ ಸರ್ಕಾರದವರಿಗೆ ಕೆಲವು ಸೂಚನೆಗಳನ್ನೂ ಮತ್ತು ಸಲಹೆಗಳನ್ನೂ ಕೊಡಬೇಕೆಂದು ತಮ್ಮ ಮುಂದೆ ನಿಂತಿದ್ದೇನೆ. ಮಾನ್ಯ ಆರ್ಥಿಕ ಸಚಿವರು ದೇಶದ ಆಗುಹೋಗುಗಳನ್ನು ತಿಳಿದು ಅದಕ್ಕೆ ಅನುಗುಣವಾದ ಆಯವ್ಯಯ ಪಟ್ಟಿಯೊಂದನ್ನು ಸಭೆಯ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಆದ್ದರಿಂದ ನಾವು ನಮ್ಮ ದೇಶದ ಆರ್ಥಿಕ ಪರಿಸ್ಥಿತಿಗೆ ಅನುಸಾರವಾಗಿ ಈ ಆಯವ್ಯಯ ಪಟ್ಟಿಯನ್ನು ಒಪ್ಪಿಕೊಳ್ಳಬೇಕಾಗಿದೆ. ಅವರು ಹೊಸ ತೆರಿಗೆಗಳನ್ನು ಸೂಚಿಸದೆ ಇರುವುದಕ್ಕೆ ನಾವು ಬಹಳ ಸಂತೋಷಪಡಬೇಕಾಗಿದೆ. ಮಾನ್ಯ ಹಣಕಾಸಿನ ಸಚಿವರು ಹೊಸ ತೆರಿಗೆಗಳನ್ನು ಸೂಚಿಸಲು ಇನ್ನು ಯಾವ ಮಾರ್ಗವೂ ಉಳಿದಿಲ್ಲ. ಇನ್ನು ಉಳಿದಿರುವ ಒಂದೇ ಒಂದು ಮಾರ್ಗವೆಂದರೆ ಅದು ದೇವರನ್ನು ಮರೆಹೋಗುವುದು. ಈ ದೃಷ್ಟಿಯಿಂದ ಹೇಳುವುದಾದರೆ, ಕರ್ಣಾಟಕದಲ್ಲಿ ದೊಡ್ಡ ದೊಡ್ಡ ಯಾತ್ರಾಸ್ಥಳಗಳಲ್ಲಿ ಜಾತ್ರೆಗಳು ನಡೆಯುತ್ತವೆ. ಅವುಗಳ ಮೇಲೇನಾದರೂ ಒಂದು ಹೊಸ ತೆರಿಗೆಯನ್ನು ಹಾಕಿದರೆ ಆಗ ಈ ಖೋತಾವನ್ನು ಭರ್ತಿಮಾಡಬಹುದೇ ಹೊರತು ಇದನ್ನು ಬಿಟ್ಟರೆ ಇನ್ನು ಬೇರೆ ಯಾವ ಮಾರ್ಗವೂ ಇಲ್ಲ. ಹೊಗೆಸೊಪ್ಪು ಮತ್ತು ಮನರಂಜನೆ ಕಾರ್ಯಕ್ರಮಗಳ ಮೇಲೆ ಇನ್ನೂ ಅಲ್ಪಸ್ವಲ್ಪ ತೆರಿಗೆಯನ್ನು ಹಾಕಿದ್ದರೆ ಖೋತಾವು ಸ್ವಲ್ಪಮಟ್ಟಿಗಾದರೂ ಭರ್ತಿ ಆಗುತ್ತಿರಲಿಲ್ಲವೇ ಎಂಬುದನ್ನು ನಮ್ಮ ಆರ್ಥಿಕ ಸಚಿವರು ಯೋಚನೆ ಮಾಡಿದ್ದರೆ ಒಳ್ಳೆಯದಾಗಿರುತ್ತಿತ್ತು. ''ಸರ್ಕಾರದ ಕೆಲಸ ದೇವರ ಕೆಲಸ'' ಎಂಬುದಾಗಿ ನಮ್ಮ ವಿಧಾನಸೌಧದ

(ಶ್ರೀಮತಿ ನಾಗರತ್ನಮ್ಮ.)

ಮಹಾದ್ವಾರದಲ್ಲಿ ಬರೆದಿದ್ದಾರೆ. ಆ ರೀತಿ ಸರ್ಕಾರದ ಕೆಲಸವನ್ನು ದೇವರ ಕೆಲಸ ಎಂಬುದಾಗಿ ತಿಳಿದು ಎಲ್ಲರೂ ಶ್ರದ್ಧೆಯಿಂದ ಕೆಲಸ ಮಾಡಿದರೆ ನಿಜವಾಗಿ ದೇಶ ಪ್ರಗತಿ ಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಈಗಿನ ಆಧುನಿಕ ಕಾಲದಲ್ಲಿ ದೇವರ ವಿಚಾರದಲ್ಲಿ ಅಷ್ಟು ಶ್ರದ್ಧೆ ವಹಿಸುತ್ತಾರೆಂದು ನಾನು ತಿಳಿದಿಲ್ಲ. ಯಾವ ಕೆಲಸವನ್ನು ಮಾಡಬೇಕಾದರೂ ಮೊದಲು ಅಂತರಂಗ ಬಹಿರಂಗಗಳು ಶುದ್ಧವಾಗಿರ ಬೇಕು. ಸರ್ಕಾರದ ಕೆಲಸದಲ್ಲಿ ಶುದ್ಧಿಯಿಂದ ದುಡಿಯು ವವರು ಅನೇಕರು ಇದ್ದಾರೆ. ಆದರೆ ಅದಕ್ಕೆ ತಕ್ಕಂತೆ ಅವರಿಗೆ ಪ್ರಾಮಾಣಿಕತೆ, ದಕ್ಷತೆ ಇವುಗಳನ್ನು ಕಲಿಸಿದರೆ ಅನುಕೂಲವಾಗುತ್ತದೆಂದು ನನ್ನ ಅಭಿಪ್ರಾಯ.

ಇನ್ನು ಸರ್ಕಾರದವರಿಗೆ ನಾನು ಒಂದೆರಡು ಸೂಚನೆ ಗಳನ್ನು ಹೇಳಬಯಸುತ್ತೇನೆ. ಆಸ್ಪತ್ರೆಗಳಿಗಾಗಿ ಮೂರೂವರೆ ಕೋಟಿ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ತೆಗೆದಿಟ್ಟಿದ್ದಾರೆ. ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಈ ಬಾಬಿಗೆ ಇಷ್ಟು ಮೊಬಲಗನ್ನು ಒದಗಿಸಲು ಸರ್ಕಾರ ದವರು ಈ ಬಾಬಿನ ಬಗ್ಗೆ ಬಹಳ ಹೆಚ್ಚಿನ ನಿಗಾ ತೆಗೆದು ಕೊಂಡಿದ್ದಾರೆ. ಇದು ಬಹಳ ಸಂತೋಷದ ವಿಷಯ. ಆದರೆ ಆಸ್ಪತ್ರೆಗಳಲ್ಲಿ ಬಡವರಿಗೆ ಹೆಚ್ಚಿನ ಸಹಾಯ ದೊರಕದೆ ಅಲ್ಲಿ ಔಷಧಗಳು ಮತ್ತು ಇತರ ಸಾಮಗ್ರಿ ಗಳು ಇವುಗಳೆಲ್ಲ ಒಳ್ಳೆಯ ರೀತಿಯಲ್ಲಿ ಉಪಯೋಗ ವಾಗುತ್ತವೆಯೋ ಎಂಬ ಭರವಸೆಯು ಬಗ್ಗೆ ಮತ್ತು ಅಲ್ಲಿನ ದಾದಿಯರು ಮತ್ತು ಡಾಕ್ಟರುಗಳು ಸಹ ಸರಿ ಯಾಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆಯೋ ಇಲ್ಲವೇ ಎಂಬುದರ ಬಗ್ಗೆ ನಮ್ಮ ಆರೋಗ್ಯ ಸಚಿವರು ಆಗಿಂದಾಗ್ಗೆ ಆಸ್ಪತ್ರೆಗಳಿಗೆ ಬಡವರ ವೇಷದಲ್ಲಿ ಭೇಟಿ ಯಿತ್ತು ವಿಮರ್ಶೆಮಾಡಿ ನೋಡಿದರೆ ಚೆನ್ನಾಗಿರುತ್ತದೆ. ಕೆಲವು ಬೆಂಗಳೂರಿನ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಬಡವರಿಗೆ ಸ್ವಲ್ಪವೂ ಆದರಣೆ ಸಿಕ್ಕುತ್ತಿಲ್ಲ, ಅಲ್ಲಿನ ಕೆಲವು ನೌಕರರು ಆಸ್ಪತ್ರೆಗೆ ಹೋಗುವ ಜನಗಳಿಂದಲೂ ಲಂಚವನ್ನು ವಸೂಲು ಮಾಡುತ್ತಿದ್ದಾರೆ. ನಮ್ಮ ಆರೋಗ್ಯ ಸಚಿವರು ಅಥವಾ ಅವರ ಸಂಬಂಧೀಕರು ಯಾರಾದರೂ ಒಂದೆರಡು ದಿನಗಳು ಬಡವರ ವೇಷದಲ್ಲಿ ಅಲ್ಲಿದ್ದು ಆ ಡಾಕ್ಟರುಗಳಿಂದ ಮತ್ತು ದಾದಿಯರಿಂದ ಉಪಚಾರ ಹೊಂದಿದರೆ ಆಗ ನಮ್ಮ ಮಂತ್ರಿಗಳಿಗೆ ಅವರು ಹೇಗೆ ರೋಗಿಗಳಿಗೆ ಉಪಚಾರ ಮಾಡುತ್ತಾ ರೆಂಬುದನ್ನು ತಿಳಿದುಕೊಳ್ಳಲು ಬಹಳ ಅನುಕೂಲ ವಾಗುತ್ತದೆ.

ಒಬ್ಬ ಸದಸ್ಯರು.—ಮಂತ್ರಿಗಳು ಬಡವರ ವೇಷದಲ್ಲಿ ಹೋಗಬೇಕು.

ಶ್ರೀಮತಿ ನಾಗರತ್ನಮ್ಮ.—ಇನ್ನು ಕ್ಷಯರೋಗ ದೇಶದಲ್ಲಿ ದಿನೇದಿನೇ ಹೆಚ್ಚುತ್ತದೆ. ಕ್ಷಯದ ಆಸ್ಪತ್ರೆಗಳು ಕೇವಲ ಒಂದೆರಡು ಮಾತ್ರ ಇರುತ್ತವೆ. ಆದ್ದರಿಂದ ಜನಗಳಿಗೆ ಹೆಚ್ಚಿನ ಅನಾನುಕೂಲವಾಗುತ್ತಿದೆ. ಆದ್ದ ರಿಂದ ಕ್ಷಯದ ಆಸ್ಪತ್ರೆಗಳನ್ನು ಇನ್ನೂ ನಾಲ್ಕಾರು ಕಡೆ ಗಳಲ್ಲಿ ಹೊಸದಾಗಿ ಸ್ಥಾಪಿಸಿದರೆ ತುಂಬ ಅನುಕೂಲ ವಾಗುತ್ತದೆ. ಕ್ಷಯರೋಗ ಹೆಚ್ಚುತ್ತಿರುವುದರಿಂದ ಅನೇಕರಿಗೆ ಆಸ್ಪತ್ರೆಗಳಲ್ಲಿ ಸ್ಥಳವಿಲ್ಲದೆ ರೋಗಿಗಳನ್ನು ಸೇರಿಸುವುದಕ್ಕಾಗುವುದಿಲ್ಲ ಎಂದು ಡಾಕ್ಟರು ಹೇಳು ತ್ತಿದ್ದಾರೆ. ಉದಾಹರಣೆಗೆ ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಕ್ಷಯದ ಆಸ್ಪತ್ರೆಯಲ್ಲಿ ಸೀಟು ಸಿಕ್ಕದೆ ಬಹಳ ಉಲ್ಬಣಾವಸ್ಥೆಯಲ್ಲಿದ್ದಂಥ ಕ್ಷಯರೋಗದ ರೋಗಿ ಯನ್ನು ಆಸ್ಪತ್ರೆಗೆ 7ನೇ ತಾರೀಖು ಸೇರಿಸಿದ್ದಾಯಿತು. 10ನೇ ತಾರೀಖು ಆ ರೋಗಿಯನ್ನು ಸ್ಮಶಾನಕ್ಕೆ ಕಳು ಹಿಸಿದೆವು. ಬಡವರಿಗೆ ಸರಿಯಾಗಿ ಔಷಧೋಪಚಾರ ಗಳು ದೊರೆಯುತ್ತಿಲ್ಲ. ಆದ್ದರಿಂದ ಬಡವರಿಗೆ ಆಸ್ಪತ್ರೆ ಗಳಲ್ಲಿ ಸರಿಯಾದ ಔಷಧೋಪಚಾರಗಳು ದೊರೆಯುವಂತೆ ಏರ್ಪಾಡುಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವೆಚ್ಚವು ಶೇ|| 30 ರಷ್ಟು ಹೆಚ್ಚಿದೆ ಎನ್ನುವ ವಿಷಯವೇನೋ ಬಹಳ ಸಂತೋಷಕರವಾದುದು. ಆದರೆ ಅವಶ್ಯಕವಾಗಿ ಬೇಕಾಗಿರುವ ಸ್ಥಳಗಳಲ್ಲಿ ಮಾತ್ರ ಸ್ಕೂಲುಗಳಿಲ್ಲ. ಇದನ್ನು ಮಾನ್ಯ ವಿದ್ಯಾಮಂತ್ರಿಗಳು ವಿಮರ್ಶೆ ಮಾಡಿ ನೋಡಬೇಕು. ಉದಾಹರಣೆಗೆ ಬಿನ್ನಿಮಿಲ್ಲಿನ ಕಾಲೋನಿಯವರು ಸುಮಾರು ಎಂಟು ವರ್ಷಗ ಳಿಂದಲೂ ಅಲ್ಲಿಗೊಂದು ಪ್ರೈಮರಿ ಸ್ಕೂಲು ಕೊಡ ಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಅಲ್ಲಿಗೆ ಇನ್ನೂ ಸ್ಕೂಲು ಕೊಟ್ಟಿಲ್ಲ. ಆದ್ದರಿಂದ ಅಲ್ಲಿಗೆ ಜಾಗ್ರತೆ ಒಂದು ಪ್ರೈಮರಿ ಸ್ಕೂಲನ್ನು ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರಿನ ಮಾಗಡಿರೋಡು ಎಂಬ ಬಡಾವಣೆ ಯಲ್ಲಿ ಸುಮಾರು 20 ಸಾವಿರಕ್ಕೆ ಮೇಲ್ಪಟ್ಟು ಜನ ಸಂಖ್ಯೆಯಿದೆ. ಐದಾರು ವರ್ಷಗಳಿಂದಲೂ ಅಲ್ಲಿಗೆ ಒಂದು ಹೈಸ್ಕೂಲು ಕೊಟ್ಟಿಲ್ಲ. ಆದ್ದರಿಂದ ಅಲ್ಲಿಗೆ ಒಂದು ಹೈಸ್ಕೂಲನ್ನು ಮಂಜೂರು ಮಾಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಪ್ರತಿಯೊಬ್ಬ ಮನುಷ್ಯನಿಗೂ ಮುಖ್ಯವಾಗಿ ಆರೋಗ್ಯ-ಆಹಾರ, ವಿದ್ಯೆ ಮೂರೂ ಅವಶ್ಯಕ. ಈ ಮೂರೂ ಇದ್ದರೆ ಸಂಪತ್ತು ತಾನೇ ತಾನಾಗಿ ಬರುತ್ತದೆ. ಆಗ ನಮ್ಮ ರಾಜ್ಯಭಾರವು ಸುಗಮವಾಗಿ ನಡೆಯುತ್ತದೆ.

ಇನ್ನು ಅರಣ್ಯ ಶಾಖೆ ಮತ್ತು ಆಬ್ಕಾರಿ ಶಾಖೆಗಳ ವಿಚಾರ. ಇವು ಇನ್ನೂ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡಿದರೆ ಸರ್ಕಾರಕ್ಕೆ ಹೆಚ್ಚಾಗಿ ಉತ್ಪತ್ತಿಯಾಗುತ್ತ ದೆಂದು ತಿಳಿಸಿದರೆ ಸಾಕು.

ಪಬ್ಲಿಕ್ ವರ್ಕ್ಸ್ ಇಲಾಖೆ ತನ್ನ ಕಾರ್ಯಗಳಲ್ಲಿ ಚುರುಕಾಗಿದ್ದರೂ ಖರ್ಚಿನ ವಿಚಾರದಲ್ಲಿ ಸ್ವಲ್ಪ ವಿತರಣೆ ಯಿಂದ ನಡೆದುಕೊಳ್ಳಬೇಕಾಗಿದೆ.

ನ್ಯಾಯ ಇಲಾಖೆಯಲ್ಲಿ ಕೆಲಸಕಾರ್ಯಗಳು ತುಂಬ ನಿಧಾನವಾಗಿದೆ; ಹಾಗೆಯೇ ರೆವಿನ್ಯೂ ಇಲಾಖೆಯ ಕೆಲಸ ಕಾರ್ಯಗಳೂ ಕೂಡ ಅಷ್ಟು ಚುರುಕಾಗಿ ನಡೆ ಯುತ್ತಿಲ್ಲ. ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಸಚಿ ವರು ದಿವಾನ್ ಪೂರ್ಣಯ್ಯನವರ ಹಾಗೆ ಸ್ವಲ್ಪ ಚುರು ಕಾಗಿ ಆಗಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಪೋಲೀಸ್ ಇಲಾಖೆಯಲ್ಲಿ ಲಂಚದ ಪುಕಾರು ಗಳು ಇದ್ದರೂ ಕೂಡ ಈಗೀಗ ಈ ಇಲಾಖೆಯಲ್ಲಿ ದಕ್ಷ ತೆಯು ಕಾಣುತ್ತಿದೆ. ಈ ಲಂಚವನ್ನು ಹೋಗಲಾಡಿಸ ಬೇಕಾಗಿದ್ದರೆ ಸರ್ಕಾರದವರೇ ಇದಕ್ಕೆ ಪೂರ್ತಿಯಾಗಿ ಹೊಣೆಯಲ್ಲ, ಸಾರ್ವಜನಿಕರ ಪ್ರತಿನಿಧಿಗಳಾದ ನಾವೂ ಕೂಡ ಹೊಣೆಗಾರರು. ಸರ್ಕಾರ ಲಂಚಕೋರರನ್ನು ಪತ್ತೆಹಚ್ಚುವ ಅವಕಾಶವನ್ನು ಸಾರ್ವಜನಿಕರಿಗೆ ಕೊಟ್ಟರೆ ಲಂಚಕೋರರನ್ನು ಯಾರು ಬೇಕಾದರೂ ಹಿಡಿದುಕೊಳ್ಳಬಹುದು. ಆದುದರಿಂದ ಈ ವಿಚಾರ ವನ್ನು ಬರೀ ಸರ್ಕಾರದವರ ಮೇಲೆ ಬಿಟ್ಟುಬಿಟ್ಟರೆ ತುಂಬ ಅಸಮಂಜಸವಾಗುತ್ತದೆ.

6-30 P.M.

ಆಹಾರದ ವಿಷಯದಲ್ಲಿ ಡಿಪೋಗಳನ್ನೇನೋ ತೆರೆ ದಿರುತ್ತಾರೆ ಆದರೆ ಆ ಡಿಪೋಗಳಿಗೆ ಆಹಾರಪದಾರ್ಥ ಗಳನ್ನು ಒದಗಿಸುವುದಿಲ್ಲ; ಮತ್ತು ಅವುಗಳ ಆಡಳಿತವೂ ಸರಿಯಾಗಿಲ್ಲ. ಆ ಡಿಪೋಗಳಲ್ಲಿ ಹೋಗಿ ಯಾರಾದರೂ ಸ್ವಲ್ಪ ದೊಡ್ಡ ಮನುಷ್ಯರ ಹೆಸರು ಹೇಳಿದರೇನಾದರೂ

ಐದು ಅಥವಾ ಹತ್ತು ರೂಪಾಯಿಗಳ ಅಕ್ಕಿ ಸಿಕ್ಕುತ್ತದೆ, ಬಡವರಿಗೇನೂ ಸಿಕ್ಕುವುದಿಲ್ಲ. ನಾನೇ ಈಗ ಕೆಲವು ದಿನಗಳ ಹಿಂದೆ 10 ರೂಪಾಯಿಗೋ 5 ರೂಪಾಯಿಗೋ ಅಕ್ಕಿ ತರಬೇಕೆಂದು ಹೋದಾಗ ಒಂದು ರೂಪಾಯಿನ ಅಕ್ಕಿ ಕೂಡ ನನಗೆ ಸಿಕ್ಕಲಿಲ್ಲ. ನನ್ನಂತಹವರಿಗೇ ಈ ರೀತಿಯಾದರೆ ಇನ್ನು ಬಡಜನಗಳ ಪಾಡೇನು ಎಂಬುದನ್ನು ಯೋಚಿಸಬೇಕು. ಮಾರಾಟ ಮಾಡುವ ವ್ಯಾಪಾರಸ್ತರಿಗೆ ಇದರಿಂದ ಅನುಕೂಲವಾಗುತ್ತದೆ. ಆದುದರಿಂದ ಆ ಡಿಪೋಗಳಲ್ಲಿ ಹೆಚ್ಚಿನ ದಾಸ್ತಾನನ್ನು ಇಟ್ಟು ಬಡವರಿಗೆ ಅನುಕೂಲವಾಗುವಂತೆ ಹಂಚಿದರೆ ಈಗಿನ ಆಹಾರದ ಪರಿಸ್ಥಿತಿ ಸ್ವಲ್ಪಮಟ್ಟಿಗಾದರೂ ಸುಧಾರಿಸುತ್ತದೆ. ಹಾಗೆ ಮಾಡಬೇಕೆಂದು ಸರಕಾರದಲ್ಲಿ ನನ್ನ ಸೂಚನೆ.

ಇನ್ನು ಸಂಬಳಸಾರಿಗೆಗಳ ವಿಚಾರ. ಇದು ಅಖಿಲ ಭಾರತದ ಪ್ರಶ್ನೆಯಾಗಿದೆ. ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಯಾರಿಗೂ ಸಂಬಳಗಳಿರಬಾರದೆಂದು ಕೇಂದ್ರ ಸರ್ಕಾರದವರು ನಮ್ಮ ಸರ್ಕಾರದವರಿಗೂ ಸೂಚಿಸಿರಬಹುದೆಂದು ತೋರುತ್ತದೆ. ಅದೇ ರೀತಿಯ ನೀತಿಯನ್ನು ಈ ಸರ್ಕಾರದವರು ಅನುಸರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಸರಕಾರದ ಆಡಳಿತದಲ್ಲಿ ಲೋಪದೋಷಗಳಿವೆ. ಅವುಗಳನ್ನು ತಿಳಿದುಕೊಂಡು ದಕ್ಷತೆಯಿಂದ ರಾಜ್ಯಾಡಳಿತವನ್ನು ನಡೆಸುವುದಾದರೆ ಎಲ್ಲರಿಗೂ ಸುಖವಾಗುತ್ತದೆ; ಮತ್ತು ಪಾಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ನಡೆಸಲು ಅನುಕೂಲವಾಗುತ್ತದೆ. ಹೀಗೆ "ನಾಡಸೇವೆಗಣಿಯಾಗಿ ನಿಂತಿಹುದು ಎರಡುಕೋಟಿ ಜನತೆ" ಎನ್ನುವ ರೀತಿಯಲ್ಲಿ ಎಲ್ಲರೂ ಈ ಕೆಲಸಗಳನ್ನು ಮಾಡುವುದರಲ್ಲಿ ಸಹಕರಿಸುತ್ತಾರೆ; ಮತ್ತು ಪಾಂಚವಾರ್ಷಿಕ ಯೋಜನೆಯಲ್ಲಿ ಈಗಾಗಲೇ ಎಷ್ಟೋ ಕಾರ್ಯಗಳು ಸುಗಮವಾಗಿ ನಡೆಯುತ್ತಿವೆ. ಆದುದರಿಂದ ನಾವೆಲ್ಲರೂ ಸಹಕರಿಸಿ ದಕ್ಷತೆಯಿಂದ ಕೆಲಸಮಾಡಿದರೆ ಲೋಪದೋಷಗಳನ್ನು ಕೊಂಚಮಟ್ಟಿಗಾದರೂ ತೃಪ್ತಿಕರವಾಗಿ ಪರಿಹರಿಸಬಹುದೆಂದು ಸೂಚನೆ. ಆರ್ಥಿಕ ಸಚಿವರು ಮಂಡಿಸಿರುವ ಆಯವ್ಯಯಪಟ್ಟಿಯನ್ನು ಸ್ವಾಗತಿಸುತ್ತೇನೆ.

ಅಧ್ಯಕ್ಷರು ವಿಶ್ವಾಸವಿಟ್ಟು ಇಷ್ಟು ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನರ್ಪಿಸುತ್ತೇನೆ.

*ಶ್ರೀ ಎಂ. ಲಿಂಗೇಗೌಡ (ಕನಕಪುರ).—ಸ್ವಾಮಿ, ಮಾನ್ಯ ಅರ್ಥ ಸಚಿವರು ನಮ್ಮ ಮುಂದೆ ಇಟ್ಟಿರುವ ಖೋತ ಆಯವ್ಯಯದ ಪಟ್ಟಿಯನ್ನು ಅನೇಕರು ನನ್ನ ಸ್ನೇಹಿತರು ಒಪ್ಪಿದ್ದಾರೆ ಮತ್ತು ಅನೇಕರು ಇದನ್ನು ಒಪ್ಪಿಲ್ಲ. ಆದರೂ ನಮ್ಮ ಸ್ನೇಹಿತರೊಬ್ಬರು ಹೇಳಿದ ಹಾಗೆ, Tactful Budget ಕೊಟ್ಟಿದ್ದಾರೆ. ಈಗ ದೇಶದಲ್ಲಿ ಏನಾಗಿದೆ ಎಂದರೆ ಸರಕಾರದವರು ಒಂದು ರೀತಿಯ ಅಳತೆಯಿಟ್ಟಿದ್ದಾರೆ, ತೆಗೆದುಕೊಳ್ಳುವವರು ಒಂದು ರೀತಿಯಲ್ಲಿ ಅಳತೆಮಾಡಿ ತೆಗೆದುಕೊಳ್ಳುತ್ತಾರೆ. ಎಂದರೆ ಐದು ಸೇರಿನ ಅಳತೆ ಇದ್ದರೆ ಐದೂವರೆ ಸೇರಿನ ಇಬ್ಬಳಿಗೆಯಲ್ಲಿ ಅಳೆದಿದ್ದಾರೆ ಎಂದಹಾಗಾಗಿದೆ. ಒಂದು ಆರ್ಡರುಮಾಡಿ ಮಾನ್ಯ ಅರ್ಥ ಸಚಿವರು ಕಂಟ್ರೋಲನ್ನು ತೆಗೆದಿದ್ದಾರೆ. ಹೀಗೆ ಮಾಡಿರುವುದರಿಂದ ರೈತರಿಗೆ ನಷ್ಟವೇನೂ ಆಗುವುದಿಲ್ಲವೆಂದು ಹೇಳಿದ್ದಾರೆ. ಒಂದು ಪಲ್ಲ ಲೆಕ್ಕಕ್ಕೆ 115ರಷ್ಟು ಎಂದರೆ 100 ಸೇರಿನ ಅಳತೆ ಇರುವ ಪದಾರ್ಥಕ್ಕೆ 115 ಸೇರಿನಂತೆ ಅಳೆದುಕೊಂಡಿದ್ದಾರೆ. ಈ ಕಾರಣ ತಾವು ಜನಗಳಮೇಲೆ ಹೊರೆಯನ್ನೇನೂ ಹೊರಿಸಿಲ್ಲ ಎಂದರೂ ಶೇಕಡಾ 15ರಷ್ಟು ಜನಗಳಮೇಲೆ ತೆರಿಗೆ ಹೇರಿದಂತೆ ಅರ್ಥವಾಗುತ್ತಿದೆ. ನೀವು ತರಬೇಕೆಂದಿರುವ ಬಿಲ್ಲುಗಳನ್ನು ಈ ಸಭೆಯವರು ಒಪ್ಪುವುದಾದರೆ ಎಲ್ಲ ಜನಗಳಮೇಲೆ ತೆರಿಗೆ ದರವು ಬೀಳುತ್ತದೆ. ಆದಕಾರಣ ಈ ಆಯವ್ಯಯದ ಪಟ್ಟಿ ತೆರಿಗೆಯಿಲ್ಲದ ಆಯವ್ಯಯವೆಂದು ಹೇಳುವುದಕ್ಕಾಗುವುದಿಲ್ಲ.

ಸರಕಾರದವರು ಸಮತಾವಾದದ ಸಮಾಜವನ್ನು ದೇಶದಲ್ಲಿ ತರಬೇಕೆಂದು ಮಾನ್ಯ ಮಂತ್ರಿಗಳು ಹೇಳುತ್ತಾ ಬಂದಿದ್ದಾರೆ. ಅವರು Ratio ಹೇಳುವಾಗ ಹೊಸ ಸ್ಕೇಲಿನ ಸಂಬಳಗಳು ಸರಕಾರಿ ನೌಕರರಿಗೆ 1: 30 ಎಂದು ಹೇಳಿದ್ದಾರೆ. ಅಲ್ಲಿಗೆ 50 ರೂಪಾಯಿಗಳಿಗೆ ಕಡಿಮೆ ಇಲ್ಲದ 1,500 ರೂಪಾಯಿಗಳಿಗೆ ಹೆಚ್ಚಿಗೆಯಿಲ್ಲದ ಸಂಬಳ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ದೇಶದಾದ್ಯಂತ ಸಂಬಳದ ಪ್ರಮಾಣ 1: 10 ಎಂದರೆ 100 ರೂಪಾಯಿಗೆ ಕಡಿಮೆಯಿಲ್ಲದಂತೆ ಕನಿಷ್ಠ ಸಂಬಳ ಮತ್ತು 1,000 ರೂಪಾಯಿಗೆ ಮೀರದಂತೆ ಪರಮಾವಧಿ ಸಂಬಳವಿರುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚನೆಮಾಡುತ್ತೇನೆ.

ಎರಡನೆಯದಾಗಿ ನಮಗೆ ಈಗ 18 ಪರ್ಸೆಂಟು ಪರ್‌ಕ್ಯಾಪಿಟಾ ಇನ್‌ಕಂ ಎಂದು ತಿಳಿದಿದೆ. ಸಮತಾವಾದ ಸಮಾಜದ ರೀತ್ಯಾ 18 ಪರ್ಸೆಂಟ್ ಆದಾಯ ಹೆಚ್ಚಿರುವುದರಿಂದ ಮೊದಲನೆಯ ಐದು ವರ್ಷದ ಪ್ಲಾನಿನಲ್ಲಿ ಜನಗಳ ವರಮಾನ ಹೆಚ್ಚಿದೆ ಎಂದು ಹೇಳುತ್ತಿದ್ದಾರೆ. ಆದರೆ ಅವರು ಯಾವ ಲೆಕ್ಕಾಚಾರದ ಮೇಲೆ ಹೇಳಿದ್ದಾರೆ, ಈಗ ಕೈಕಾರಿಕೆಗಳು ಯಾವ ರೀತಿಯಾಗಿ ನಡೆಯುತ್ತಿವೆ ಮತ್ತು ಯಾವ ಅಂಕಿಅಂಶದ ಆಧಾರದಮೇಲೆ ಹೆಚ್ಚಾಗಿದೆ ಎಂದು ಹೇಳುತ್ತಿದ್ದಾರೆ ಎಂಬುದು ಸರಿಯಾಗಿ ಅರ್ಥವಾಗುತ್ತಿಲ್ಲ. ದೇಶದಲ್ಲಿ ಜನಗಳ ಸ್ಥಿತಿಗಳು ಒಂದೇ ರೀತಿಯಾಗಿವೆ. ಈಗ ಕಾಂಗ್ರೆಸ್ಸು ಸರ್ಕಾರ ಬಂದು ಹತ್ತು ವರ್ಷಗಳಾಯಿತು. ಈ ಸರಕಾರ ಬಂದಾಗಿನಿಂದ ಹೇಗಾಗಿದೆ ಎಂದರೆ ಹಣವಂತರು ಹೆಚ್ಚಿನ ಹಣವಂತರಾಗುತ್ತಿದ್ದಾರೆ, ಬಡವರು ಇನ್ನೂ ಹೆಚ್ಚು ಬಡವಾರಾಗುತ್ತಿದ್ದಾರೆ ಮತ್ತು ಮಧ್ಯಮ ವರ್ಗದವರ ಕಷ್ಟ ಎಷ್ಟೆಷ್ಟಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಹೀಗೆ 18 ಪರ್ಸೆಂಟು ಪರ್‌ಕ್ಯಾಪಿಟಾ ಆದಾಯ ಹೆಚ್ಚಾಗಿದೆ ಎಂದು ಹೇಳತಕ್ಕದ್ದು ಒಪ್ಪತಕ್ಕ ಮಾತಲ್ಲ.

ಸರಕಾರಕ್ಕೆ ಬರಬೇಕಾದ ಆದಾಯ ಸರಿಯಾಗಿ ಬರುತ್ತಿಲ್ಲ. ಇದನ್ನು, ನಮ್ಮ ಸ್ನೇಹಿತರು, ಸರಕಾರ ನಡೆಸತಕ್ಕವರು ಈ Leakage in Revenue ಎಲ್ಲಿದೆ ಎಂಬುದನ್ನು ಆಲೋಚನೆ ಮಾಡಬೇಕಾದುದು ಅಗತ್ಯ. ಆದರೆ ನಮ್ಮ ಸಚಿವರಿಗೆ ಗಮನಕೊಡಲು ಮತ್ತು ಆಲೋಚನೆಮಾಡಲು ಕಾಲಾವಕಾಶವಿಲ್ಲವೆಂದು ತೋರುತ್ತದೆ. ಏತಕ್ಕೆಂದರೆ ಅವರಿಗೆ ಹೆಚ್ಚಾಗಿ ಅವರ ಸ್ನೇಹಿತರುಗಳನ್ನು interview ಮಾಡುವುದೇ ಆಗಿದೆ. ಈ ರೀತಿಯ ಕೆಲಸಗಳನ್ನು ಮಾಡುವುದಕ್ಕೆ ಹೆಚ್ಚಿಗೆ ಅವಕಾಶ ಸಿಕ್ಕುತ್ತದೆಯೇ ? ಇಲ್ಲ. ಈ ರೀತಿಯಾದ ಬೆನಿಫಿಟ್ ಆಗುವ ಕೆಲಸಗಳನ್ನು ಮಾಡುವುದಕ್ಕೆ ಅವಕಾಶವಿಲ್ಲ. ಒಂದೇ ಒಂದು ಉದಾಹರಣೆ ನಾನು ಇಲ್ಲಿ ಕೊಡುತ್ತೇನೆ. ಈ ಬೆಂಗಳೂರು ಸಿಟಿ ಹತ್ತು ಚದರ ಮೈಲಿಯಿದೆ. ಇದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಈ ಸಿಟಿಯ ಸುತ್ತುಮುತ್ತಲೂ ಕನ್‌ವರ್‌ಷನ್ ಫೈನ್ ಕೊಡದೆ unauthorised construction of houses ಎಷ್ಟೋ ಆಗಿದೆ. ಇವನ್ನೆಲ್ಲ ಇನ್ಸ್‌ಪೆಕ್ಟುಮಾಡಲು ರೆವೆನ್ಯೂ ಇನ್ಸ್‌ಪೆಕ್ಟರು, ಒಬ್ಬ ಸರ್ವೇಯರು ಮತ್ತು ಅವರ ಕೈಕೆಳಗೆ ಒಂದಿಬ್ಬರು ಹೀಗೆ ಮೂರುನಾಲ್ಕು ಜನ ಸಿಬ್ಬಂದಿಯನ್ನು ನೇಮಕ ಮಾಡಿದ್ದಾರೆ. ಈಗ ಮೂರು ವರ್ಷಗಳಿಂದಲೂ

(ಶ್ರೀ ಎಂ. ಲಿಂಗೇಗೌಡ.)

ಸುಮಾರು ಎರಡು ಸಾವಿರ ಕೇಸುಗಳು ಬಂದಿದ್ದವು ಮತ್ತು ಸುಮಾರು ಎಂಟು ಲಕ್ಷ ರೂಪಾಯಿಗಳಷ್ಟು ಡಿಮ್ಯಾಂಡು ಬಂದಿತ್ತೆಂದು ಕೇಳಿದೆ. ಆದರೆ ಅಧಿಕಾರಿಗಳು ವಸೂಲುಮಾಡುವುದಕ್ಕೆ ಹೋದಾಗ ಅವರಿಗೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಇಲ್ಲಿ ವಾಸ ಮಾಡುವವರು ಮಂತ್ರಿಗಳಿಗೆ ಅವರ ಸ್ನೇಹಿತರುಗಳಿಂದಲೋ ಮತ್ಯಾವ ವಿಧದಿಂದಲೋ ಶಿಫಾರಸುಗಳನ್ನು ಮಾಡಿಸಿ ಸ್ಟೇ ಆರ್ಡರನ್ನು ತರುತ್ತಾರೆ. ಹೀಗಾಗಿ ಸುಮಾರು ಸಾವಿರಾರು ಕೇಸುಗಳು ಹಾಗೆಯೇ ಉಳಿದು ಹೋಗುತ್ತವೆ. ಈ ರೀತಿ ತಪ್ಪುಗಳಿರುವುದರಿಂದ ಸರಕಾರಕ್ಕೆ ಬರಬೇಕಾದ ಆದಾಯ ಸರಿಯಾಗಿ ಬರುತ್ತಿಲ್ಲ. ಇದರಿಂದಾಗಿ ಈ Leakage of Revenueನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ತಕ್ಕ ಬಂದೋಬಸ್ತುಮಾಡಿ ಡಿಮ್ಯಾಂಡನ್ನು ವಸೂಲುಮಾಡಲು ತಕ್ಕ ಸಿಬ್ಬಂದಿಯನ್ನು ಏರ್ಪಡಿಸಿದರೆ ಈ greater Bangalore Areaದಲ್ಲಿ ಸುಮಾರು 50 ಲಕ್ಷ ರೂಪಾಯಿಗಳಷ್ಟು ಆದಾಯ ಬರುತ್ತದೆ. ಈಗ ಸರಕಾರಕ್ಕೆ ಈ ಉತ್ಪತ್ತಿ ತಪ್ಪಿಹೋಗಿದೆ. ಇನ್ನಾದರೂ ಸರಕಾರ ಇದನ್ನು ತಡೆಗಟ್ಟಲು ತಕ್ಕ ಕ್ರಮಗಳನ್ನು ಮಾಡುವ ಆಲೋಚನೆ ಮಾಡಬೇಕು.

ಈಗ ಬೆಂಗಳೂರು ಸಿಟಿಯ ಸುತ್ತಮುತ್ತಲೂ ಇಟ್ಟಿಗೆ ಗೂಡುಗಳನ್ನು ಕಟ್ಟುತ್ತಿದ್ದಾರೆ. ಹೀಗೆ ಸರಕಾರದ ಜಮೀನಿನಲ್ಲಿ ಇಟ್ಟಿಗೆ ಗೂಡನ್ನು ಕಟ್ಟಬೇಕಾದರೆ ರಾಯಲ್ಟಿಯನ್ನು ಕಟ್ಟಿ ಸರಕಾರದ ಪರ್ಮಿಷನ್ ಪಡೆದು ಅನಂತರ ಈ ಗೂಡುಗಳನ್ನು ಕಟ್ಟಬೇಕಾಗಿತ್ತು. ಆದರೆ ಈಗ ಪರಿಸ್ಥಿತಿ ಏನಾಗಿದೆ ಎಂದರೆ ಬೆಂಗಳೂರಿನ ಸುತ್ತಮುತ್ತಲೂ ಸ್ವಂತ ಜಮೀನನ್ನು ಮಾಡಿ ಎಷ್ಟೋ ಸಾವಿರ ಇಟ್ಟಿಗೆ ಗೂಡುಗಳನ್ನು ಕಟ್ಟಿದ್ದಾರೆ. ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನೇ ಇಲ್ಲ. ಹೀಗಾಗಿರುವುದರಿಂದ ಸರಕಾರ ಇದನ್ನು ತಪ್ಪಿಸುವುದಕ್ಕೆ ಸರಿಯಾದ ಕ್ರಮಗಳನ್ನು ಯೋಚನೆ ಮಾಡಬೇಕಾದುದು ಅಗತ್ಯ. ಅಲ್ಲದೆ ಈಗ ಎಷ್ಟೋ ಜೋಡಿ ಗ್ರಾಮಗಳಿವೆ. ಇವುಗಳಿಂದ ಸರಕಾರಕ್ಕೆ ಬರತಕ್ಕ ಉತ್ಪತ್ತಿ ಏನೇನೂ ಇಲ್ಲ. ಇದನ್ನೇಕೆ ತಪ್ಪಿಸಬಾರದು ಎಂದು ನಾನು ಕೇಳಬೇಕಾಗಿದೆ. ಹೀಗೆ ಅನೇಕ ಸಂದರ್ಭಗಳಲ್ಲಿ ಸರಕಾರದಲ್ಲಿ Leakages of Revenue ಉಂಟಾಗಿದೆ. ಇದನ್ನು ತಪ್ಪಿಸಬೇಕು, ಇದು ಬಹು ಮುಖ್ಯವಾದ ಕೆಲಸ. ಸರಕಾರದ ಮಂತ್ರಿಗಳು ಆಲೋಚನೆಮಾಡಿ ಕ್ರಮತೆಗೆದುಕೊಳ್ಳಬೇಕು.

ಹಾಗೆಯೇ ನಾನು ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಬಹಳ ವಿಷಾದವಾಗುತ್ತಿದೆ. ಈ ಮಂತ್ರಿಗಳಲ್ಲಿ ಒಬ್ಬ ಮಂತ್ರಿಗಳು ಇನ್ನೊಬ್ಬರು ಮಂತ್ರಿಗಳ ಅಧಿಕಾರದಲ್ಲಿ ಕೈ ಹಾಕುತ್ತಿದ್ದಾರೆ. ಇದೊಂದು ಜೇಬುಗಳ್ಳರ ಕಳ್ಳತನ ಎಂದರೆ ತಪ್ಪಾಗಲಾರದು. ಅವರವರಧಿಕಾರ ಅವರವರ ಕೈಯಲ್ಲಿರಬೇಕು. ವಿದ್ಯಾಭ್ಯಾಸ ಮಂತ್ರಿಗಳು ಪೋಲೀಸ್ ಇಲಾಖೆಯ ಮಂತ್ರಿಗಳ ಅಧಿಕಾರದಲ್ಲಿ ಕೈಹಾಕಬಾರದು. ಪೋಲೀಸ್ ಇಲಾಖಾ ಮಂತ್ರಿಗಳು ಅರಣ್ಯಶಾಖಾ ಮಂತ್ರಿಗಳ ಅಧಿಕಾರದಲ್ಲಿ ಕೈಹಾಕಬಾರದು. ಇಂತಹ ಸನ್ನಿವೇಶಗಳು ನಮ್ಮ ಸರ್ಕಾರದಲ್ಲಿ ಅನೇಕ ಕಡೆ ನಡೆಯುತ್ತವೆ. ಈ ಪದ್ಧತಿಯನ್ನು ಬಿಟ್ಟುಬಿಡಬೇಕು, ಸರ್ಕಾರದ ಆಡಳಿತ ಸಡಿಲವಾಗುವುದಕ್ಕೆ ಇದೂ ಒಂದು ಕಾರಣ. ಇನ್ನೊಂದು ಕಾರಣ ಕೆಲವರಿಗೆ ಬೆಳಿಗ್ಗೆ ಎದ್ದು ಏನೇನೂ ಕೆಲಸವಿರುವುದಿಲ್ಲ. ಅವರು ಅಧಿಕಾರಿಗಳ ಹತ್ತಿರ ಹೋಗಿ ತಮ್ಮ ಹೊಟ್ಟೆಯುರಿಯನ್ನು ತೀರಿಸಿಕೊಳ್ಳುವುದಕ್ಕೆ ಯಾರಮೇಲಾದರೂ ದೂರುಗಳನ್ನು ಹೇಳಿದರೆ ಅವರು ಹೇಳಿದಂತೆ ನಮ್ಮ ಅಧಿಕಾರಿಗಳು ನಡೆಯುತ್ತಾರೆ. ಹಾಗೆ ಒಂದು ವೇಳೆ ನಡೆಯದಿದ್ದರೆ, ಅಂಥವರಿಗೆ ಉತ್ತಮವಾದ ಜಾಗವಿಲ್ಲ. ದಕ್ಷತೆ ಇರುವ ಅಧಿಕಾರಿಗಳಿಗೆ ಪ್ರಾಮಾಣಿಕತೆಯಿಂದ ಕೆಲಸ ಮಾಡುವ ಅಧಿಕಾರಿಗಳಿಗೆ ಖಂಡಿತವಾಗಿ ಜಾಗವಿರುವುದಿಲ್ಲ. ಆದಕಾರಣ ಆಡಳಿತ ಬಹಳ ಸಡಿಲವಾಗುತ್ತದೆ. ಆ ವಿಷಯ ಸುಳ್ಳೋ ನಿಜವೋ ಎಂದು ವಿಚಾರಣೆ ಮಾಡಿ. ಅದು ನಿಜವಾಗಿದ್ದ ಪಕ್ಷದಲ್ಲಿ ಅವನನ್ನು ಯಾವುದೋ ಒಂದು ಮೂಲೆಗೆ ವರ್ಗಮಾಡಿಬಿಡಿ. ಅದಕ್ಕೆ ಒಂದು ಇನ್‌ಸ್ಟೆನ್ಸ್ ಅನ್ನು ಹೇಳುತ್ತೇನೆ ಒಬ್ಬ ಮಂತ್ರಿಗೆ ಕಾಂಗ್ರೆಸ್ ಸ್ನೇಹಿತರು ಕಾಗದ ಬರೆದರು. ಮಂತ್ರಿಗಳು ಪ್ರದೇಶ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರಿಗೆ ಕಳುಹಿಸಿ ಅದು ಏನು ಸಮಾಚಾರ ನೋಡಿ ಎಂದು ಕೇಳಿದರು. ಇಬ್ಬರು ಅಧಿಕಾರಿಗಳನ್ನು ಬೇರೆ ಸ್ಥಳಕ್ಕೆ ವರ್ಗಮಾಡಿ ಎಂದು ಹೇಳಿದರು. ಈ ಅಧಿಕಾರಿಗಳ ಪೈಕಿ ಒಬ್ಬರು ಬಹಳ ನಿಸ್ಪೃಹರು. ಈ ವಿಷಯ ಕಾನ್‌ಕಾನ್‌ಹಳ್ಳಿಯಲ್ಲಿ ನಡೆದಿದೆ. ನಾನಾಮುಖವಾಗಿ ಅಂಕಿ ಅಂಶಗಳನ್ನು ತರಿಸಿ, ಆಲೋಚನೆಮಾಡಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡಿ; ಕೇಳದೆ, ನೋಡದೆ ಅಂತಹ ಕೆಲಸಗಳನ್ನು ದಯವಿಟ್ಟು ಮಾಡಬಾರದು, ಆಡಳಿತ ಸಡಿಲವಾಗುತ್ತದೆ. ದೇಶದಲ್ಲಿ ಆಹಾರ ಪರಿಸ್ಥಿತಿ ಬಹಳ ಉಲ್ಬಣವಾಗಿದೆ ಎಂದು ಕಾಂಗ್ರೆಸ್ ಸ್ನೇಹಿತರು ಹೇಳುತ್ತಿದ್ದಾರೆ. ನಾವೂ ಹೇಳುತ್ತಿದ್ದೇವೆ. ಆದರೆ ನಮ್ಮ ಸರ್ಕಾರದ ಅಂಕಿ ಅಂಶಗಳು 1956-57ನೆಯ ಇಸವಿಯಲ್ಲಿ 41·8 ಮಿಲಿಯನ್ ಟನ್‌ಗಳಷ್ಟು ಆಹಾರವನ್ನು ಬೆಳೆಯುತ್ತಿದ್ದರೆಂದೂ, 1957-58ನೆ ಇಸ್ವಿಯಲ್ಲಿ 54·52 ಮಿಲಿಯನ್ ಟನ್‌ಗಳಷ್ಟು ಬೆಳೆಯುತ್ತಾರೆಂದು ತಿಳಿಸುತ್ತವೆ. ಇಷ್ಟು ಹೆಚ್ಚು ಆಹಾರ ಬೆಳೆಯುವಾಗ ಆಹಾರ ಪರಿಸ್ಥಿತಿ ಏತಕ್ಕೆ ಉಲ್ಬಣಾವಸ್ಥೆಯಲ್ಲಿರಬೇಕು? ಎಲ್ಲೋ ನಮ್ಮ ಸರ್ಕಾರದ ಅಂಕಿ ಅಂಶಗಳು ತಪ್ಪು ಇರಬೇಕು. ಏತಕ್ಕೋಸ್ಕರ ಇಂತಹ ತಪ್ಪು ಅಂಕಿ ಅಂಶಗಳನ್ನು ನಮ್ಮ ಸರ್ಕಾರದವರು ಹೊರಗೆಡಹಬೇಕು? ವ್ಯವಸಾಯ ನಿಜವಾಗಿ ಹೆಚ್ಚಬೇಕು. ಉತ್ಪತ್ತಿ ಜಾಸ್ತಿಯಾಗಬೇಕು. ರಾಗಿ ಬೆಳೆಯುವ ಕಡೆ ಒಂದು ಎಕರೆಗೆ ಅರ್ಧ ಪಲ್ಲ ರಾಗಿಯನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಏನಾದರೂ ಮಾಡಿದ್ದಾರೆಯೇ ಎಂದರೆ ನಮ್ಮ ಸರ್ಕಾರದವರು ಏನೂ ಮಾಡಲಲ್ಲ. ಭತ್ತ ಸರ್ವಸಾಧಾರಣವಾಗಿ 10-18 ಪಲ್ಲ ಬೆಳೆಯುವ ಕಡೆ ಇನ್ನೂ ಎರಡು ಪಲ್ಲ ಹೆಚ್ಚಿಗೆ ಬೆಳೆಯುವುದಕ್ಕೆ ನಮ್ಮ ಸರ್ಕಾರದವರು ಪ್ರಯತ್ನ ಮಾಡಿದ್ದರೆ ದೇಶದಲ್ಲಿ ಆಹಾರಕ್ಕೆ ಅಭಾವ ಹೇಗೆ ಬರುತ್ತದೆ? ವ್ಯವಸಾಯದ ಇಲಾಖೆಯ ಇನ್‌ಸ್ಪೆಕ್ಟರು ಕೆಲವರಿಗೆ ಜಪಾನ್ ವ್ಯವಸಾಯದ ಕ್ರಮದಲ್ಲಿ ಶಿಕ್ಷಣ ಕೊಟ್ಟು ಒಂದು ಎಕರೆಗೆ 40 ಪಲ್ಲ ಭತ್ತ ಬೆಳೆದಿದ್ದಾರೆ ಎಂದು ಲೆಖ್ಖ ಕೊಡುವುದು. ಅದಕ್ಕಾಗಿ ಕೇಂದ್ರ ಸರ್ಕಾರದವರು, ಪ್ರಾಂತ ಸರ್ಕಾರದವರು ಪ್ರೈಜ್ ಕೊಡುವುದು,—ಇಂತಹ ನಾಟಕಗಳನ್ನು ನಿಲ್ಲಿಸಿ. ಇಂತಹ ನಾಟಕದಿಂದ ಏನೂ ಆಗುವುದಿಲ್ಲ. ದಯವಿಟ್ಟು ಸರಿಯಾದ ಅಂಕಿ ಅಂಶಗಳನ್ನು ಕೊಡಿ. ನಾವೂ ವ್ಯವಸಾಯ ಮಾಡುವವರು. ಎಷ್ಟು ಕಷ್ಟಪಟ್ಟರೂ 25-26 ಪಲ್ಲಕ್ಕಿಂತ ಜಾಸ್ತಿ ಭತ್ತ ಒಂದು ಎಕರೆಗೆ ಆಗುವುದಿಲ್ಲ. ಅಂಥಾದ್ದರಲ್ಲಿ 45-48 ಪಲ್ಲ ಭತ್ತ ಒಂದು ಎಕರೆಗೆ ಎಲ್ಲಿ ಬರಬೇಕು? ಆದ್ದರಿಂದ ಇಂತಹ ಲೆಖ್ಖಗಳನ್ನು ಸಭೆಯ ಮುಂದೆ ಇಡಬೇಡಿ, ತೋರಿಸಬೇಡಿ. ಇದು ನಮ್ಮ ಸರ್ಕಾರ, ನಮ್ಮವರೇ ರಾಜಭಾರ ಮಾಡುವವರು. ಆದರೆ ಸರಿಯಾದ ಲೆಖ್ಖಾ,

ಚಾರಬೇಕು. ಹೆಚ್ಚಿಗೆ ಆಹಾರ ಬೆಳೆಯುವುದಕ್ಕೆ ಕೃತಕ ಗೊಬ್ಬರ ಕೊಡಿ. ಕಂಪೋಸ್ಟ್ ಗೊಬ್ಬರದ ವಿಷಯ ಬಡ್ಜೆಟ್ಟಿನಲ್ಲಿ ಏನೂ ಪ್ರಸ್ತಾಪಿಸಿಲ್ಲ. ಅದಕ್ಕೆ ಹೆಚ್ಚಿಗೆ ಗಮನ ಕೊಡಬೇಕು. ನಮ್ಮ ಸರ್ಕಾರದವರು ಉಷ್ಟು, ಗೋಧಿ ಬೆಳೆಗಳನ್ನು ಸಬ್ಸಿಡೈಸ್ ಮಾಡುವಂತೆ ಇದನ್ನು ಸಬ್ಸಿಡೈಸ್‌ಮಾಡಿ. ಇಲ್ಲದಿದ್ದರೆ ರೈತರಿಗೆ ಬಹಳ ಕಷ್ಟ. ಈ ದಿವಸ ಒಂದು ಪ್ರಶ್ನೆ ಕೇಳಬೇಕಾಗಿದೆ. ನಮ್ಮ ಕಂಟ್ರೋಲ್ ರೇಟ್ ಪ್ರಕಾರ ಒಂದು ಗುಳಕ್ಕೆ ಒಂಭತ್ತು ಆಣೆ ಇರುವಾಗ ಹೊರಗಡೆ ಒಂದೂಕಾಲು ರೂಪಾಯಿನಂತೆ ಮಾರಾಟವಾಗಿದೆ. ರೈತರಿಗೆ ಕೊಳ್ಳತಕ್ಕ ಸಾಮಾನುಗಳ ಬೆಲೆ ಜಾಸ್ತಿಯಾಗಿ, ಬೆಳೆಯತಕ್ಕ ರಾಗಿಯ ಬೆಲೆ ಕಡಮೆಯಾಗಿದೆ. ಅದಕ್ಕೂ ಜಾಸ್ತಿಯಾಗಬೇಕು. ನಮ್ಮ ಸ್ನೇಹಿತರು ಸಿಟಿಯಲ್ಲಿ ವಾಸ ಮಾಡುವವರು. ಅವರಿಗೆ ಆಹಾರದ ಬೆಲೆ ಕಡಮೆಯಾಗಬೇಕು. ಆದರೆ ಬೆಳೆಯತಕ್ಕ ರೈತರಿಗೆ ಅದರ ಬೆಲೆ ಜಾಸ್ತಿಯಾಗಬೇಕು.

ಶ್ರೀ ಎಚ್. ಎಸ್. ರುದ್ರಪ್ಪ.—ಆಹಾರವನ್ನು ಸಬ್ಸಿಡೈಜ್‌ಮಾಡಬೇಕು ಎಂದು ಹೇಳುತ್ತೀರಾ ?

ಶ್ರೀ ಎಂ. ಲಿಂಗೇಗೌಡ.—ಹೌದು. ಈಗ ಆರೋಗ್ಯದ ವಿಷಯವಾಗಿ ಹೇಳುತ್ತೇನೆ. ಈಗ ಕಾರ್ಕಾರ್ ಹಳ್ಳಿಯಲ್ಲಿ ಆರು ಹೆಲ್ತ್ ಯೂನಿಟ್ಟುಗಳನ್ನು ಮಾಡಿದ್ದಾರೆ. ಸಾಲದು ಇನ್ನೂ ಎರಡು ಹೆಲ್ತ್ ಯೂನಿಟ್ಟುಗಳನ್ನು ಜಾಗ್ರತೆ ತೆರೆಯಬೇಕು. ಎಷ್ಟೋ ಸಣ್ಣ ಸಣ್ಣ ಗ್ರಾಮಗಳನ್ನು ಬಿಟ್ಟುಬಿಟ್ಟಿದ್ದಾರೆ. ಸರಿಯಾದ ರಸ್ತೆಗಳಿಲ್ಲ. ದೀಪದ ಸೌಕರ್ಯವಂತೂ ಏನೂ ಇಲ್ಲ. ಜನರು ತಿರುಗಾಡುವುದಕ್ಕೆ ಬಹಳ ಕಷ್ಟ, ಈ ವಿಷಯ ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ. ಪ್ರೈಮರಿ ಹೆಲ್ತ್ ಯೂನಿಟ್ಟುಗಳು ಅವಶ್ಯಕವಾಗಿರಬೇಕು. ಇನ್ನು ಒಂದು ವಿಷಯವನ್ನು ಮಾನ್ಯ ಸದಸ್ಯಣಿಯರಲ್ಲೊಬ್ಬರು ಹೇಳಿದರು. ಅವರು ಹೇಳಿದಂತೆ ಆಸ್ಪತ್ರೆಗೆ ಆರೋಗ್ಯ ಸಚಿವರು ಆಗಾಗ್ಗೆ ಸರ್‌ಪ್ರೈಜ್ ವಿಜಿಟ್‌ಕೊಡಬೇಕು. ನಾನು ಡಾಕ್ಟರುಗಳಮೇಲೆ ಆಕ್ಷೇಪಣೆಯನ್ನು ಮಾಡುವುದಿಲ್ಲ. ಸರ್ಕಾರದ ಮೇಲೆ ಆಕ್ಷೇಪಣೆಯನ್ನು ಮಾಡುತ್ತೇನೆ. ಅವರು ಆಸ್ಪತ್ರೆಗಳನ್ನು ಭೇಟಿಮಾಡದ ಹೊರತು ಅಲ್ಲಿನ ಕಷ್ಟಸುಖಗಳು ತಿಳಿಯುವುದಿಲ್ಲ. ಇದಕ್ಕಾಗಿ ದಯಮಾಡಿ ಆಸ್ಪತ್ರೆಗಳಲ್ಲಿ ಕಷ್ಟಪಡುವವರ ಸ್ಥಿತಿಯನ್ನು ಗಮನಿಸಿ ಅವರಿಗೆ ಆದಷ್ಟು ತಕ್ಕ ಪರಿಹಾರಗಳನ್ನು ಮತ್ತು ಸೌಕರ್ಯಗಳನ್ನು ಒದಗಿಸುವಂತೆ ನಮ್ಮ ಸರ್ಕಾರದವರು ಉಪಕಾರಮಾಡಬೇಕೆಂದು ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ-ಅನುಸೂಚಿತ ಜಾತಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಈ ವರ್ಷದ ಬಡ್ಜೆಟ್ಟನ್ನು ಅನುಮೋದಿಸುತ್ತಾ ಸರ್ಕಾರದ ಗಮನಕ್ಕೆ ಕೆಲವು ವಿಷಯಗಳನ್ನು ತರಲಿಚ್ಛಿಸುತ್ತೇನೆ. ಸಾಧಾರಣವಾಗಿ ನಮ್ಮ ಭಾರತ ದೇಶ ಶೇಕಡ 80 ಭಾಗ ವ್ಯವಸಾಯ ದೇಶ. ಪಾಶ್ಚಾತ್ಯ ದೇಶಗಳಲ್ಲಿ ಶೇಕಡ 20 ಭಾಗ ವ್ಯವಸಾಯಮಾಡುತ್ತಿದ್ದರೂ ಕೂಡ ಉಳಿದ ಶೇಕಡ 80 ಭಾಗ ಕೈಗಾರಿಕೆಗಳನ್ನು ಅವಲಂಬಿಸಿ ತಮಗೆ ಬೇಕಾದ ಆಹಾರೋತ್ಪತ್ತಿಯನ್ನು ಒದಗಿಸಿಕೊಳ್ಳುತ್ತಾ ಇರುವುದನ್ನು ಪ್ರಪಂಚದ ಇತರ ಭಾಗಗಳಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಈಗ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ದೇಶದ ಆಡಳಿತವೆಲ್ಲಾ ನಮ್ಮ ಕೈಯಲ್ಲಿಯೇ ಇಟ್ಟುಕೊಂಡಿದ್ದರೂ, ನಮ್ಮ ದೇಶದ ವ್ಯವಸಾಯ ಉತ್ಪನ್ನದ ಸ್ಥಿತಿಗತಿ ಹೇಗಿದೆ ಎಂದರೆ, ಒಂದು ರೂಪಾಯಿಗೆ ಒಂದೂವರೆ ಸೇರು ಅಕ್ಕಿಯಾಗಿದೆ. ಇದರಿಂದ ಸಾಧಾರಣ ಜನಗಳು ಅಕ್ಕಿಯನ್ನು ಕೊಂಡುಕೊಳ್ಳುವುದಕ್ಕೆ ಬಹಳ ಕಷ್ಟವಾಗಿದೆ, ಬೆಲೆ ಜಾಸ್ತಿ, ಪದಾರ್ಥ ಕಡಮೆ. ಇದನ್ನು ನಾನು ವ್ಯವಸಾಯ ಮಂತ್ರಿಗಳಲ್ಲಿ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಸ್ವಾಮಿ, ಶೇಕಡ 80 ಭಾಗ ವ್ಯವಸಾಯವಿರುವ ದೇಶದಲ್ಲಿ ವ್ಯವಸಾಯ ಕಾರ್ಮಿಕರಿಗೆ ಸರ್ಕಾರದವರೇನು ಅಭಯ ಕೊಟ್ಟಿದ್ದಾರೆಂದರೆ ಏನೇನೂ ಇಲ್ಲ. ಗಲಾಟೆ ಮಾಡುವ ಕಾರ್ಖಾನೆ ಕಾರ್ಮಿಕರಿಗೆ ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಮತ್ತೊಂದು ಮಗದೊಂದು ಮಾಡಿ ನೂರೆಂಟು ಕಾನೂನು ಮಾಡಿ ರಕ್ಷಣೆ ಕೊಡುತ್ತಿದ್ದಾರೆಯೇ ವಿನಾ ವ್ಯವಸಾಯದಲ್ಲಿ ನಿರತರಾಗಿರುವ ಗ್ರಾಮಾಂತರ ಪ್ರದೇಶದ ಕೂಲಿಗಾರರಿಗೆ ಯಾವ ಸಹಾಯವನ್ನು ಮಾಡಿಲ್ಲ. ಹಳ್ಳಿಗಳ ಕಡೆ ಬಹಳ ಕಷ್ಟವಿದೆ. ಈ ದಿವಸ ವ್ಯವಸಾಯ ಮಾಡುವವನಿಗೆ, ಅದರಲ್ಲಿ ನಿರತರಾಗಿರುವ ಕೂಲಿಗಾರರಿಗೆ ಬಹಳ ಕಷ್ಟವಿದೆ. ಸರ್ಕಾರದವರು ಖಂಡಿತವಾಗಿಯೂ ಕೂಡ ಈ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಗ್ರಾಮಾಂತರಗಳಲ್ಲಿ ಜಮೀನಿಗೆ ಅರ್ಜಿ ಹಾಕಿದರೆ ಸಾಧಾರಣವಾಗಿ ರೆವೆನ್ಯೂ ಬೋರ್ಡ್‌ವರೆಗೆ ಬರುತ್ತದೆ. ಸಾಧಾರಣವಾಗಿ ಹರಿಜನರು ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೆ ಬರಬೇಕಾದರೇ ಎಷ್ಟೋ ಕಷ್ಟವಿದೆ. ಹಾಗಿರುವಾಗ ಈ ದಿವಸ ಒಂದು ಜಮೀನು ಮಂಜೂರಾಗಬೇಕಾದರೆ ಡೆಪ್ಯುಟಿ ಕಮೀಷನರು, ರೆವೆನ್ಯೂ ಕಮೀಷನರು, ಮಂತ್ರಿಗಳು—ಇವರೆಲ್ಲರ ಬಳಿಗೂ ಹೋಗಿ ಆಮೇಲೆ ರೆವೆನ್ಯೂ ಬೋರ್ಡಿಗೆ ಹೋಗಬೇಕಾಗುತ್ತದೆ. ಹೀಗಾದರೆ ಎಷ್ಟು ಕಾಲಾವಕಾಶ ಬೇಕಾಗುತ್ತದೆಂಬುದನ್ನು ಯೋಚನೆ ಮಾಡಬಹುದು. ಗ್ರಾಮಾಂತರಗಳಲ್ಲಿ ಜಮೀನು ಕೇಳಿದರೆ ದನಕರುಗಳು, ಪಶುಸಂಪತ್ತು ಹೆಚ್ಚಾಗಿದೆ, ಜಮೀನು ಕೊಡುವುದಕ್ಕಾಗುವುದಿಲ್ಲ ಎಂದು ವಾದಿಸುತ್ತಾರೆ, ರೆವೆನ್ಯೂ ರೂಲ್ಸ್, ರೆವಿನ್ಯೂ ಮ್ಯಾನ್ಯುಯಲ್ ಪ್ರಕಾರ ಸಾಧ್ಯವಿಲ್ಲವೆನ್ನುತ್ತಾರೆ. ಭಾರತದ ರಾಜ್ಯಾಂಗವನ್ನೇ ನಾವು ಬದಲಾಯಿಸುತ್ತಿರುವಾಗ ಈ ರೆವೆನ್ಯೂ ರೂಲ್ಸ್, ರೆಗ್ಯುಲೇಷನ್ ನೂರಾರು ವರ್ಷಗಳ ಕೆಳಗೆ ಮಾಡಿರುವುದನ್ನೇ ಈ ದಿವಸ ಕೂಡ ಮನು ಬರೆದ ಪವಿತ್ರ ಗ್ರಂಥದೋಪಾದಿಯಲ್ಲಿ ಅನುಸರಿಸುತ್ತಿರುವುದು ನ್ಯಾಯವಾದುದಲ್ಲ. ನಿಯಮಗಳನ್ನು ಸುಧಾರಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನಿಲ್ಲದೆ ಕಷ್ಟಪಡುತ್ತಿರುವ ಬಹು ಜನರಿಗೆ ಸರಿಯಾದ ರಕ್ಷಣೆಯಿಲ್ಲದಿದ್ದರೆ ಖಂಡಿತವಾಗಿಯೂ ಬಹಳ ಕಷ್ಟವಾಗುತ್ತದೆ ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಹರಿಜನರಲ್ಲಿ ಶೇಕಡ ಎಷ್ಟು ಮಂದಿ ವಿದ್ಯಾವಂತರಾಗಿದ್ದಾರೆಂಬುದನ್ನು ಮಾನ್ಯ ಸದಸ್ಯರು ಆಗಲೆ ಹೇಳಿದ್ದಾರೆ. ಅದನ್ನು ಪುನಃ ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲಿಯವರಗೆ ನಮ್ಮ ದೇಶದಲ್ಲಿ ಎಲ್ಲ ಜನರೂ ವಿದ್ಯಾವಂತರಾಗುವುದಿಲ್ಲವೋ ಅಲ್ಲಿಯವರೆಗೂ ನಮ್ಮ ದೇಶ ಮುಂದುವರಿಯುವುದಿಲ್ಲ. ದೇಶದ ಜನತೆಯಲ್ಲಿ 1/5 ಭಾಗವಿರುವ ಹರಿಜನರಲ್ಲಿ ಶೇಕಡ ಒಬ್ಬರು ಅಥವಾ ಇಬ್ಬರು ವಿದ್ಯಾವಂತರಾದರೆ ದೇಶದ ಕಷ್ಟವನ್ನರಿತು ದೊಡ್ಡ ರಾಜ್ಯಭಾರದ ಹೊರೆಯನ್ನು ಹೊರುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ? ಹರಿಜನರಿಗೆ ಉಚಿತ ಶಿಕ್ಷಣವಿದೆ, ಅನೇಕ ವಿದ್ಯಾರ್ಥಿನಿಲಯಗಳಿವೆ ಎಂದು ಹೇಳಬಹುದು. ಮೊದಲು ನಮ್ಮ ಮಾನ್ಯ ಹಣಕಾಸಿನ ಸಚಿವರು ಮಂಡಿಸಿರುವ ಆಯವ್ಯಯ ಪಟ್ಟಿಯಲ್ಲಿ ನಮಗಾಗಿ 66 ಲಕ್ಷ ರೂಪಾಯಿಗಳನ್ನೊದಗಿಸಿರುವುದನ್ನು ನೋಡಿ ಬಹಳ ಸಂತೋಷವಾಯಿತು. ಆದರೆ ವಿಚಾರ ಮಾಡಲಾಗಿ

(ಶ್ರೀ ಟಿ. ಹನುಮಯ್ಯ.)

ಅದರಲ್ಲೇ ವಿದ್ಯಾಭ್ಯಾಸ, ಬಾವಿ, ಇತರ ಉಪಕರಣಗಳು ಇವೆಲ್ಲಕ್ಕೂ ಸಹಾಯವಾಗಬೇಕೆಂದು ಗೊತ್ತಾಯಿತು. ವಿಶಾಲ ಮೈಸೂರಾಗಿ ಜನಸಂಖ್ಯೆ ಒಂದಕ್ಕೆ ಎರಡರಷ್ಟಾದರೂ ಕೂಡ ಹಳೆಯ ಮೈಸೂರಿಗೆ ಕೊಡುತ್ತಿದ್ದ 19 ಲಕ್ಷ ರೂಪಾಯಿಗಳನ್ನೇ ಹರಿಜನರ ಅಭಿವೃದ್ಧಿಗಾಗಿ, ಹೌಸಿಂಗ್ ಸ್ಕೀಮಿಗಾಗಿ ಒದಗಿಸಿದ್ದಾರೆ. 40 ಲಕ್ಷ ಪ್ರಜಾಸಂಖ್ಯೆಯಾಗಿರುವ ಹರಿಜನರಿಗೆ ಇದೇನೇನೂ ಸಾಲದು.

ಈಗ ಸಮತಾವಾದ ಸಮಾಜರಚನೆ ಮಾಡಬೇಕೆಂದಿದ್ದಾರೆ. ನಮಗೂ ಒಂದು ಹಕ್ಕುಬಾಧ್ಯತೆಯಿದೆ, ಸಾವಿರಾರು ವರ್ಷಗಳಿಂದ ನಾವೆಲ್ಲಾ ದುಡಿದು ದೇಶವನ್ನು ಕಟ್ಟಿದ್ದೇವೆ. ಈ ದಿವಸ ಸರ್ಕಾರದವರು ಖಂಡಿತವಾಗಿಯೂ ಕೂಡ ನಮಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಹರಿಜನರು ಸವರ್ಣ ಹಿಂದುಗಳಿಗೆ ಬೆನ್ನುಮೂಳೆಯಿದ್ದಹಾಗೆ ಎಂದು ಮಹಾತ್ಮ ಗಾಂಧಿಯವರು ಹೇಳಿದ್ದರು. ಈಗ ಆ ವಿಚಾರದ ಕಡೆ ಗಮನ ಕೊಟ್ಟಿದ್ದಾರೋ ಇಲ್ಲವೋ ಗೊತ್ತಾಗಿಲ್ಲ. ಅಲ್ಲದೆ ಮಹಾತ್ಮ ಗಾಂಧೀಜಿ ಹೆಸರಿನಲ್ಲಿ ರಾಜ್ಯಭಾರ ಮಾಡುತ್ತಿದ್ದಾರೆ, ಅವರ ತತ್ವ ಅನುಸರಿಸುತ್ತಿದೆ. ಮಹಾತ್ಮ ಗಾಂಧಿಯವರು ಯಾವ ಊರಿಗೆ ಹೋದರೂ ಕೂಡ ಹರಿಜನರ ಕೇರಿಗಳಿಗೇ ಹೋಗಿ ಬಿಡಾರ ಮಾಡುತ್ತಿದ್ದರು. ಯಾವಾಗ ಹಾಗೆ ಮಾಡಲು ಷುರು ಮಾಡಿದರೋ ಆಗ ಮಂತ್ರಿಗಳು, ಜಿಲ್ಲಾಧಿಕಾರಿಗಳು ಮುಂತಾದವರೆಲ್ಲರೂ ಅಲ್ಲಿಗೆ ಹೋಗಿ ಜಾಗ್ರತೆ ಹರಿಜನ ಕೇರಿಯನ್ನು ಸ್ವಚ್ಛವಾಗಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಈಗಲೂ ಕೂಡ ಮಾನ್ಯ ಸಚಿವರು ಪ್ರವಾಸ ಹೋದಾಗಲಾದರೂ ಹರಿಜನರ ಕೇರಿಗಳಿಗೆ ಭೇಟಿ ಮಾಡುವುದಾದರೆ ನಾವು ನಿಮಗೆ ಬಹಳ ಧನ್ಯವಾದಗಳನ್ನರ್ಪಿಸುತ್ತೇವೆ. ಏಕೆಂದರೆ ಈ ದಿವಸ ಹರಿಜನರ ಪರಿಸ್ಥಿತಿ ಉತ್ತಮವಾಗಿದೆಯೆ ಎಂದರೆ ಖಂಡಿತ ಇಲ್ಲ. ವೆಂದು ಹೇಳಬೇಕಾಗಿದೆ. ಈಗ ವಿಶಾಲ ಮೈಸೂರಾಯಿತು, ನಾಲ್ಕು ದಿವಸ ಸಂತೋಷ ಪಡುವ ಕಾಲ, ಜೊತೆಗೆ ಸ್ವಾತಂತ್ರ್ಯ ಬಂದಿದೆ, ಆದ್ದರಿಂದ ಹೆಚ್ಚಿನ ಸೌಲಭ್ಯ ಸಿಕ್ಕುತ್ತದೆಂಬ ನಿರೀಕ್ಷೆಯಿತ್ತು. ಸೌಲಭ್ಯವೆಂದರೆ ನಾವೇನು ಇತರರ ಆಸ್ತಿಪಾಸ್ತಿ ಅಥವಾ ಹಣ ಕೊಡಿ ಎಂದು ಕೇಳುವುದಿಲ್ಲ. ನಮ್ಮನ್ನು ಯಾವುದೋ ಕಾರಣದಿಂದ ನೀವು ಸಾವಿರಾರು ವರ್ಷಗಳಿಂದ ಭೂಗತ ಮಾಡಿದಿರಿ. ಆ ಪಾಪ ಪರಿಹಾರ ಮಾಡಿಕೊಳ್ಳುವುದಕ್ಕಾಗಿ ನಮ್ಮನ್ನು ಈಗ ಮೇಲಕ್ಕೆತ್ತಿ ಎಂದು ಪ್ರಾರ್ಥನೆ ಮಾಡುತ್ತೇನೆ. ಹಿಂದಿನ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹರಿಜನರಲ್ಲಿ ದಕ್ಷರಾರೂ ಇಲ್ಲ, ಇದ್ದರೆ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಸ್ವಾಮಿ, ಸುಮಾರು ಹತ್ತು ವರ್ಷಗಳಿಂದ ಶ್ರೀ ಚೆನ್ನಿಗರಾಮಯ್ಯನವರು ಹರಿಜನ ಮಂತ್ರಿಗಳಾಗಿ ದಕ್ಷತೆಯಿಂದ ಕೆಲಸ ಮಾಡುತ್ತಿರುವುದಕ್ಕೆ ತಾನೆ ಈ ಹೊತ್ತಿನವರೆಗೂ ಅವರನ್ನಿಟ್ಟುಕೊಂಡಿರುವುದು ಎಂದು ನಾನು ಅತಿವಿನಯದಿಂದ ಪ್ರಶ್ನೆ ಮಾಡುತ್ತೇನೆ. ಹರಿಜನರಲ್ಲಿ ದಕ್ಷತೆಯಿಲ್ಲವೆಂದೇಕೆ ಅನುಮಾನ ಪಡುತ್ತೀರೋ ಅರ್ಥವಾಗಿಲ್ಲ. ಖಂಡಿತವಾಗಿಯೂ ಅವರಲ್ಲಿ ದಕ್ಷರಿದ್ದಾರೆ, ನೀವು ಅನುಮಾನ ಪಡಬೇಕಾಗಿಲ್ಲ. ನಮಗೆ ಅಭಯ ಕೊಡುವುದಕ್ಕೆ ತಯಾರಾಗಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಸಾಧಾರಣವಾಗಿ ಹರಿಜನರ ಸಮಸ್ಯೆ ಬಹಳ ದೊಡ್ಡ ಸಮಸ್ಯೆ. ಅದು ಹರಿಜನ ಪಂಗಡದಲ್ಲಿರುವವರಿಗೆ ಅರ್ಥವಾಗುತ್ತದೆಯೇ ವಿನಾ ಇತರರಿಗೆ ಖಂಡಿತವಾಗಿಯೂ ಅರ್ಥವಾಗುವುದಿಲ್ಲ. ಮೊದಲು ಪ್ರಥಮ ಪಂಚವಾರ್ಷಿಕ ಯೋಜನೆ ಮಾಡಿದರು, ಅನಂತರ ಈಗ ದ್ವಿತೀಯ ಪಂಚವಾರ್ಷಿಕ ಯೋಜನೆ ತಯಾರಾಗಿದೆ. ಆದರೆ ಹರಿಜನರಿಗಾಗಿ ಅದರಲ್ಲಿ ಏನಾದರೂ ಅವಕಾಶ ಮಾಡಿದ್ದಾರೆಯೆ ಎಂದರೆ ಏನೇನೂ ಇಲ್ಲ. ಹರಿಜನರ ಮುಂದೆ ಅಡ್ಡಕಟ್ಟೆ ಹಾಕಿ ಮುಂದೆ ಹೋಗಲಿ ಎಂದು ಹೇಳುತ್ತಿದ್ದೀರಿ, ಖಂಡಿತ ಇದು ತಪ್ಪು. ಆರ್ಥಿಕವಾಗಿ ಸಮಾಜದಲ್ಲಿ ಮುಂದುವರಿಯುವುದಕ್ಕೆ ನಮಗೇನು ಅನುಕೂಲವಿದೆ? ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಅನುಕೂಲವಿಲ್ಲ. ಯಾರಾದರೂ ನಮ್ಮಲ್ಲಿರುವ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟರೆ ನಮಗೆ 60 ಲಕ್ಷವಲ್ಲ, ಆರು ರೂಪಾಯಿ ಸಹ ಬೇಕಾಗಿಲ್ಲ. ಗ್ರಾಮಾಂತರಗಳಲ್ಲಿ ಹರಿಜನರಿಗೆ ಬೇಕಾದ ಕೈಗಾರಿಕೆಗಳು ಬೇಕಾದಷ್ಟಿವೆ; ಚರ್ಮದ ಕೈಗಾರಿಕೆಯಿದೆ, ಅದರಿಂದ ಲಕ್ಷಾಂತರ ರೂಪಾಯಿಗಳ ಹಣ ಹೊರಗೆ ಹೋಗುತ್ತಿದೆ. ಈ ದಿವಸ ಬೆಂಗಳೂರು ಸಿಟಿ ಒಂದರಲ್ಲೇ ಸಾವಿರಾರು ಜನ ಕೆಲಸ ಮಾಡುತ್ತಾರೆ. ಆದರೆ ಈ ಕೈಗಾರಿಕೆ ಯಾರ ಕೈಲಿದೆಯೆಂಬುದನ್ನು ನೋಡಬೇಕು. ಹತ್ತು ರೂಪಾಯಿ ಬರುವ ಕೈಗಾರಿಕೆಯನ್ನಾದರೂ ಸ್ಥಾಪಿಸಿ ಅನುಕೂಲ ಪಡಿಸಿ ಹೊಟ್ಟೆ ಬಟ್ಟೆಗಾದರೂ ಸಹಾಯ ಮಾಡಬೇಕೆಂದು ಕೈಗಾರಿಕಾ ಮಂತ್ರಿಗಳಿಗೆ ಜ್ಞಾಪಿಸುತ್ತೇನೆ. ಹಿಂದಿನ ಸರ್ಕಾರ ಗಮನಕೊಟ್ಟು ವ್ಯವಸ್ಥೆ ಮಾಡಿದ್ದರಿಂದ ಈಗ 60 ಲಕ್ಷ ರೂಪಾಯಿಗಳ ಕೈಮಗ್ಗದ ಕೈಗಾರಿಕೆಗಳಿವೆ. ಈಗ ಮಂತ್ರಿಗಳು ಪವರ್‌ಲೂಂ ಕೈಗಾರಿಕೆಗೆ ಸಹಾನುಭೂತಿ ತೋರಿಸುತ್ತಿದ್ದಾರೆ, ಹಿಂದುಳಿದವರಿಗೆ ಸಹಾಯಮಾಡಿಲ್ಲ. ಎಷ್ಟೋ ವರ್ಷಗಳಿಂದ ಹೇಳುತ್ತಿದ್ದರೂ ಹರಿಜನ ಅಭಿವೃದ್ಧಿಗೆ ಆವಶ್ಯಕವಾದ ಕೈಗಾರಿಕೆಗಳನ್ನು ನಡೆಸಲು ಸಾಕಷ್ಟು ಪ್ರೋತ್ಸಾಹ ದೊರೆತಿಲ್ಲ. ಹರಿಜನರ ಅಭಿವೃದ್ಧಿಗೆ ಅತ್ಯಗತ್ಯವಾದ ಅವರಲ್ಲಿರುವ ಚರ್ಮದ ಕೈಗಾರಿಕೆ ವಗೈರೆಗೆ ಉತ್ತೇಜನಕೊಟ್ಟರೆ ಐದು ರೂಪಾಯಿ ಖರ್ಚುಮಾಡಿ 25 ರೂಪಾಯಿಗಳನ್ನು ಉತ್ಪತ್ತಿ ಮಾಡಬಹುದು; ಅವರಿಗೆ ಆ ಶಕ್ತಿಯಿದೆ. ಆದರೆ ಆ ರೀತಿ ಅವಕಾಶ ಕಲ್ಪಿಸಿಲ್ಲ.

7 P.M.

ಸರ್ಕಾರದವರು ಅದಕ್ಕೆ ಪ್ರೋತ್ಸಾಹಮಾಡಿ ಒಂದು ಫ್ಯಾಕ್ಟರಿ ಮಾಡಿ ಟ್ಯಾನಿಂಗ್ ಇಂಡಸ್ಟ್ರಿ ಅಭಿವೃದ್ಧಿ ಮಾಡಿದರೆ ಖಂಡಿತವಾಗಿಯೂ ಕೂಡ ಹರಿಜನರ ಅಭಿವೃದ್ಧಿಯಾಗುತ್ತದೆ. ಎಲ್ಲೋ ಒಂದುಕಡೆ ನಾಮಕಾವಸ್ತೆಗೆ ಒಂದು ಟ್ಯಾನಿಂಗ್ ಫ್ಯಾಕ್ಟರಿ ತೆಗೆದಿದ್ದಾರೆಂದು ಹೇಳುತ್ತೇನೆ. ಕೈಗಾರಿಕಾ ಡಿಪಾರ್ಟ್‌ಮೆಂಟಿನವರು ಈ ಫ್ಯಾಕ್ಟರಿಗಳನ್ನು ಸ್ಥಾಪನೆ ಮಾಡುವ ವಿಷಯದಲ್ಲಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತಾರೆಯೋ ಇಲ್ಲವೋ ಅಥವಾ ಯಾವ ಸ್ಥಳದಲ್ಲಿ ಇಂತಹ ಫ್ಯಾಕ್ಟರಿಗಳನ್ನು ಸ್ಥಾಪನೆ ಮಾಡಬೇಕೆನ್ನುವ ವಿಷಯ ಈ ಕೈಗಾರಿಕಾ ಡಿಪಾರ್ಟ್‌ಮೆಂಟಿನವರಿಗೆ ಗೊತ್ತಾಗುತ್ತದೆಯೋ ಇಲ್ಲವೋ ಎಂದು ನನಗೆ ಯೋಚನೆಯಾಗಿದೆ. ನಾನು ಏತಕ್ಕಾಗಿ ಈ ರೀತಿ ಹೇಳುತ್ತಿದ್ದೇನೆಂದರೆ, ಸರ್ಕಾರದವರು ಡೈರೆಕ್ಟರ್ ಆಫ್ ವಿಲೇಜ್ ಇಂಡಸ್ಟ್ರೀಸ್ ಎಂದು ನೇಮಕಮಾಡಿ 108 ಕೈಗಾರಿಕೆಗಳನ್ನು ಅವರ ವಶಕ್ಕೆ ಕೊಟ್ಟಿರುತ್ತಾರೆ. ಅವರು ಹಳ್ಳಿಗಳಿಗೆ ಹೋಗಿ ಅಲ್ಲಿ ಯಾವ ಯಾವ ಕೈಗಾರಿಕೆಗಳು ಇವೆ, ಆಯಿಲ್ ಇಂಡಸ್ಟ್ರೀಸ್ ಎಲ್ಲಿ ಪ್ರಾರಂಭಿಸಬೇಕು, ಕಾಗದದ ಇಂಡಸ್ಟ್ರೀಸ್‌ಗಳನ್ನು ಎಲ್ಲಿಗೆ ಕೊಡಬೇಕು ಎನ್ನುವುದನ್ನು ತಿಳಿದುಕೊಂಡುಬಂದ ಹೊರತು ಗೊತ್ತಾಗುವುದಿಲ್ಲ. ಇದಕ್ಕಾಗಿ ಸರ್ಕಾರದವರಿಗೆ ಲಕ್ಷಾಂತರ ರೂಪಾಯಿಗಳು ವೆಚ್ಚವಾಗುತ್ತಿವೆ. ಒಂದು ವೇಳೆ ಅವರಿಗೆ ಗೊತ್ತಾಗದೆ ಇದ್ದರೆ ಡಿಸ್ಟ್ರಿಕ್ಟಿಗೆ ಒಬ್ಬೊ

ಬ್ಬರನ್ನು ಕಳುಹಿಸಿ ಕೈಗಾರಿಕಾ ಡೈರೆಕ್ಟರ್ ಟೆಕ್ನಿಕಲ್ ಸೂಪರ್‌ವಿಜನ್ ಮಾಡಿ ಈ ಕೆಲಸವನ್ನು ಕೈಗೊಳ್ಳಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಎಲ್ಲಿಯವರೆಗೆ ಆರ್ಥಿಕ ಸಮಾನತೆ ಇರುವುದಿಲ್ಲವೋ ಅಲ್ಲಿಯವರೆಗೆ ಜನರ ಉದ್ಧಾರವಾಗುವುದಿಲ್ಲ. ನಾನು ಬರಿ ಹರಿಜನರ ಉದ್ಧಾರವನ್ನು ಹೇಳುತ್ತಾ ಇಲ್ಲ: ದೇಶದಲ್ಲಿರುವ ಎಲ್ಲಾ ಬಡಜನರಲ್ಲಿಯೂ ಆರ್ಥಿಕ ಸಮಾನತೆ ಬರಬೇಕಾದರೆ ಸರ್ಕಾರದವರು ಅದಕ್ಕೆ ಹೆಚ್ಚಾಗಿ ನಿಗಾ ಕೊಡಬೇಕಾದದ್ದು ಅಗತ್ಯವೆಂದು ನಾನು ಸರ್ಕಾರದವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಷೆಡ್ಯೂಲ್ ಕ್ಯಾಸ್ಟ್‌ಗೆ ಸೆಮಿನಾರ್ ಕೆಂಗೇರಿಯ ಗುರುಕುಲಾಶ್ರಮದಲ್ಲಿ ಮಾಡಿದ್ದರು. ಅದರಲ್ಲಿ ನಮ್ಮ ಮಾನ್ಯ ಮಂತ್ರಿಗಳೂ ಭಾಗವಹಿಸಿದ್ದರು. ನಾವು ಎಂಟು-ಹತ್ತು ದಿವಸ ಅಲ್ಲಿಯೇ ಇದ್ದು ಛಳಿಯಲ್ಲಿ ಮಲಗಿಕೊಂಡಿದ್ದು ಚರ್ಚೆ ಮಾಡಿದೆವು. ಅಲ್ಲಿಗೆ ದೊಡ್ಡ ದೊಡ್ಡ ಟೆಕ್ನಿಕಲ್ ಪ್ರೊಫೆಸರ್‌ಗಳೆಲ್ಲಾ ಬಂದು ಹರಿಜನರಿಗೆ ಸಂಬಂಧಪಟ್ಟ ಆಗುಹೋಗುಗಳನ್ನೆಲ್ಲಾ ಚರ್ಚೆಮಾಡಿ ಒಂದು ರಿಪೋರ್ಟ್ ಕಳುಹಿಸಿಕೊಟ್ಟರು. ಆ ರಿಪೋರ್ಟ್ ಎಲ್ಲಿ ಹೋಯಿತೋ ದೇವರೇ ಬಲ್ಲ. ಪ್ರಜಾಪ್ರಭುತ್ವ ದೇಶದಲ್ಲಿ ದಲಿತ ಜನಾಂಗ, ಕೆಳಗೆ ಬಿದ್ದಿರುವ ಜನಾಂಗ ಮುಂದುವರಿಯಬೇಕಾದರೆ ಸರ್ಕಾರದವರು ಹೆಚ್ಚಾಗಿ ಗಮನ ಕೊಡಬೇಕು. ಆದ್ದರಿಂದ ನಾನು ಹೇಳತಕ್ಕ ಕೆಲವು ವಿಷಯಗಳಿಗೆ ಸರ್ಕಾರದವರು ಹೆಚ್ಚಿಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಷಯ. ನಾವೇನೋ ತಿಳಿದುಕೊಂಡಿದ್ದೆವು, ತೋಟಿ ತಳವಾರರ ಸ್ಥಿತಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಎಲ್ಲಾ ಬದಲಾವಣೆಯಾಗುತ್ತದೆಯೆಂದು. ಆದರೆ ಕಾಂಗ್ರೆಸ್ ಸರ್ಕಾರ ಬಂದು ಹತ್ತು ವರ್ಷಗಳಾದರೂ ಏನೂ ಆಗಲಿಲ್ಲ. ಶ್ಯಾನುಭೋಗರಿಗೆ, ಪಟೇಲರಿಗೆಲ್ಲಾ ಪೋಟಿಗೆ ಹೆಚ್ಚಿಸಿದರು. "ಏ" ಎಂದರೆ ಹರಿಜನರು ಬರಬೇಕು, ಎಲ್ಲಾ ಕೆಲಸಗಳಿಗೂ ಹರಿಜನರು ಬೇಕು, ತೋಟಿ ತಳವಾರರು ಹುಮ್ಮಸ್ಸಿನಿಂದ ಹಳ್ಳಿಯವರಿಗೆ ಕೆಲಸ ಮಾಡಿಕೊಟ್ಟು ಹೊಟ್ಟೆಗೆ ಹಿಟ್ಟಿಲ್ಲದೆ ಮೈಗೆ ಬಟ್ಟೆಯಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಪಟೇಲರಿಗೆ ಮತ್ತು ಶ್ಯಾನುಭೋಗರಿಗೆ ಪೋಟಿಗೆ ಹೆಚ್ಚಿಸಿ ತೋಟಿ ತಳವಾರರಿಗೆ ಏನೂ ಇಲ್ಲದೆ, ಪುಗಸಟ್ಟೆ ಕೆಲಸ ಮಾಡಿ ಎಂದರೆ ಇದು ಯಾವ ಧರ್ಮ ಸ್ವಾಮಿ ? ಸರ್ಕಾರದವರು ಇದನ್ನೆಲ್ಲಾ ಪರಿಶೀಲನೆ ಮಾಡಿ ಇದಕ್ಕೆ ಹೆಚ್ಚಿಗೆ ಗಮನ ಕೊಡಬೇಕೆಂದು ತಮ್ಮ ಮೂಲಕ ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

Sri B. BASAVALINGAPPA (Bangalore South—Scheduled Castes).—Mr. Speaker, Sir, I rise to support the Budget presented by the Hon'ble Minister for Finance. The absence of fresh tax in the Budget is like a silver line in the cloud. We are now going through the plan period. The people expected that they would be shouldered with the burden of new taxes. But to the great credit of the Hon'ble Minister for Finance, the Budget relieves the so-called burden. The people now receive the Budget with a sigh of relief. Sir, I do not want to touch the points covered by the Hon'ble Members of this House. I am not satisfied with the procedure adopted in preparing the Budget. The actuals for the previous years should have been made available to us. It would have made us understand what our position was and is. In its absence we do not know where we are, what were the budgetary provisions last year and the year before last. Therefore, I suggest that hereafter while preparing the Budget, the actuals of the previous year must be provided for.

Before going to other items of the Budget, Sir, I wish to refer to the item relating to Scheduled Castes. The Scheduled Castes, as the Hon'ble Members are well aware, have been subject to age-long tyranny and social insult. They are subject to the economic handicaps. The dreary spectacle of these persons who have been subject to these insults deserve special consideration at the hands of the Government as in the case of refugees who have been coming from outside India. Well, Sir, the Government have been paying the utmost attention to the solution of the problems of refugees. They are spending crores and crores of rupees, and acquiring large extents of land to settle them and resettle them. The problem is almost settled. The framers of the Constitution, Sir, have made provision for reservation of seats for Scheduled Castes in the Legislative Assemblies under article 334 for a period of ten years. We are now coming to the close of the concession period. They have also made provision under article 46 of the Constitution for the economic betterment of these classes. I submit, Sir, what is the plan and programme from the day of the inception of the Constitution that the Government have adopted to ameliorate the condition of the Scheduled Castes? As we are well aware, their economic conditions are deplorable; the social insults have been perpetuated; and we do not know where we are even at the close of this concession period. I submit, Sir, that there are 69 communities among the Scheduled

(SRI B. BASAVALINGAPPA.)

Castes as per the Constitution (Scheduled Castes) Order 1957. There are 19 Districts in the Mysore State. And if we only look at the budgetary provision, we see only Rs. 19 lakhs provided for ameliorating the conditions of all these persons. The same amount had been provided for in the old Mysore State also. As the House is well aware, there are about 40 lakhs of Scheduled Castes in the Karnataka State and if you only divide these Rs. 19 lakhs, it will only be less than 8 annas per head. How can we by this allotment improve the lot of the Scheduled Castes? I expect the Government to look into this. They have also generally made provision in the Budget under education; provision had been made for drinking water wells, takkavi loans, cottage industries, etc.,

About Rs. 16 crores have been spent on industries and no amount out of these items is spent for these unfortunate people. In addition to that, further amount is sought to be spent on industries out of the amount provided for the amelioration of the Scheduled Castes. Each department seems to be independent of the other Department in this huge task. The amelioration of the conditions of the Scheduled Castes that we want to achieve is an all round development and progress. It is not merely economical, educational, political or social development, but it is a conglomeration of all these branches. There is a Special Officer appointed for the amelioration of the conditions of the Scheduled Castes. If a person of the Scheduled Castes goes to a particular department for some work, he is directed by that department to go to the Special Officer who is helpless. At this rate it will not be possible to make any progress. Each department must try its best to ameliorate the conditions of the Scheduled Castes as far as it lies within its functions. Sample compliance of the Constitutional provision will not solve the real problem, but an earnest attempt must be made to solve it. In this connection I am reminded of an utterance of a Negro in America who is still more subjected to age-long tyranny and exploitation. This is what he said in despair:

"Long had I grieved at what
I deemed abuse
But I am as grain within the mill,
If so, thou must crush me for Thy
use,
Grind on, oh, patient God and
do thy will."

I am not desperate. I do not go to that extent and say that I am in despair. The Constitution has guaranteed us certain fundamental rights. My appeal to Government is to pay proper attention to those guarantees in the interest of the amelioration of the conditions of the Scheduled Castes, with purpose, sincerety and stout heart.

The members of the Scheduled Castes, ever since they became members of this House, have been demanding fair and just representation to them in all bodies of Government. We wanted representation on the Public Service Commission. That has not been given to us. The Public Service Commission was constituted in the year 1951. From that date no direct recruitment of Scheduled Castes has been made to Gazetted posts. The Government order is there to reserve seats for Scheduled Castes as per article 335 of the Constitution. Even then they have not made any direct recruitment of Scheduled Castes to the gazetted services except in Engineering and Medical departments. As a result of that they do not have fair representation in services, especially in the Gazetted cadre. If direct recruitment had been made, the Scheduled Castes would have got fair representation. Government have recruited some Scheduled Castes in the Engineering and the Medical Departments. The Government have passed orders for ranking them as per rotation prescribed in the notification of the Public Service Commission dated 13th June 1955. According to that notification, the ranking of the Scheduled Castes is 1 : 7 : 13. Now what the Public Service Commission has done is that they have placed the names of the

Scheduled Caste candidates at the bottom of the list. This is ununderstandable. Why are they not following the orders? Therefore, my humble submission is that the Scheduled Castes must be given proper representation in the Public Service Commission.

Then, Sir, the Hon'ble Minister for Local Self-Government said that in order to increase the provision of Rs. 19 lakhs for housing scheme of the Scheduled Castes, the sanction of the Planning Commission was necessary. I would submit that he has been in office since November 1956 and he knew what was required to meet the demand for the entire Mysore State. He knew that the State would be enlarged. And therefore he could have taken sufficient precaution and got the sanction of the Planning Commission in time, keeping in view the short interval of the constitutional period lying ahead.

Then, Sir, several laws have been passed for the amelioration of the conditions of the Scheduled Castes. By the enactment of the Untouchability Act of 1956 any person practising untouchability shall be published. But I should say that even today the police do not know whether such an Act exists on the statute book and this Act is not being implemented. When I was on my election tours, I was also subjected to discrimination. If this could be the treatment meted out to an educated man like me, we can easily imgaine what is the fate of ignorant, poor Scheduled Castes villagers. Therefore Government must take care to see that the laws are implemented properly. The period of concession to the Scheduled Castes under the Constitution would be over by 30th June 1960. Government should take early steps to solve the problem of the Scheduled Castes as they have solved the problem of the refugees, with determination to end the evil.

I find that Government have appointed administrative committee to prepare uniform laws for the entire State. I have been keeping a watchful eye on the laws passed since 1947. I find that the Drafting Department of Government is not efficient. There is a lot of inconsistency in the rules and laws framed by the Drafting Department. Drafting requires certain technique and a certain amount of specialisation. The officer in-charge of drafting does not seem to be endowed with the technique needed for drafting laws. This is evident from the number of amendments brought in to amend the existing laws and rules from time to time. Therefore, my humble suggestion to Government is to indent on highly specialised persons to draft the laws and rules.

As regards establishment, large amounts have been spent. The officers born and bred up in a particular District have been put in-charge of the said District. As a result, corruption, nepotism and favourtism are the natural consequences. Therefore my suggestion is that either in the Police Department or in the P.W.D. or in the Revenue Departments, the officers and officials should be transferred to different areas. Officers should not be kept in the same District where they were born.

I am highly thankful to the Chair for having given me this opportunity to speak.

Business of the House.

MR. SPEAKER.—Before we rise for the day, I would like to announce that we are going to discuss the Budget in a general way for one more day and chances will be given to those who could not be called upon to speak today or during the previous days. Tomorrow we will take up legislative business, *i.e.*, Bills. I propose that we meet tomorrow at 12 NOON. After all, there is a proposal that the Assembly should be adjourned as early as possible. Tomorrow and the day after we will take up only the Bills and try to pass them and in case it cannot be done by that time, *i.e.*, by Saturday, we may sit on Sunday also and finish the work. We would adjourn for about three weeks afterwards.

SRI K. PUTTASWAMY.—We have already planned for Sunday. Therefore I would request that our programme for that day may not be disturbed by